ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 21 ಸಂಚಿಕೆ 39 40 ಸೆಪ್ಟೆಂಬರ್ 28 -ಅಕ್ಟೋಬರ್ 4, 1998 ರೂ. 2.00




ಬಿ.ಜೆ.ಪಿ. ಸರಕಾರದ ಸರ್ವಾಧಿಕಾರಶಾಹಿ - ಪ್ರಜಾಪ್ರಭುತ್ವ ಮತ್ತು ಒಕ್ಕೂಟ ತತ್ವದ ಮೇಲೆ ಆಕ್ರಮಣ

ಸಪ್ಟೆಂಬರ್ 25-ಬಿಹಾರದಲ್ಲಿ ರಾಷ್ಟ್ರಪತಿ ಆಳ್ವಿಕೆಗೆ ವಿರುದ್ಧ ದೇಶಾದ್ಯಂತ ಪ್ರತಿಭಟನಾ ಕಾರ್ಯಾಚರಣೆ

ಸಪ್ಟೆಂಬರ್ ೨೨ ರಂದು ಬಿ.ಜೆ.ಪಿ. ನೇತೃತ್ವದ ಕೇಂದ್ರ ಸರಕಾರ ತನ್ನ ಪ್ರಜಾಪ್ರಭುತ್ವ-ವಿರೋಧಿ ಸರ್ವಾಧಿಕಾರಿಶಾಹಿ ಸ್ವರೂಪವನ್ನು ಸಂಪೂರ್ಣ ಬಯಲು ಮಾಡಿಕೊಂಡಿತು. ಬಿಹಾರ ರಾಜ್ಯ ಸರಕಾರವನ್ನು ವಜಾ ಮಾಡಿ ರಾಷ್ಟ್ರಪತಿ ಆಳ್ವಿಕೆಯನ್ನು ಹೇರುವ ಶಿಫಾರಸನ್ನು ಅತ್ಯಂತ ನಿರ್ಲಜ್ಜೆಯಿಂದ ಅದು ರಾಷ್ಟ್ರಪತಿಗಳಿಗೆ ತಲುಪಿಸಿಯೇ ಬಿಟ್ಟಿತು. ಇದು ಪ್ರಜಾಪ್ರಭುತ್ವದ ಮೇಲೆ, ನಮ್ಮ ಒಕ್ಕೂಟ ವ್ಯವಸ್ಥೆಯ ಮೇಲೆ ಒಂದು ಒರಟು ಹಲ್ಲೆ ಎಂದು ಸಿ.ಪಿ.ಐ.(ಎಂ) ಪೊಲಿಟ್ ಬ್ಯೂರೋ ಬಲವಾಗಿ ಖಂಡಿಸಿದೆ. ಇದು ರಾಜ್ಯಗಳ ಹಕ್ಕುಗಳ ಮೇಲೊಂದು ಧಾಳಿ ಎಂದೂ ಅದು ಬಲವಾಗಿ ಪ್ರತಿಭಟಿಸಿದೆ.

ಬಿಹಾರದ ರಾಜ್ಯಪಾಲರ ನೆರವಿನಿಂದ ವಾಜಪೇಯಿ ಸರಕಾರ 356 ಕಲಮನ್ನು ಅತ್ಯಂತ ಸಿನಿಕತನದಿಂದ ದುರುಪಯೋಗಪಡಿಸಿಕೊಂಡಿದೆ ಎಂದಿರುವ ಸಿ.ಪಿ.ಐ.(ಎಂ) ಪೊಲಿಟ್‌ಬ್ಯೂರೋ ಆರ್.ಎಸ್.ಎಸ್.ನ ಒಬ್ಬ ಪ್ರಮುಖ ಮುಖಂಡರಾಗಿರುವ ಈ ರಾಜ್ಯಪಾಲರು ಎಲ್ಲಾ ಸತ್ಸಂಪ್ರದಾಯಗಳನ್ನು ಮುರಿದು ಬಿಹಾರ ಸರಕಾರವನ್ನು ವಜಾ ಮಾಡುವ ತನ್ನ ಆಶಯವನ್ನು ಸಾರ್ವಜನಿಕವಾಗಿಯೇ ವ್ಯಕ್ತಪಡಿಸಿದ್ದಾರೆ ಎಂಬುದನ್ನು ನೆನಪಿಸಿದೆ. ಇದಕ್ಕೆ ಮೊದಲು ಬಿಹಾರ ಜನತೆ ಅಭೂತಪೂರ್ವ ಪ್ರವಾಹಗಳಿಂದ ನರಳಾಡುತಿದ್ದಾಗ ಆ ಬಗ್ಗೆ ಏನೂ ಮಾಡದೆ ದೇಶದ ಪ್ರಧಾನ ಮಂತ್ರಿಗಳು ಮತ್ತು ಗೃಹಮಂತ್ರಿಗಳು ಬಿಹಾರ ಸರಕಾರದ ವಜಾ ಸನ್ನಿಹಿತವಾಗಿದೆ ಎಂದು ಹೇಳಿಕೆಗಳನ್ನು ನೀಡುತ್ತಾ ತಿರುಗಾಡುತಿದ್ದರು. ಆ ಮೂಲಕ ಬಿಹಾರದ ಜನತೆಯ ಹಿತಾಸಕ್ತಿಗಳಿಗಿಂತ, ಸಂವಿಧಾನದ ಪ್ರಜಾಪ್ರಭುತ್ವ ಅಂಶಕ್ಕಿಂತ ತನ್ನ ಸಮ್ಮಿಶ್ರ ರಾಜಕೀಯದ ಸಂಕುಚಿತ ಹಿತಾಸಕ್ತಿಗಳೇ ತಮಗೆ ಮುಖ್ಯ ಎಂಬುದನ್ನು ಅವರು ಸಾಬೀತು ಪಡಿಸಿದ್ದಾರೆ. ಬಿಹಾರದ ವಿಧಾನ ಸಭೆ ಸರಕಾರದ ಬಹುಮತ ಪರೀಕ್ಷೆಯ ತನ್ನ ಹಕ್ಕನ್ನು ಚಲಾಯಿಸುವುದನ್ನು ತಪ್ಪಿಸುವ ಈ ಪ್ರಯತ್ನಗಳು ಪ್ರಜಾಪ್ರಭುತ್ವದ ಮೇಲೆ ಅತ್ಯಂತ ಲಜ್ಜೆಗೆಟ್ಟ ಅತ್ಯಾಚಾರ ಎಂದು ಸಪ್ಟೆಂಬರ್ 19 ರಂದು ನೀಡಿದ ಹೇಳಿಕೆಯಲ್ಲಿ ಸಿ.ಪಿ.ಐ(ಎಂ) ಪೊಲಿಟ್ ಬ್ಯೂರೋ ಖಂಡಿಸಿತ್ತು.

ದೇಶದ ಜನತೆ ಪ್ರಜಾಪ್ರಭುತ್ವದ ಮೇಲೆ ಈ ಹಲ್ಲೆಯನ್ನು ಸಹಿಸುವುದಿಲ್ಲ ಎಂಬ ಸಿಪಿಐ(ಎಂ) ಪೊಲಿಟ್ ಬ್ಯೂರೋದ ಅಭಿಪ್ರಾಯ ಸರಿಯೆಂದು ಈಗ ಸ್ಪಷ್ಟವಾಗಿದೆ. ಸಪ್ಟೆಂಬರ್ 23 ರಂದು 'ಬಿಹಾರ ಬಂದ್' ಗೆ ವ್ಯಾಪಕ ಸ್ಪಂದನ ದೊರೆತಿದೆ. ಬಿಹಾರ ವಿಧಾನಸಭೆ ರಾಜ್ಯಪಾಲರನ್ನು ಹಿಂದಕ್ಕೆ ಕರೆಸಿಕೊಳ್ಳಬೇಕೆಂಬ ನಿರ್ಣಯ ಅಂಗೀಕರಿಸಿದೆ. ಅದೇ ದಿನ ಕಾಂಗ್ರೆಸ್ಸೂ ಸೇರಿದಂತೆ ಎಲ್ಲಾ ಪ್ರತಿಪಕ್ಷಗಳೂ ಒಂದಾಗಿ ಸಪ್ಟೆಂಬರ್ 25 ರಂದು ಅಖಿಲ ಭಾರತ ಪ್ರತಿಭಟನಾ ಕಾರ್ಯಾಚರಣೆ ನಡೆಸಲು ನಿರ್ಧರಿಸಿದವು. ಕಾಂಗ್ರೆಸ್, ರಾಷ್ಟ್ರೀಯ ಲೋಕತಾಂತ್ರಿಕ ಮೋರ್ಚಾ ಹಾಗೂ ಎಡ ಪಕ್ಷಗಳ ಮುಖಂಡರು ಸಭೆ ಸೇರಿ ಈ ನಿರ್ಧಾರಕ್ಕೆ ಬಂದರು. *"ಇದು ಸಂವಿಧಾನದ 356ನೇ ಕಲಮಿನ ಅತ್ಯಂತ ನಗ್ನ ದುರುಪಯೋಗ. ಭಾರತೀಯ ಸಂವಿಧಾನದ ಮೇಲೆ ಒಂದು ದೊಡ್ಡ ಸರ್ವಾಧಿಕಾರಶಾಹೀ ಹಲ್ಲೆ. ಈ ನಿರ್ಣಯ ಕೈಗೊಳ್ಳುವ ಕೆಲವೇ ಗಂಟೆಗಳ ಮೊದಲು ಬಿಹಾರ ವಿಧಾನ ಸಭೆ ದೊಡ್ಡ ಬಹುಮತದಿಂದ ರಾಬ್ಡಿದೇವಿ ಸರಕಾರದ ಮೇಲೆ ತನ್ನ ವಿಶ್ವಾಸವನ್ನು ವ್ಯಕ್ತಪಡಿಸಿತ್ತು ಎಂಬ ಸಂಗತಿ ಈ ಹಲ್ಲೆಯ ಹಿಂದಿರುವ ನಾಚಿಕೆಗೇಡಿತನವನ್ನು ತೋರಿಸುತ್ತದೆ. ಇಂತಹ ಹಲ್ಲೆಗಳನ್ನು ಸಹಿಸಲು ಸಾಧ್ಯವಿಲ್ಲ"*ಎಂದಿರುವ ಈ ಮುಖಂಡರ ಜಂಟಿ ಹೇಳಿಕೆ 356ನೇ ಕಲಮಿನ ದುರುಪಯೋಗವನ್ನು ವಿರೋಧಿಸುತ್ತಾ ಬಂದಿರುವ ಇತರ ಎಲ್ಲಾ ಪಕ್ಷಗಳೂ ಈ ಪ್ರತಿಭಟನಾ ಕಾರ್ಯಾಚರಣೆಯಲ್ಲಿ ಸೇರಿಕೊಳ್ಳಬೇಕೆಂದು ಮನವಿ ಮಾಡಿತು.



ಕೇಂದ್ರ ಸರಕಾರದ ಈ ಶಿಫಾರಸನ್ನು ಚರ್ಚಿಸಲು ತಕ್ಷಣವೇ ಸಂಸತ್ತಿನ ತುರ್ತು ಅಧಿವೇಶನ ಕರೆಯಬೇಕು ಎಂದೂ ಈ ಮುಖಂಡರು ಆಗ್ರಹಪಡಿಸಿದ್ದಾರೆ. ಬಿ.ಜೆಪಿ. ನೇತೃತ್ವದ ಸಮ್ಮಿಶ್ರ ಕೂಟದ ಹಲವು ಪಕ್ಷಗಳೂ ಸರಕಾರದ ಈ ಶಿಫಾರಸನ್ನು ವಿರೋಧಿಸಿರುವ ಹಿನ್ನೆಲೆಯಲ್ಲಿ ಪ್ರಜಾಪ್ರಭುತ್ವದಲ್ಲಿ ನಿಜವಾಗಿಯೂ ವಿಶ್ವಾಸವಿದ್ದರೆ ಬಿ.ಜೆಪಿ. ಕೂಡಲೇ ಸಂಸತ್ತಿನ ಅಧಿವೇಶನ ಕರೆಯಬೇಕು ಎಂದು ಸಿ.ಪಿ.ಐ.(ಎಂ) ಪ್ರಧಾನ ಕಾರ್ಯದರ್ಶಿ ಸುರ್ಜಿತ್‌ರವರು ಒತ್ತಿ ಹೇಳಿದ್ದಾರೆ. ಈ ಮೊದಲು ನಾಲ್ಕು ಎಡಪಕ್ಷಗಳ ಮುಖಂಡರು ರಾಷ್ಟ್ರಪತಿಗಳನ್ನು ಭೇಟಿ ಮಾಡಿ ಕೇಂದ್ರ ಸರಕಾರದ ಶಿಫಾರಸನ್ನು ಹಿಂದಕ್ಕೆ ಕಳಿಸಬೇಕು ಎಂದು ಆಗ್ರಹ ಪಡಿಸಿದರು.

ರಾಜ್ಯಾದ್ಯಂತ ಪ್ರತಿಭಟನೆ

ಸಿ.ಪಿ.ಐ.(ಎಂ) ಹಾಗೂ ಸಿ.ಪಿ.ಐ.ನ ರಾಜ್ಯ ಘಟಕಗಳೂ ಜಂಟಿ ಹೇಳಿಕೆಯೊಂದರಲ್ಲಿ ಬಿ.ಜೆಪಿ. ಸರಕಾರದ ಈ ಶಿಫಾರಸನ್ನು ಬಲವಾಗಿ ಖಂಡಿಸುತ್ತಾ "ಕರ್ನಾಟಕದ ಜನತೆ ಅನೇಕ ಬಾರಿ ಸರಕಾರಗಳ ವಜಾಕ್ಕೆ ಒಳಗಾಗಿ ತಮ್ಮದೇ ಅನುಭವದ ಆಧಾರದ ಮೇಲೆ 356ನೇ ವಿಧಿಯ ಬಳಕೆಯನ್ನು ವಿರೋಧಿಸಿದ್ದಾರೆ. ಹಿಂದೆ ಆಂಧ್ರಪ್ರದೇಶದ ಎನ್.ಟಿ.ಆರ್. ಸರ್ಕಾರ ವಜಾ ಆದಾಗ ಇಡೀ ರಾಜ್ಯ ಅದಕ್ಕೆ ಪ್ರತಿಸ್ಪಂದಿಸಿತು ಎಂಬುದನ್ನು ನೆನಪಿಸಿಕೊಳ್ಳಬೇಕು" ಎನ್ನುತಾ 356ನೇ ಕಲಮಿನ ದುರ್ಬಳಕೆಯನ್ನು ವಿರೋಧಿಸುವ ಎಲ್ಲಾ ಪಕ್ಷಗಳೂ ಈ ಪ್ರತಿಭಟನೆಯಲ್ಲಿ ಸೇರಿಕೊಳ್ಳಬೇಕು ಎಂದು ಕರೆ ನೀಡಿದ್ದವು.

ಈ ಕರೆಗೆ ಓಗೊಟ್ಟು ರಾಜ್ಯಾದ್ಯಂತ ಸಪ್ಟೆಂಬರ್ 25ರಂದು ವಿವಿಧ ರೀತಿಗಳ ಪ್ರತಿಭಟನಾ ಕಾರ್ಯಾಚರಣೆಗಳನ್ನು ನಡೆಸಿದ ವರದಿಗಳು ಬರುತ್ತಿವೆ. ಕೋಲಾರದಲ್ಲಿ ಪ್ರತಿಭಟನಾ ಮೆರವಣಿಗೆ ಮತ್ತು ಸಭೆ ನಡೆಯಿತು. ಮಂಗಳೂರಿನಲ್ಲಿ ನೂರಾರು ಮಂದಿ ಈ ಪ್ರತಿಭಟನಾ ಕಾರ್ಯಾಚರಣೆಯಲ್ಲಿ ಪಾಲ್ಗೊಂಡರು. ಗುಲ್ಬರ್ಗಾದಲ್ಲಿ ಬಿ.ಜೆ.ಪಿ. ಸರಕಾರದ ಪ್ರಜಾಪ್ರಭುತ್ವ-ವಿರೋಧಿ ನಿಲುವನ್ನು ವಿರೋಧಿಸುವ ಪ್ರತೀಕವಾಗಿ ರೈಲು ತಡೆ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು. ಬೆಂಗಳೂರಿನಲ್ಲಿ ಪ್ರತಿಭಟನಾ ಮೆರವಣಿಗೆಯ ನಂತರ ನಡೆದ ಸಭೆಯನ್ನುದ್ದೇಶಿ ಸಿ.ಪಿ.ಐ(ಎಂ) ಶಾಸಕ ಜಿ.ವಿ. ಶ್ರೀರಾಮರೆಡ್ಡಿಯವರು ಮಾತನಾಡಿದರು. ವಾಜಪೇಯಿ ಸರಕಾರ ಶಿಫಾರಸನ್ನು ಹಿಂದಕ್ಕೆ ಕಳಿಸಬೇಕು ಎಂಬ ಮನವಿಯನ್ನು ಸಭೆಯಿಂದ ರಾಷ್ಟ್ರಪತಿಗಳಿಗೆ ಫ್ಯಾಕ್ಸ್ ಮೂಲಕ ಕಳಿಸಲು ನಿರ್ಧರಿಸಲಾಯಿತು. ದೇಶದ ಇತರೆಡೆಗಳಿಂದಲೂ ಬಿ.ಜೆ.ಪಿ. ಸರಕಾರದ ಈ ಕ್ರಮದ ವಿರುದ್ಧ ವ್ಯಾಪಕ ಪ್ರತಿಭಟನೆಗಳು ನಡೆದ ವರದಿಗಳು ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಬರುತ್ತಾ ಇವೆ.

ರಾಷ್ಟ್ರಪತಿಗಳು ಕೇಂದ್ರ ಸರಕಾರದ ಶಿಫಾರಸನ್ನು ಮರುಪರಿಶೀಲನೆಗೆ ಹಿಂದಿರುಗಿಸಿದ್ದಾರೆ ಎಂಬ ಸುದ್ದಿಯೂ ಈಗ ಬಂದಿದೆ. ಬಿಹಾರದಲ್ಲಿ ಸಾಂವಿಧಾನಿಕ ಯಂತ್ರ ಮುರಿದುಬಿದ್ದಂತಹ ಪರಿಸ್ಥಿತಿ ನಿರ್ಮಾಣವಾಗಿಲ್ಲ ಎಂದು ಅವರು ಅಭಿಪ್ರಾಯ ಪಟ್ಟಿರುವುದಾಗಿ ತಿಳಿದು ಬಂದಿದೆ. ಇದು ಪ್ರಜಾಪ್ರಭುತ್ವವಾದಿಗಳಿಗೆ ಸಂತಸ ತಂದಿರುವ ಬೆಳವಣಿಗೆ. ಆದರೆ ಪ್ರಜಾಪ್ರಭುತ್ವವಾದೀ ಶಕ್ತಿಗಳು ಇಷ್ಟಕ್ಕೇ ಸುಮ್ಮನಾಗುವಂತಿಲ್ಲ. ಏಕೆಂದರೆ ಕೇಂದ್ರ ಮಂತ್ರಿಯೊಬ್ಬರು ಶಿಫಾರಸನ್ನು ಹಿಂದಕ್ಕೆ ಕಳಿಸಿದರೆ ಅದನ್ನು ಮತ್ತೆ ಸಲ್ಲಿಸಲಾಗುವುದು ಎಂದು ಮೊದಲೇ ಬೆದರಿಸಿದ್ದರು. ಈಗ ಗೃಹಮಂತ್ರಿಗಳೂ ಅದೇ ಅರ್ಥ ಬರುವಂತೆ ಮಾತಾಡಿದ್ದಾರೆ. ದೇಶವನ್ನೀಗ ನಿಜವಾಗಿ ಆಳುತ್ತಿರುವ ಪಕ್ಷ ಪ್ರಜಾಪ್ರಭುತ್ವ ವಿಧಿ-ವಿಧಾನಗಳಂತೆ ನಡೆದುಕೊಳ್ಳುತ್ತದೆ ಎಂದು ಇನ್ನು ಯಾರೂ ಭ್ರಮೆಯಿಟ್ಟು ಕೊಳ್ಳುವಂತಿಲ್ಲ. ಆದರ ಆಕ್ರಮಣಗಳಿಗೆ ಪ್ರತಿ ಸವಾಲೊಡ್ಡಲು ಸಿದ್ಧವಾಗಬೇಕಾಗಿದೆ.

ಮಾತನಾಡುವುದು ಮುಗಿದಿತ್ತು ಎಂದು ಹೇಳಿದವರು ಯಾರು?

ಎಲ್ಲರೂ ಹೇಳಿದರು
ಸಮುದ್ರ ಯಾರಿಗೂ ಕಾಯುವುದಿಲ್ಲ
ಬರುವವರನ್ನು ಒಟ್ಟಿಗೇ ಕರೆದೊಯ್ಯುತ್ತದೆ
ಒಲ್ಲೆ ಎಂದವರನ್ನು ದಡಕ್ಕೆ ಎಸೆಯುತ್ತದೆ
ಆದರೆ ನೀವು ಕಾಮ್ರೇಡ್,
ಸಾಗರಕ್ಕಿದ್ದ ಅರ್ಥವನ್ನು ಬದಲಿಸಿದಿರಿ
ಬಂದವರನ್ನೂ ಕರೆದೊಯ್ದಿರಿ
ಒಲ್ಲೆ ಎಂದವರಿಗೂ ಕಾದು
ಹೆಗಲ ಮೇಲೆ ಕೈಹಾಕಿ
ಜೊತೆ ಜೊತೆಗೇ
ಸಮುದ್ರ ನಡೆದ ಉದ್ದಕ್ಕೂ ಕರೆದೊಯ್ದಿರಿ

ಎಷ್ಟು ಜನ ಕಣ್ಣೀರು ಒರೆಸಿಕೊಂಡರು
ಕಾಮ್ರೇಡ್ ನೀವು ಹೆಗಲ ಮೇಲೆ ಕೈಹಾಕಿದಾಗ
ಎಷ್ಟು ಜನ ಬಿಕ್ಕಿದರು
ಇಷ್ಟು ದಿನ ಯಾರಿಗೂ ಹೇಳಲಾಗದೆ
ಉಳಿಸಿಕೊಂಡ ಮಾತುಗಳನ್ನು
ನಿಮ್ಮ ಮುಂದೆ ಸುರಿದು

ಪ್ರತಿಯೊಬ್ಬರ ಎದೆಗೂ ಒಂದು
ಕದವಿರುತ್ತದೆ ಎಂದು ಹೇಗೆ
ಕಂಡುಕೊಂಡಿರಿ ನೀವು
ಯಾರಿಗೂ ಹೇಳದೆ ಬಂದುಬಿಟ್ಟಿರಿ
ಬಾಗಿಲಿಗೆ
ಒಮ್ಮೆ ಬಂದ ನಿಮಗೆ ಮತ್ತೆ
ಯಾರಾದರೂ ಬಾಗಿಲು ಮುಚ್ಚಿದರೇ ಹೇಳಿ?

ಎಲ್ಲರೊಳಗೂ ಒಂದು ಹಾರುವ ರೆಕ್ಕೆಯಿದೆ
ಎಂದು ನಿಮಗೆ ತಿಳಿಸಿದವರು ಯಾರು?
ನಿಮ್ಮ ಒಂದು ನಗೆ
ಆ ರೆಕ್ಕೆಗಳಿಗೆ ಹಾರುವ ತಾಕತ್ತು ಕೊಡುತ್ತದೆ
ಎಂದು ಹೇಳಿದ್ದು ಯಾರು?
ಎಷ್ಟೊಂದು ಹಕ್ಕಿಗಳು ಹಾರುತ್ತಿವೆ
ನೋಡಿ ಮುಗಿಲಿನಲ್ಲಿ


ಯಾರು ಹೇಳಿದರು ಕಾಮ್ರೇಡ್
ನಿಮ್ಮೊಡನೆ ಮಾತನಾಡುವುದು
ಮುಗಿದಿತ್ತು ಎಂದು?
ಯಾಕಿಷ್ಟು ಅವಸರ ಮಾಡಿದಿರಿ
ಎದೆಯ ಬಾಗಿಲು ಕಂಡವರು ನೀವು
ಕಾದು ಕುಳಿತಿದ್ದವರನ್ನು ಮರೆತಿರೇಕೆ?

ಹೌದು ಕಾಮ್ರೇಡ್,
ಇಗೋ ಇಲ್ಲಿ ನೋಡಿ
ಕುಡುಗೋಲು ಸುತ್ತಿಗೆಯ ಕೆಳಗೆ
ಎಷ್ಟೊಂದು ಜೀವಗಳು
ನಿಮಗಾಗಿ ಕಾದಿದ್ದಾವೆ
ಕಣ್ಣಲ್ಲಿ ಬೆಳಕು ಹೊತ್ತು

ಪ್ರತೀ ದಿನವೂ ಕಣ್ಣೀರು ತೊಡೆದವರು ನೀವು
ಯಾಕೆ ಹೊರಟುಬಿಟ್ಟಿರಿ ಹೀಗೆ
ಎಲ್ಲರ ಕಣ್ಣೊಳಗೆ ನೀರು ತುಂಬಿ

- ಜಿ.ಎನ್. ಮೋಹನ್

ವಾರದ ವ್ಯಂಗ್ಯ ಚಿತ್ರ 'ಹಿಂದೂ'ನಲ್ಲಿ ಸುರೇಂದ್ರನ್



ಇತಿಹಾಸದ ಪುಟಗಳಿಂದ


ಹೈದರಾಬಾದ್ ನಿಜಾಮನ ವಿರುದ್ಧ ಹೋರಾಟದಲ್ಲಿ ಕಮ್ಯುನಿಸ್ಟರ ಪಾತ್ರ

ಎನ್.ಕೆ.ಉಪಾಧ್ಯಾಯ

ಭಾರತ ದೇಶ 1947 ರ ಆಗಸ್ಟ್ 15 ರಂದು ಬ್ರಿಟಿಶರ ಗುಲಾಮಗಿರಿಯಿಂದ ಸ್ವಾತಂತ್ರ್ಯ ಪಡೆದ ನಂತರ ಆಂಗ್ಲರ ಮೆಹರಬಾನಿಯಿಂದ ಬೆಳೆದು ನಿಂತು, ಆಡಳಿತೆಯನ್ನು ನಡೆಸುತ್ತಿದ್ದ 600 ರಷ್ಟು ರಾಜಮಹಾರಾಜರು ತಮ್ಮ ಸಂಸ್ಥಾನಗಳನ್ನು ಹಾಗೆಯೇ ಉಳಿಸಿಕೊಳ್ಳುವ ತಂತ್ರ ಹೂಡಿದ್ದರು. ದೇಶದ ಸ್ವಾತಂತ್ರ್ಯಕ್ಕಾಗಿ ನಡೆದ ಚಳುವಳಿ ಸಂಸ್ಥಾನಗಳಿಗೂ ಹಬ್ಬಿ ಪ್ರಾರಂಭದಲ್ಲಿ 'ಜವಾಬ್ದಾರಿ' ಸರ್ಕಾರದ ಘೋಷಣೆ ಯೊಂದಿಗೆ ಹೋರಾಟ ಪ್ರಾರಂಭ ಮಾಡಿ ಆಗಸ್ಟ್ 15, 1947 ರ ನಂತರ ಸ್ವತಂತ್ರ ಭಾರತದಲ್ಲಿ ಸಂಸ್ಥಾನಗಳ ವಿಲೀನ ಚಳುವಳಿ ತೀವ್ರವಾಗಿ ನಡೆದು ಹೆಚ್ಚಿನ ಸಂಸ್ಥಾನಗಳು ವಿಲೀನಗೊಂಡವು. ಆದರೆ ನಿಜಾಮನ ಹೈದರಾಬಾದ್ ಸಂಸ್ಥಾನ ಮತ್ತು ಕಾಶ್ಮೀರದ ರಾಜ ಮಾತ್ರ ವಿಲೀನವನ್ನು ವಿರೋಧಿಸುತ್ತಲೇ ಬಂದಿದ್ದರು. ಹೈದರಾಬಾದ್ ಸಂಸ್ಥಾನದಲ್ಲಿ ದೊಡ್ಡ ದೊಡ್ಡ ಭೂಮಾಲಿಕರೇ ಭೂಮಿಯ ಒಡೆಯರಾಗಿದ್ದು ರೈತರ, ಕೃಷಿ ಕೂಲಿಗಾರರ ಶೋಷಣೆ ನಿರಂತರ ನಡೆಯುತ್ತಿದ್ದಾಗ ಕಮ್ಯುನಿಸ್ಟ್ ಪಾರ್ಟಿ ಮತ್ತು ರೈತ ಸಂಘದ ನೇತೃತ್ವದಲ್ಲಿ ಹೈದರಾಬಾದ್ ನಿಜಾಮನ ಬೆಂಬಲದಿಂದ ಭೂಮಾಲಕರು ನಡೆಸುತ್ತಿದ್ದ ದಬ್ಬಾಳಿಕೆ, ದೌರ್ಜನ್ಯಗಳ ವಿರುದ್ಧ ಸಶಸ್ತ್ರ ಹೋರಾಟ ನಡೆಯಿತು. ಆ ಹೋರಾಟ ಹೈದರಾಬಾದ್. ಸಂಸ್ಥಾನದ ನಲಗೊಂಡ, ವಾರಂಗಲ್, ಕರೀಂ ನಗರ ಮೊದಲಾದ ತೆಲಂಗಾಣ ಪ್ರದೇಶದಲ್ಲಿ ನಡೆಯಿತು. ಕಮ್ಯುನಿಸ್ಟ್ ಪಾರ್ಟಿ - ರೈತ ಸಂಘ ನೇತೃತ್ವದಲ್ಲಿಯ ಈ ಸಶಸ್ತ್ರ ಕಾರ್ಯಕರ್ತರು ಮೂರು ಸಾವಿರಕ್ಕೂ ಹೆಚ್ಚು ಹಳ್ಳಿಗಳಲ್ಲಿ ತಮ್ಮದೇ ಸರಕಾರ ನಡೆಸುತ್ತಿದ್ದರು. ಕಮ್ಯುನಿಸ್ಟ್ ಪಾರ್ಟಿ ನೇತೃತ್ವದ ಜಮೀನ್ದಾರರ ವಿರುದ್ಧ, ರಜಾಕಾರರ ದಬ್ಬಾಳಿಕೆಯ ವಿರುದ್ಧ, ಉಳುವವನಿಗೇ ಭೂಮಿಗಾಗಿ ನಡೆದ ಈ ಸಶಸ್ತ್ರ ಹೋರಾಟ ಭಾರತ ದೇಶದಲ್ಲೇ ದೊಡ್ಡ ಪ್ರಶ್ನೆಯಾಗಿ ಮೂಡಿಬಂತು. ಸ್ವತಂತ್ರ ಭಾರತದ ಜನತೆ 'ತೆಲಂಗಾಣ ಮಾದರಿ' ಎಂಬ ಘೋಷಣೆಯನ್ನು ಸ್ವಾಗತಿಸಿತು. ಉತ್ಸಾಹಪೂರಿತ ಬೆಂಬಲ ದೊರೆಯಿತು. ಹೋರಾಟಗಾರರಲ್ಲಿ, ಕಾರ್ಯಕರ್ತರಲ್ಲಿ ಹುರುಪು, ಹುಮ್ಮಸ್ಸು ತುಂಬಿಸಿತು. ಹೈದರಾಬಾದ್ ಸಂಸ್ಥಾನದಲ್ಲಿದ್ದ ರಾಯಚೂರು, ಗುಲ್ಬರ್ಗ, ಬೀದರ ಜಿಲ್ಲೆಗಳಿಗೂ ತೆಲಂಗಾಣ ಹೋರಾಟದ ಗಾಳಿ ಬೀಸಿತು. ಹೈದರಾಬಾದ್ ಸಂಸ್ಥಾನವನ್ನು ಭಾರತ ದೇಶದಲ್ಲಿ ವಿಲೀನಿಕರಣಕ್ಕಾಗಿ ಹೋರಾಟದ ನಡೆಸುತ್ತಿರುವಾಗಲೇ ಕಾಸಿಮ್ ರಿಜ್ವಿಯ ರಜಾಕಾರರು ಮಹಿಳೆಯ, ಮಕ್ಕಳ, ಬಡಜನರ, ಹಿಂದೂಗಳ ಮೇಲೆ ನಡೆಯುತ್ತಿದ್ದ ಅಪಾರ, ಅಮಾನುಷ ರಾಕ್ಷಸೀ ದೌರ್ಜನ್ಯದ ವಿರುದ್ಧ ಸ್ವಾತಂತ್ರ್ಯ ಹೋರಾಟಗಾರ ರಮಾನಂದ ತೀರ್ಥ ಅವರ ನೇತೃತ್ವದಲ್ಲಿ ಕಮ್ಯುನಿಸ್ಟರನ್ನು ಒಳಗೊಂಡ ಹೋರಾಟ ಸಮಿತಿ ರಚಿಸಿ, ಹೋರಾಟ ನಡೆಯಿತು. ಹೊರನಾಡ ಕನ್ನಡಿಗರ ಬೆಂಬಲವನ್ನು ಯಾಚಿಸಲಾಯಿತು. ಕರ್ನಾಟಕ ಏಕೀಕರಣಕ್ಕಾಗಿ, ಮೈಸೂರು ಸಂಸ್ಥಾನದ ವಿಲೀನಕ್ಕಾಗಿಯೂ ಚಳುವಳಿ ನಡೆದಿತ್ತು. ತೆಲಂಗಾಣ ರೈತರ ಸಶಸ್ತ್ರ ಹೋರಾಟ ಕರ್ನಾಟಕದ ಏಕೀಕರಣದ ಮೇಲೆಯೇ ಪರಿಣಾಮ ಬೀರಿತು. ಹೈದರಾಬಾದಿನ ವಿಲೀನ ಹಾಗೂ ಭೂಮಿಗಾಗಿ ತೆಲಂಗಾಣದಲ್ಲಿ ನಡೆಯುತ್ತಿದ್ದ ಸಶಸ್ತ್ರ ಕ್ರಾಂತಿಯ ನೇತೃತ್ವವನ್ನು ಕಮ್ಯುನಿಸ್ಟ್ ಪಾರ್ಟಿ ವಹಿಸಿಕೊಂಡಿದ್ದು, ಗುಲ್ಬರ್ಗ ಜಿಲ್ಲೆಯ ಕಮ್ಯುನಿಸ್ಟ್ ಪಾರ್ಟಿ ಕೂಡ ರಜಾಕಾರ ವಿರೋಧಿ ಚಳುವಳಿಯಲ್ಲಿ ಧುಮುಕಿತು. ಗಂಗಾಧರ ನಮೋಶಿ, ಅಬ್ದುಲ್ ಕರೀಮ, ಮಹಮ್ಮದ್ ಹಸನ್ ಖಾನ, ಶ್ರೀನಿವಾಸ ಗುಡಿ, ಅವರ ಎಲ್ಲಾ ಸಹೋದರರು ಚಳುವಳಿ ಸಂಘಟಿಸಿದರು. ಗಡಿ ಜಿಲ್ಲೆಗಳಾದ ಸೋಲಾಪುರ, ಬಿಜಾಪುರ ಜಿಲ್ಲೆಗಳ ಕಮ್ಯುನಿಸ್ಟ್ ಪಕ್ಷ ಹಾಗೆಯೇ ಕರ್ನಾಟಕ ಪಾರ್ಟಿಯ ಸಹಾಯ ಕೇಳಿದರು. ರಾಜ್ಯ ಸಮಿತಿಯಿಂದ ಎಸ್.ಎನ್.ಹೊಳ್ಳ, ಬಿಜಾಪುರದಲ್ಲಿದ್ದ ಎನ್.ಕೆ.ಉಪಾಧ್ಯಾಯ, ಬಾಲಸಿಂಗ ಮಾಸ್ತರ ಈ ಚಳುವಳಿಗೆ ಸಹಾಯ ನೀಡಲು ಸೂಚಿಸಲಾಯಿತು. ಅದರಂತೆ ಬಿಜಾಪುರ ಮತ್ತು ಸೋಲಾಪುರದಲ್ಲಿ ಎರಡು ಶಿಬಿರಗಳನ್ನು ನಡೆಸಲಾಯಿತು. ಕರಪತ್ರ ತಯಾರಿಸಿ ಸ್ವಯಂ ಸೇವಕರನ್ನು ಗಡಿ ಹೊರಗೆ ಕಳುಹಿಸಲಾಯಿತು. ಕಾಲೇಜ್ ವಿದ್ಯಾರ್ಥಿ ಬಿಜಾಪುರದ ಮಲ್ಲಪ್ಪ ಬಿಳಗಿ ಎಂಬುವರ ನೇತೃತ್ವದಲ್ಲಿ ಸ್ವಯಂ ಸೇವಕರು ಒಳನುಗ್ಗಿದರು. ಕಾದಂಬರಿ ಜಹಗೀರದಾರ ಉತ್ತಮ ಭಾಷಣಗಾರರೂ, ಸಂಘಟಕರೂ ಆಗಿದ್ದರು. ಸಾಕಷ್ಟು ಸಾರ್ವಜನಿಕ ಸಭೆ ನಡೆಸ ಲಾಯಿತು. ಹಣ, ದವಸಧಾನ್ಯ ಸಂಗ್ರಹವಾಯಿತು. ಗುಲ್ಬರ್ಗ ಜಿಲ್ಲೆಯ ನಾಲ್ಕೈದು ತಾಲೂಕುಗಳಲ್ಲಿ ಹೋರಾಟ ನಡೆಸಲಾಯಿತು. ಹೈದರಾಬಾದ್ ಕರ್ನಾಟಕ ಹಾಗೂ ಗಡಿ ಪ್ರದೇಶದಲ್ಲಿ ಕಮ್ಯುನಿಸ್ಟ್ ಪಾರ್ಟಿ ಪ್ರಬಲವಾಗಿಲ್ಲದಿದ್ದರೂ ಕೂಡ ತೆಲಂಗಾಣ ಸಶಸ್ತ್ರ ಹೋರಾಟ ಎಲ್ಲೆಡೆ ಸ್ಫೂರ್ತಿ ತುಂಬಿಸುವಂತೆ ಮಾಡಿದ್ದರಿಂದ ಹೈದರಾಬಾದ್ ಕರ್ನಾಟಕದಲ್ಲಿ ರಜಾಕಾರ ವಿರೋಧಿ ಚಳುವಳಿಯಲ್ಲಿ ಹೈದರಾಬಾದ್ ಸಂಸ್ಥಾನದ ವಿಮೋಚನೆಯಲ್ಲಿ ಕಮ್ಯುನಿಸ್ಟರೂ ಧೀರ ಹೋರಾಟ ನಡೆಸಿದ್ದಾರೆಂಬುದನ್ನು ಮರೆಯುವಂತಿಲ್ಲ. ರಮಾನಂದ ತೀರ್ಥರು ಇಡೀ ಹೈದರಬಾದ್ ಸಂಸ್ಥಾನದಲ್ಲಿ ಕಮ್ಯುನಿಸ್ಟರು ನಡೆಸಿದ ಹೋರಾಟವನ್ನು ಸ್ಮರಿಸಿದ್ದಾರೆ. ಅದರಲ್ಲೂ ಭೂಮಿಗಾಗಿ ನಡೆದ ತೆಲಂಗಾಣ ರೈತರ ಧೀರ ಸಶಸ್ತ್ರ ಹೋರಾಟ ನಿಜಾಮನ ವಿರುದ್ಧ ನಡೆದ ಹೋರಾಟಕ್ಕೆ, ಕೇಂದ್ರ ಸರಕಾರ ಹೈದರಾಬಾದ ನಿಜಾಮನ ವಿರುದ್ಧ ಸೈನಿಕ ಕ್ರಮ ತೆಗೆದುಕೊಳ್ಳುವಂತೆ ಮಾಡಲು ಸಾಧ್ಯವಾಯಿತೆಂಬುದನ್ನೂ ನೆನಸುತ್ತಾರೆ. ತೆಲಂಗಾಣ ಚಳುವಳಿ ಇಡೀ ಹೈದರಾಬಾದ ಸಂಸ್ಥಾನಕ್ಕೆ ಹರಡಿದರೆ ಅಪಾಯವೆಂದರಿತ ಆಗಿನ ಕೇಂದ್ರ ಗೃಹಮಂತ್ರಿ ವಲ್ಲಭಬಾಯಿ ಪಟೇಲರು ಹೈದರಾಬಾದಿಗೆ ಸೈನಿಕರನ್ನು ಕಳುಹಿಸಿ ಹೈದರಾಬಾದ ಸಂಸ್ಥಾನವನ್ನು ಭಾರತ ದೇಶದಲ್ಲಿ ವಿಲೀನಗೊಳಿಸುವುದರ ಜೊತೆಯಲ್ಲಿಯೇ ತೆಲಂಗಾಣದಲ್ಲಿ ನಡೆಯುತ್ತಿದ್ದ ಸಶಸ್ತ್ರ ರೈತರ ಹೋರಾಟವನ್ನು ಮುಗಿಸಿ ಬಿಡುವ ತಂತ್ರ ಹೂಡಿದ್ದರು.1948 ಸೆಪ್ಟೆಂಬರ್ 17 ರಂದು ಹೈದರಾಬಾದ ಸಂಸ್ಥಾನ ವಿಮೋಚನೆಗೊಂಡಿತು.

ಕರ್ನಾಟಕ ಸರಕಾರ ಹಾಗೆಯೇ ಕಾಂಗ್ರೆಸ್ಸಿನವರು ಹೈದರಾಬಾದ ಕರ್ನಾಟಕದ ಸ್ವಾತಂತ್ರ್ಯ ಸ್ವರ್ಣಮಹೋತ್ಸವವನ್ನು ಆಚರಿಸುತ್ತಿರುವಾಗ, ಆ ಹೋರಾಟದಲ್ಲಿ ಕಮ್ಯುನಿಸ್ಟ್ ಪಕ್ಷದ ಧೀರ ಹೋರಾಟದ ಪಾತ್ರವನ್ನು ಮರೆಯುತ್ತಿರುವುದು ಸಮಂಜಸವಲ್ಲ. ಹೈದರಾಬಾದ ಸಂಸ್ಥಾನದ ಸ್ವಾತಂತ್ರ್ಯಕ್ಕಾಗಿ ನಡೆದ, ರಜಾಕಾರ ದಬ್ಬಾಳಿಕೆಯ ವಿರುದ್ಧ ನಡೆದ ಹೋರಾಟದಲ್ಲಿ ಕಮ್ಯುನಿಸ್ಟ್ ಪಾರ್ಟಿ ಪರಿಣಾಮಕಾರಿ ಪಾತ್ರ ವಹಿಸಿದೆಂಬುದನ್ನು ಮರೆಯುವಂತಿಲ್ಲ

'ಪರಿಸ್ಥಿತಿ ನಿಜಕ್ಕೂ ಹದಗೆಟ್ಟಿದೆ'



ಇದನ್ನು ಹೇಳಿದವರು ಯಾವುದೋ ವಿರೋಧ ಪಕ್ಷದ ಮುಖಂಡರಲ್ಲ. ಕೇಂದ್ರ ಸರ್ಕಾರದ ಮುಖ್ಯ ಆರ್ಥಿಕ ಸಲಹೆಗಾರ ಡಾ|| ಶಂಕರ ಆಚಾರ್ಯ ಈ ಮಾತನ್ನು ಹೇಳಿದ್ದಾರೆ. ಈ ಸಾಲಿನಲ್ಲಿ ವ್ಯಾಪಾರ ಬಾಕಿ ಮತ್ತು ವಿದೇಶಿ ಸಾಲ ಮರುಪಾವತಿ ಪರಿಸ್ಥಿತಿ ಹದ ಗೆಟ್ಟಿದೆ ಎಂದರೆ ಪರಿಸ್ಥಿತಿ ನಿಜಕ್ಕೂ ಎಷ್ಟು ಗಂಭೀರ ಎಂಬುದನ್ನು ಊಹಿಸಿಕೊಳ್ಳ ಬಹುದು.

'ನಮ್ಮ ಚಿಂತನೆಯಲ್ಲಿ ನಾವು ಸ್ಪಷ್ಟವಾಗಿರಬೇಕು. ಅಂತರ್ರಾಷ್ಟ್ರೀಯ ವಿಷಯದಲ್ಲಿ ಇದು ಬಹಳ ಕಷ್ಟದ ವರ್ಷ. ನಾವು ಅವಾಸ್ತವಿಕವಾಗಿಯಾಗಲಿ, ಅತಿಯಾದ ಆಶಾವಾದ ಹೊಂದಿರುವುದಾಗಲಿ ಸರಿಯಾದುದಲ್ಲ. ನಮ್ಮ ವಿದೇಶಿ ವಿನಿಮಯ ಪರಿಸ್ಥಿತಿಯ ನಿಜವನ್ನು ಅರಿತು ಒಪ್ಪಿಕೊಳ್ಳಲೇ ಬೇಕಾಗಿದೆ" ಎಂದು ಅವರು ಹೇಳಿದ್ದಾರೆ.

ಹಾಗಿದ್ದರೆ ಸರ್ಕಾರ ಏನು ಮಾಡುತ್ತದೆ? ಈ ಪರಿಸ್ಥಿತಿ ಸುಧಾರಿಸಲು ಅಷ್ಟೇನೂ ಸ್ಪಷ್ಟ ಉತ್ತರವಿದ್ದಂತಿಲ್ಲ. ಸರ್ಕಾರದಲ್ಲಿ ರಿಸರ್ಜೆಂಟ್ ಇಂಡಿಯಾ ಬಾಂಡ್ (ಆರ್.ಐ.ಬಿ) ಇರುವುದರಿಂದ ವಿಶ್ವಾಸ ಹೆಚ್ಚಾಗೇ ಇರುತ್ತದೆ ಎಂಬುದು ಅವರ ಭರವಸೆ.

ದೇಶದೊಳಗೆ ಹಣದುಬ್ಬರದ ದರವೂ ಅತಿಯಾಗಿದೆ ಎಂದೂ ಅವರು ಒಪ್ಪಿಕೊಂಡಿದ್ದಾರೆ. ಪರಿಸ್ಥಿತಿ ಸುಧಾರಿಸುತ್ತದೆ ಎಂಬ ಆಶಾವಾದವನ್ನು ಅವರು ವ್ಯಕ್ತಪಡಿಸಿದ್ದಾರೆ.

1930 ರ ತರಹದ ಆರ್ಥಿಕ ಹಿಂಜರಿತ ಇಂದಿನದು ಎಂದೂ ಅವರು ಹೇಳಿದ್ದಾರೆ.

ಹೀಗೆ ಭಾರತದ ಆರ್ಥಿಕವನ್ನು ಹದಗೆಡಿಸಿ ಕೋಟಿಗಟ್ಟಲೆ ಜನರ ಬದುಕನ್ನು ಕಷ್ಟಮಯಗೊಳಿಸಿದ ಉದಾರೀಕರಣದಿಂದಾಗಿ ಇದಾಯಿತು ಎಂದು ಒಪ್ಪಿಕೊಳ್ಳುವ ಛಾತಿ ಈ ಮಹಾಶಯರಿಗಿಲ್ಲ. ಬದಲಿಗೆ ಜಾಗತಿಕವಾಗಿಯೇ ಬಿಕ್ಕಟ್ಟಿದೆ, ಅದರಿಂದಾಗಿ ನಾವೂ ಅದನ್ನು ಅನುಭವಿಸುತ್ತಿದ್ದೇವೆ ಎಂಬರ್ಥದ ಮಾತುಗಳನ್ನು ಅವರು ಹೇಳುತ್ತಿದ್ದಾರೆ. ಆದರೆ ದೇಶದ ಆರ್ಥಿಕ ಪರಿಸ್ಥಿತಿ ಏನು ಎಂಬುದನ್ನು ದೇಶದ ಜನಸಾಮಾನ್ಯರು ಅನುಭವದ ಮೂಲಕ ಅರಿತುಕೊಳ್ಳುತ್ತಿದ್ದಾರಲ್ಲವೇ?

ಅತಿ ಹೆಚ್ಚಿನ ಹಣದುಬ್ಬರ ದರ

ವಾರ್ಷಿಕ ಹಣದುಬ್ಬರ ದರ ಕಳೆದ 148 ವಾರಗಳಲ್ಲಿ ಅತಿ ಹೆಚ್ಚಾದ ಶೇ 8.78 ಕ್ಕೇರಿದೆ. ಇದು ಅತಿಹೆಚ್ಚಿನ ಹಣದುಬ್ಬರ ಎಂಬುದನ್ನು ಜನಸಾಮಾನ್ಯರು ಆಯವ್ಯಯದ ಮೂಲಕ ಕಂಡುಕೊಳ್ಳುತ್ತಿದ್ದಾರೆ. ಉದಾರೀಕರಣದ ಆರ್ಥಿಕ ನೀತಿ ತಂದ ಸೌಭಾಗ್ಯ ಇದು. ಈಗ ಬಿಜೆಪಿ ಎಂಬ ಸ್ವದೇಶಿ ಬಾಯಿ ಮಾತಿನ ಸರ್ಕಾರ ಈ ಪರಿಸ್ಥಿತಿಯನ್ನು ಇನ್ನೂ ಹೆಚ್ಚಿಗೆ ಹದಗೆಡಿಸಿದೆ ಅಷ್ಟೆ.

1995 ರ ನವೆಂಬರ್ 4 ಕ್ಕೆ ಕೊನೆಗೊಂಡ ವಾರದಲ್ಲಿನ ಶೇ 8.83 ರಷ್ಟು ದರದ ಹಣದುಬ್ಬರದ ನಂತರ ಇದೇ ಅತಿ ಹೆಚ್ಚಿನ ಹಣದುಬ್ಬರದ ದರ.

ಸ್ವದೇಶಿ ನೀತಿಯ ಬಗ್ಗೆ ದೇಶದ ಜನರ ಸಮಸ್ಯೆಗಳ ಬಗ್ಗೆ ಸುಳ್ಳೇ ಮಾತನಾಡುವ ಬಿಜೆಪಿ ಸರ್ಕಾರ ನಿಜಕ್ಕೂ ಜನರ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಎಷ್ಟು ಕಾಳಜಿಯನ್ನು ಹೊಂದಿದೆ ಎಂಬುದನ್ನು ಇದು ಎತ್ತಿ ತೋರಿಸುತ್ತದೆ.

ಮಂಕುಬೂದಿ ಎರಚುವವರ ವಿಲೀನ

ಬಂಡವಾಳಿಗರ ಸಮೂಹ ಮಾಧ್ಯಮಗಳು ಆಳುವ ವರ್ಗದ ವಿಚಾರಗಳನ್ನು ಜನರ ಮೇಲೆ ಹೇರುವ ಕೆಲಸದಲ್ಲಿ ತೊಡಗಿರುತ್ತವೆ. ಬಡ ಜನಸಾಮಾನ್ಯರ, ದುಡಿವ ಜನರ ನೋವು ಗಳ ಬಗ್ಗೆ ಕಷ್ಟ ಕಾರ್ಪಣ್ಯಗಳ ಬಗ್ಗೆ ಅವು ಇಲ್ಲವೇ ಇಲ್ಲ ಎಂಬಂತಹ ಧೋರಣೆ ತಳೆದ ಇವು ಬಂಡವಾಳಿಗರ ಸಿದ್ಧಾಂತಗಳನ್ನು ನವೋನವೀನವಾಗಿ, ಸೃಜನಶೀಲವಾಗಿ ಪ್ರಚಾರ ಮಾಡುತ್ತವೆ.

ಈ ಕ್ಷೇತ್ರದಲ್ಲಿ ದೊಡ್ಡದಾಗಿ ಬೆಳೆದು ಲಾಭ ಮಾಡುವ ಏಕೈಕ ಉದ್ದೇಶವನ್ನು ಅವು ಹೊಂದಿರುತ್ತವೆ. ಟಿ.ವಿ.ಮಾಧ್ಯಮ ಇತ್ತೀಚಿನ ಅತ್ಯಂತ ಪ್ರಭಾವಶಾಲಿ ಮಾಧ್ಯಮ.

ಅಮೇರಿಕದ ಸ್ಟಾರ್ ಟೀ.ವಿ. ಮತ್ತು ಭಾರತದ ಝೀ ಟಿ.ವಿ. ಎರಡು ಟಿ.ವಿ. ಮಾಧ್ಯಮಗಳು. ಈಗ ಇವೆರಡೂ ಮಾಧ್ಯಮ ಕ್ಷೇತ್ರದಲ್ಲಿ ಹೆಚ್ಚಿನ ಪಾಲು ಹೊಂದಿ ಏಕಸ್ವಾಮ್ಯದತ್ತ ಮುಂದು ವರಿಯಲು ವಿಲೀನಗೊಳ್ಳುವ ನಿರ್ಧಾರ ಮಾಡಿವೆ.

ಹೊಸ ಸಮೂಹ ಭಾರತದಲ್ಲೇ ಏಳು ಚಾನೆಲ್‌ಗಳನ್ನು ಹೊಂದಿರುತ್ತಾರೆ. ಇವು ಸಾಫ್ಟ್‌ವೇರ್‌ಗಳ ಉತ್ಪಾದನೆ ಮಾರ್ಕೆಟಿಂಗ್ ಕಾರ್ಯಗಳನ್ನು ಮಾಡುತ್ತವೆ. ಬ್ರಿಟನ್, ಅಮೇರಿಕ, ಆಫ್ರಿಕಾ ಮತ್ತು ಯುರೋಪ್‌ಗಳಲ್ಲಿ ಇವು ತಮ್ಮ ಜಾಲವನ್ನು ಹೊಂದಿರುತ್ತವೆ.

ಉದಾರೀಕರಣದ ಮೂಲಕ ದೇಶೀ ಸಂಸ್ಕೃತಿಗಳನ್ನು ಅಳಿಸಿಹಾಕಿ ಸಾಂಸ್ಕೃತಿಕ ರಂಗಗಳನ್ನೇ ಹಾಳುಗೆಡಹುವ ಕೆಲಸವನ್ನು ಇನ್ನೂ ಸಮರ್ಥವಾಗಿ ಮಾಡುವ ಉದ್ದೇಶವನ್ನು ಇಂತಹ ಬೃಹತ್ ಕಂಪನಿಗಳು ಹೊಂದಿರುತ್ತವೆ. ಈಗಾಗಲೇ ನಮ್ಮ ಟಿ.ವಿ.ಗಳಲ್ಲಿ ಅಂತಹ ಕಾರ್ಯಕ್ರಮಗಳ ಪ್ರಸಾರ ಮಾಡುತ್ತಿರುವ ಈ ಚಾನೆಲ್‌ಗಳು ಈಗ ಇನ್ನೂ ಹೆಚ್ಚೆಚ್ಚು ಪ್ರಬಲವಾಗಿ ಅದನ್ನು ಮಾಡುತ್ತವೆ.

ವಿದೇಶಿಯರು ಕಟ್ಟುವ ಮನೆ ಬೇಕೆ?

ಇದು ಕೇಂದ್ರ ಸರ್ಕಾರದ ಮಂತ್ರಿ ಮಂಡಲದೊಳಗಡೆಯೇ ವಿವಾದ ಸೃಷ್ಟಿಸಿರುವ ಪ್ರಶ್ನೆ. ಕಟ್ಟಡೋದ್ಯಮದಲ್ಲಿ ವಿದೇಶಿ ನೇರ ಹೂಡಿಕೆಯನ್ನು ದೊಡ್ಡ ಪ್ರಮಾಣದಲ್ಲಿ ಬಿಡಬೇಕು ಎಂಬುದು ನಗರಾಭಿವೃದ್ಧಿ ಸಚಿವಾಲಯದ ಪ್ರಸ್ತಾಪ. ಇದಕ್ಕೆ ಕೇಂದ್ರ ಹಣಕಾಸು ಮಂತ್ರಾಲಯ ಮತ್ತು ಕೇಂದ್ರದ ನಾಗರೀಕ ಸಚಿವಾಲಯ ಗಳು ವಿರೋಧ ವ್ಯಕ್ತಪಡಿಸಿವೆ.

ಹಣಕಾಸು ಮಂತ್ರಾಲಯ ವಿದೇಶಿ ನೇರ ಹೂಡಿಕೆ ಅಲ್ಪಪಾಲು ಇದ್ದರೆ ಸಾಕು ಎನ್ನುತ್ತಿದ್ದರೆ ಕೈಗಾರಿಕಾ ಸಚಿವಾಲಯ ಇಲ್ಲಿ ಕಾರ್ಯರೂಪಕ್ಕೆ ಹಲವು ಸಮಸ್ಯೆಗಳನ್ನೂ ಅದು ಉಂಟು ಮಾಡುವುದರಿಂದ ಅದು ಬೇಡ ಎನ್ನುತ್ತಿವೆ.

ಆದರೆ ನಗರಾಭಿವೃದ್ಧಿ ಸಚಿವಾಲಯ ಈ ವಿರೋಧದ ನಡುವೆಯೂ ಈ ಪ್ರಸ್ತಾಪವನ್ನು ಕೇಂದ್ರ ಮಂತ್ರಿ ಮಂಡಲದ ಮುಂದಿರಿಸಿ ಅನುಮೋದನೆ ಪಡೆಯುವ ಹುನ್ನಾರದಲ್ಲಿದೆ.

ವಿದೇಶಿ ನೇರ ಹೂಡಿಕೆ ಬಂಡವಾಳಿಗರ ಬಂಗಲೆ, ಉದ್ಯಮಗಳ ಕಟ್ಟಡಗಳನ್ನು ಕಟ್ಟಲು ಬಂದಾವೆ ಹೊರತು ದೇಶದ ಕೋಟಿ ಗಟ್ಟಲೆ ಬಡಜನರಿಗೆ ವಸತಿ ನಿರ್ಮಿಸಲು ಬರಲಾರವು. ಯಾಕೆಂದರೆ ಈ ಜನರಲ್ಲಿ ಈ ವಿದೇಶಿ ಹೂಡಿಕೆದಾರರಿಗೆ ಕೊಡಲು ಹಣವೆಲ್ಲಿದೆ.

ಬಂಡವಾಳಿಗರಿಗೆ ಅಲ್ಪವುಟ್ಟದ ಅನುಕೂಲ ಆಗಬಹುದು. ದೇಶದ ಕಟ್ಟಡೋದ್ಯಮ ತೀವ್ರ ಹಿಂಜರಿತ ಅನುಭವಿಸುತ್ತಿರುವಾಗ ವಿದೇಶೀ ಹೂಡಿಕೆ ಈ ಕ್ಷೇತ್ರಕ್ಕೆ ಬಂದರೆ ದೇಶೀ ಉದ್ಯಮದ ಪರಿಸ್ಥಿತಿ ಏನಾದೀತು ಎಂಬುದೂ ಪ್ರಶ್ನೆ.

ಧಣಿ ಹೇಳಿದ್ದನ್ನು ಒಕ್ಕಲು ಪಾಠ ಒಪ್ಪಿಸಿದ

ಐಎಂಎಫ್ ಮತ್ತು ವಿಶ್ವಬ್ಯಾಂಕ್‌ಗಳು ಆದಾಯ ತರದ ಬ್ಯಾಂಕು ಮತ್ತು ಹಣಕಾಸು ಸಂಸ್ಥೆಗಳ ಸಾಲಗಳ ವರ್ಗೀಕರಣದ ಬಗ್ಗೆ ಬಹಳ ಬಿಗಿಯಾದ ನಿಲುವು ತೆಗೆದು ಕೊಳ್ಳಬೇಕೆಂದು ಶರತ್ತು ಹೇರಿದ್ದವು. ದೇಶದ ಆರ್ಥಿಕ ಈಗ ಅನುಭವಿಸುತ್ತಿರುವ ಹಿಂಜರಿತದ ಹಿನ್ನೆಲೆಯಲ್ಲಿ ಈ ಬಗ್ಗೆ ಬಿಗಿ ಧೋರಣೆ ಇರುವುದಿಲ್ಲ ಎಂದು ಕೇಂದ್ರ ಸರ್ಕಾರ ಸೂಚಿಸುತ್ತಿದ್ದಂತೆ ಈ ಒತ್ತಡ ಸಾಮ್ರಾಜ್ಯಶಾಹಿ ಧಣಿಗಳಿಂದ ಬಂದಿತ್ತು.

ಈ ಹೇಳಿಕೆ ಬ್ಯಾಂಕ್ ಫಂಡ್‌ಗಳಿಂದ ಬಂದ ನಂತರ ಈಗ ಕೇಂದ್ರದ ಹಣಕಾಸು ಮಂತ್ರಿ ಯಶವಂತ ಸಿನ್ಹಾ ಬಿಗಿಯಾದ ಹಣಕಾಸು ನೀತಿ ಮತ್ತು ಈ ಸಾಲ ವರ್ಗೀಕರಣದ ಬಗೆಗೂ ಬಿಗಿಯಾಗಿರುವ ಮಾತನ್ನು ಆಡಿದ್ದಾರೆ. ಆರ್ಥಿಕ ಈಗಾಗಲೇ ಬೆಳವಣಿಗೆಯ ದಾರಿಯಲ್ಲಿದೆ ಎಂದು ಬೊಗಳೆ ಬಿಟ್ಟಿರುವ ಅವರು ಪರಿಸ್ಥಿತಿ ಕೆಲವೇ ದಿನಗಳಲ್ಲಿ ಸುಧಾರಿಸುತ್ತದೆ ಎಂದು ಹಲವು ಸಾರಿ ಹೇಳಿದ್ದಾರೆ. ಇದೇ ಸಮಯದಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿನ ಗವರ್ನರ್ ಡಾ. ಬಿಮಲ್ ಜಾಲನ್ ಅವರೂ ಸಹ ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳ ನಿಯಮಗಳನ್ನು ಬಿಗಿಗೊಳಿಸುವ ಮಾತನ್ನಾಡಿದ್ದಾರೆ. ಸಾಮ್ರಾಜ್ಯಶಾಹಿಗಳಿಗೆ ಅನುಕೂಲವಾಗುವ ಎಲ್ಲ ಬಿಗಿತಗಳನ್ನು ಧಣಿಗಳ ಹೇಳಿಕೆಯಂತೆ ಮಾಡುತ್ತಿರುವ ಸರ್ಕಾರ ಇದಲ್ಲವೆ. ಮಾಡುವುದು ಇಂತಹ ಕೆಲಸ ವಾದರೆ 'ಸ್ವದೇಶಿ' ಎಂಬ ಮೆರುಗಿನ ಮಾತು ಬೇರೆ.

ನುಂಗಣ್ಣಗಳಲ್ಲ ತಿಂದಣ್ಣಗಳು?

ಬಹುರಾಷ್ಟ್ರೀಯ ಕಂಪನಿಗಳು ಭಾರತದ ಹಲವು ಕಂಪನಿಗಳನ್ನು ವಶೀಕರಿಸಿ (Takeover)ಕೊಳ್ಳುತ್ತಿವೆ. ಇದು ದುಷ್ಟ ವಶೀಕರಣವೇ ಅಥವ ಸ್ನೇಹಮಯ ವಶೀಕರಣವೇ? ಇದು ಪ್ರಶ್ನೆ. ಸೆಬಿ ಈ ವಿಷಯದಲ್ಲಿ ಒಂದು ಸಮೀಕ್ಷೆ ನಡೆಸಿ ಒಟ್ಟು 71 ಪ್ರಕರಣಗಳಲ್ಲಿ ಏಳು ಮಾತ್ರ ದುಷ್ಟ ವಶೀಕರಣಗಳಿದ್ದವು. ನಲವತ್ತೈದು ಸ್ನೇಹಮಯ ವಶೀಕರಣಗಳು ಮತ್ತು ಹತ್ತೊಂಬತ್ತು ಕ್ರೋಢೀಕರಣಕ್ಕಾಗಿ ಮಾಡಿದ ವಶೀಕರಣಗಳು ಎಂದಿದೆ.

ಒಟ್ಟಾರೆಯಾಗಿ ಹೇಳುವುದಾದರೆ ಬಹುರಾಷ್ಟ್ರೀಯ ಕಂಪನಿಗಳು ದುಷ್ಟ ವಶೀಕರಣದಲ್ಲಿ ತೊಡಗಿಲ್ಲ ಎಂದು ಪ್ರತಿಪಾದಿಸುವುದೇ ಈ ಸಮೀಕ್ಷೆಯ ಉದ್ದೇಶ.

ಬಹುರಾಷ್ಟ್ರೀಯ ಕಂಪನಿಗಳು ವಶೀಕರಣ ಮಾಡಿಕೊಳ್ಳುವುದೇ ದುಷ್ಟ ಹೇತುವಿನಿಂದ ಕೂಡಿದ್ದು. ಯಾಕೆಂದರೆ ಭಾರತದ ದೇಶಿ ಉದ್ಯಮವನ್ನು ವಶೀಕರಿಸಿಕೊಂಡು ಆ ಮಾರುಕಟ್ಟೆಯನ್ನು ತನ್ನದಾಗಿಸಿ ಕೊಳ್ಳುವುದೇ ಇದರ ಉದ್ದೇಶ. ಹಾಗಿರುವಾಗ ಸ್ನೇಹಮಯ ಮತ್ತು ದುಷ್ಟ ವಶೀಕರಣ ಎಂದು ವಿಂಗಡಿಸುವ ಪ್ರಶ್ನೆಯೇಏಳುವುದಿಲ್ಲ.

ಉಕ್ಕು ಉದ್ದಿಮೆಗೆ ನೆರವು

ಉದಾರೀಕರಣದ ನೀತಿ ದೇಶಿ ಉಕ್ಕು ಉದ್ಯಮವನ್ನೇ ಹಾಳುಗೆಡವಿದ್ದು ಈಗ ಎಲ್ಲರಿಗೂ ಗೊತ್ತಿರುವ ವಿಷಯ. ಉಕ್ಕು ಔದ್ಯಮೀಕರಣಕ್ಕೆ ಅತ್ಯಂತ ಮುಖ್ಯವಾದ ಒಂದು ಸರಕು. ಹಾಗೆ ನೋಡಿದರೆ ಉಕ್ಕಿನ ಬಳಕೆಯಿಲ್ಲದ ಉದ್ಯಮವೇ ಇಲ್ಲವೆನ್ನಬಹುದು. ಹಾಗಿರುವಾಗ ಸ್ವಾವಲಂಬನೆ ಸಾಧಿಸಬಯಸುವ ದೇಶ ಈ ಉದ್ಯಮವನ್ನು ಪೋಷಿಸಿ ಬೆಳಸಬೇಕು. ಆದರೆ ಭಾರತ ಸರ್ಕಾರ ಅದನ್ನು ಹಾಳುಗೆಡವಿತು. ಖಾಸಗಿ ಮತ್ತು ಸಾರ್ವಜನಿಕ ವಲಯದ ದೇಶಿ ಉದ್ದಿಮೆಗಳು ವಿದೇಶಿ ಉಕ್ಕಿನ ಹರಿವಿನಿಂದಾಗಿ ತತ್ತರಿಸಿ ಹೋಗಿವೆ. ಟಿಸ್ಕೋ ಮತ್ತು ಸೇಲ್ ಎರಡೂ ತಮ್ಮ ವಹಿವಾಟಿನಲ್ಲಿ ತೀವ್ರ ಕಡಿತ ಅನುಭವಿಸಿವೆ. ಈಗ ಊರುಕೊಳ್ಳೆ ಹೋದ ಮೇಲೆ ದಿಡ್ಡಿ ಬಾಗಿಲು ಹಾಕಿದರು ಎಂಬಂತೆ ಸರ್ಕಾರ ಉಕ್ಕು ಆಮದಿನ ಮೇಲೆ ಅಲ್ಪ ಪ್ರಮಾಣದ ನಿರ್ಬಂಧ ಹೇರಿದೆ. ಈ ನಿರ್ಬಂಧದ ಪ್ರಕಾರ ಉಕ್ಕು ಆಮದನ್ನು ಕೆಲವೇ ಕೆಲವು ಆಯ್ದ ಬಂದರುಗಳ ಮುಲಕ ಮಾತ್ರ ಮಾಡಬಹುದೇ ವಿನಃ ಎಲ್ಲ ಬಂದರುಗಳ ಮೂಲಕ ಅಲ್ಲ. ಇದಲ್ಲದೆ ಆಮದು ಸುಂಕವನ್ನು ಮೊದಲೇ ನಿಗದಿ ಪಡಿಸಿದ ಬೆಲೆಯ ಆಧಾರದ ಮೇಲೆ ಹೇರಲಾಗುತ್ತದಂತೆ.

ಇದರಿಂದ ಆಮದು ಸ್ವಲ್ಪ ತುಟ್ಟಿಯಾಗಿ ದೇಶಿ ಉದ್ಯಮ ಚೇತರಿಸಿಕೊಳ್ಳಲಿ ಎಂಬುದು ಸರ್ಕಾರದ ಆಶಯವಂತೆ. ಒಂದು ವರ್ಷದ ನಂತರ ಇದನ್ನು ಪುನರ್ವಿಮರ್ಶಿಸ ಲಾಗುವುದಂತೆ.

ಆದರೆ ಈಗಾಗಲೇ ಅಪಾರ ಪ್ರಮಾಣದಲ್ಲಿ ಉಕ್ಕು ಆಮದಾಗಿರುವುದರಿಂದ ಈ ಕ್ರಮ ದೇಶೀ ಉದ್ದಿಮೆಗೆ ಎಂತಹ ಚೇತರಿಕೆ ನೀಡುತ್ತದೆ ಎಂಬುದನ್ನು ಕಾದು ನೋಡಬೇಕಷ್ಟೆ.

ಲಾಲ್ ಸಲಾಂ! ಲಾಲ್ ಸಲಾಂ!!

'ಸಮಾಜ ಪರಿವರ್ತನೆಗೆ ಸಮರ್ಪಿತ ಜೀವನ'

ಬೆಂಗಳೂರು: ಸೆಪ್ಟೆಂಬರ್ 18 ರ ಮುಂಜಾನೆ ಕರ್ನಾಟಕದ ಸಂಗಾತಿಗಳಿಗೆ ಎಂದಿನ ಮುಂಜಾನೆಯಾಗಿರಲಿಲ್ಲ. ಆಘಾತಕರ ಸುದ್ದಿ ತಂದ ಮುಂಜಾನೆಯಾಗಿತ್ತು. ನಂಬಲಸಾಧ್ಯವೆನಿಸುವ ಸುದ್ದಿ. ರಾತ್ರಿ ವೇಳೆಗೆ ದಿಲ್ಲಿಯಿಂದ ವಿಮಾನ ಬೆಂಗಳೂರಿನಲ್ಲಿ ಬಂದಿಳಿದಾಗ ಮಾಸ್ಟ್ರು ಇಳಿದು ನಡೆದು ಬರುತ್ತಾರೆಂಬ ನಿರೀಕ್ಷೆ-ಕಟುವಾಸ್ತವತೆಯನ್ನು ಮರೆಸುವ ನೂರಾರು ಸಂಗಾತಿಗಳ ಮಾನಸಿಕ ಪ್ರಯತ್ನ ಕೊನೆಗೂ ವಿಫಲವಾಯಿತು. ಕಾಮ್ರೇಡ್ ಪಿ.ಆರ್.ರವರ ಪಾರ್ಥಿವ ಶರೀರವನ್ನು ಜೋಪಾನಗೊಳಿಸಿಟ್ಟಿದ್ದ ಪೆಟ್ಟಿಗೆಯಷ್ಟೇ ಬಂತು. ಪಕ್ಷದ ಪೊಲಿಟ್‌ಬ್ಯೂರೋ ಪರವಾಗಿ ಇ.ಬಾಲಾನಂದನ್ ಜತೆಗೆ ಬಂದಿದ್ದರು. ಪೆಟ್ಟಿಗೆ ರಾಜ್ಯ ಸಮಿತಿ ಕಚೇರಿಗೆ ತಲುಪಿದಾಗ ಬೆಳಗಿನಿಂದ ಅವರ ನಿಧನದ ಸುದ್ದಿ ಕೇಳಿ ಅದನ್ನು ವಿವಿಧೆಡೆ ತಲುಪಿಸುವ, ವಿವಿಧ ರೀತಿಗಳಲ್ಲಿ ಅವರನ್ನು ನೆನಪಿಸಿಕೊಳ್ಳುವ ಕೆಲಸಗಳಲ್ಲಿ ಮಗ್ನರಾಗಿದ್ದ ಸಂಗಾತಿಗಳ ದುಃಖದ ಕಟ್ಟೆಯೊಡೆಯಿತು. ಶವ ಪೆಟ್ಟಿಗೆಯನ್ನು ಸೀಲ್ ಮಾಡಿದ್ದರಿಂದ ಅಂತಿಮ ಸಂಸ್ಕಾರ ಮರುದಿನ ಮಂಗಳೂರಿನಲ್ಲಿ ನಡೆಯಲಿದ್ದುದರಿಂದ ಆ ಸೀಲ್‌ನ್ನು ಒಡೆಯಲಾಗದ ಕಾರಣ ಪ್ರೀತಿಯ ಮಾಸ್ಟ್ರನ್ನು ಕೊನೆಯ ಬಾರಿಗಾದರೂ ನೋಡಲು ಸಾಧ್ಯವಾಗಲಿಲ್ಲವಲ್ಲಾ ಎಂಬ ಕೊರಗು ಬೆಂಗಳೂರಿನ ಸಂಗಾತಿಗಳಿಗೆ. ಆದರೂ, ಗಂಟೆ ರಾತ್ರಿಯ ಹನ್ನೊಂದು ದಾಟಿದ್ದರೂ ನೂರಾರು ಸಂಗಾತಿಗಳು ಸಾಲಿನಲ್ಲಿ ಬಂದು ಬಿಗಿ ಮುಷ್ಟಿಯನ್ನು ಎತ್ತಿ ಹಿಡಿದು ಕೆಂಪು ನಮನ ಸಲ್ಲಿಸಿದರು.

ಕಾಮ್ರೇಡ್ ಪಿ.ಆರ್.ರವರ ಪಾರ್ಥಿವ ಶರೀರವನ್ನು ಹೊತ್ತ ವ್ಯಾನು ಮಂಗಳೂರಿನತ್ತ ಹೊರಟು ಕಣ್ಮರೆಯಾಗುವವರೆಗೂ 'ಕಾಮ್ರೇಡ್ ಪಿ.ಆರ್.ಲಾಲ್ ಸಲಾಂ' ನ ಘೋಷಣೆಗಳು ದುಃಖಪೂರಿತ ಕಂಠಗಳಿಂದ ಹೊರಹೊಮ್ಮುತ್ತಲೇ ಇದ್ದವು.

ಇದಕ್ಕೆ ಮೊದಲು ಸಿಪಿಐ(ಎಂ)ನ ರಾಜ್ಯ ಸಮಿತಿಯ ಕಚೇರಿಯಲ್ಲಿ ಜಿಲ್ಲಾ ಸಮಿತಿ ಏರ್ಪಡಿಸಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ವಿವಿಧ ಸಂಘಟನೆಗಳ ನೂರಾರು ಕಾರ್ಯಕರ್ತರು, ಕಾರ್ಮಿಕರು, ನೌಕರರು, ಬುದ್ಧಿಜೀವಿಗಳು, ಕಲಾವಿದರು ಭಾಗವಹಿಸಿದರು. ಹಿರಿಯ ಗಾಂಧಿವಾದಿ ಹಾಗೂ ಶಿಕ್ಷಣ ತಜ್ಞ ಡಾ। ಹೆಚ್ ನರಸಿಂಹಯ್ಯ, ಸಿಪಿಐ(ಎಂ) ಮುಖಂಡ ಅನಂತಸುಬ್ಬರಾವ್, ಪ್ರಖ್ಯಾತ ರಂಗಕರ್ಮಿ ಪ್ರಸನ್ನ, 'ಸಮುದಾಯ' ಸಾಂಸ್ಕೃತಿಕ ಸಂಘಟನೆಯ ಗುಂಡಣ್ಣ ಮತ್ತು ವೆಂಕಟೇಶ ಮೂರ್ತಿ, ಪ್ರಖ್ಯಾತ ಪ್ರಾಧ್ಯಾಪಕ ಡಾ. ಜಿ.ರಾಮಕೃಷ್ಣ ಸಿಪಿಐ(ಎಂ) ಕಚೇರಿಗೆ ಭೇಟಿ ನೀಡಿ ಪಿ.ರಾಮಚಂದ್ರರಾಯರಿಗೆ ತಮ್ಮ ನಮನ ಸಲ್ಲಿಸಿದರು.

ಅವರದ್ದು ದುಡಿಯುವ ವರ್ಗದ ಹೋರಾಟಕ್ಕೆ, ಸಮಾಜದ ಆಮೂಲಾಗ್ರ ಪರಿವರ್ತನೆಗಾಗಿ ಅರ್ಪಿತವಾದ ಜೀವನ ಎಂದು ಸಿಪಿಐ(ಎಂ) ತಮಿಳುನಾಡು ರಾಜ್ಯ ಸಮಿತಿಯ ಮುಖಂಡ ಲಗುಮಯ್ಯ ವರ್ಣಿಸಿದರು.

ಪಿ.ಆರ್. ಪ್ರಾಮಾಣಿಕ ಹಾಗೂ ಸರಳ ಜೀವಿಯಾಗಿದ್ದರು, ಅಪಾರ ಅನುಭವ ಹೊಂದಿದ್ದ ಅವರ ಸಾವು ರಾಜ್ಯ ಚಳುವಳಿಗೆ ತುಂಬಲಾರದ ನಷ್ಟ ಎಂದರು ಹಿರಿಯ ಕಾರ್ಮಿಕ ಮುಖಂಡ ಸೂರ್ಯನಾರಾಯಣ ರಾವ್ ರವರು.

ಸ್ವತಃ ಒಬ್ಬ ಬುದ್ಧಿಜೀವಿಯಾಗಿದ್ದರೂ ಕಾರ್ಮಿಕರಿಂದಲೇ ತಾನು ಸರಿಯಾದ ಮಾರ್ಗವನ್ನು ಕಂಡುಕೊಂಡೆ ಎಂಬ ವಿನಮ್ರ ನಿಲುವು ತಳೆದ ಅತ್ಯುನ್ನತ ವ್ಯಕ್ತಿಯಾಗಿದ್ದರು ಎಂದು ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ.ನಾಯರ್ ಅಗಲಿದ ಮುಖಂಡನನ್ನು ನೆನೆಸಿಕೊಂಡರು.

ಆಡು ಮುಟ್ಟದ ಸೊಪ್ಪಿಲ್ಲ....

ಆಡು ಮುಟ್ಟದ ಸೊಪ್ಪಿಲ್ಲ ಎನ್ನುವ ನಾಣ್ನುಡಿಯಂತೆ ಪಿ.ಆರ್. ಅಧ್ಯಯನ ಮಾಡದಿರುವ ವಿಚಾರವಿಲ್ಲ ಎಂದು ಆ ಧೀಮಂತ ಮುಖಂಡನ ಪುಸ್ತಕ ಪ್ರೀತಿಯನ್ನು ನೆನಪಿಸಿಕೊಂಡವರು ಜನವಾದಿ ಮಹಿಳಾ ಸಂಘಟನೆಯ ನಾಯಕಿ ಕೆ.ಎಸ್. ವಿಮಲ. ಮಾಸ್ತರರು ಭರವಸೆಯ ಚೇತನವಾಗಿದ್ದರು ಎಂದು ನುಡಿದರು.

27 ವರ್ಷಗಳಿಂದ ಪಿ.ಆರ್.ರೊಂದಿಗಿದ್ದ ತಮ್ಮ ಒಡನಾಟವನ್ನು ಸ್ಮರಿಸಿದ ಶಾಸಕ ಜಿ.ವಿ. ಶ್ರೀರಾಮ ರೆಡ್ಡಿ, ತಮ್ಮನ್ನು ಮಾರ್ಕ್ಸ್‌ವಾದದ ವಿದ್ಯಾರ್ಥಿಯನ್ನಾಗಿ ಮಾಡಿದವರು ಮಾಸ್ತರರು ಎಂದು ಹೇಳಿದರು. ತಮ್ಮನ್ನು ಏಕವಚನದಲ್ಲಿ ಸಂಭೋದಿಸುತ್ತಿದ್ದವರು ಇಬ್ಬರೇ ಇಬ್ಬರು. ತಾಯಿ ಹಾಗೂ ಮಾಸ್ತರರು ಎಂದರು. ಸಾವಿನಿಂದ ಮಾರ್ಕ್ಸ್‌ವಾದಿಗಳು ಎದೆಗುಂದುವುದಿಲ್ಲ. ಅವರು ಆಶಾವಾದಿಗಳು. ಆ ಆಶಾವಾದಕ್ಕೆ ವೈಜ್ಞಾನಿಕ ನೆಲೆಯಿದೆ ಎಂದ ಜಿ.ವಿ.ಎಸ್. ಮಾಸ್ತರರ ಸ್ಫೂರ್ತಿ ನಮ್ಮೆಲ್ಲರಿಗೆ ದಾರಿದೀಪ ಎಂದು ತಮ್ಮ ನುಡಿನಮನ ಸಲ್ಲಿಸಿದರು.

ಕಾಂ।। ಸೂರಿ ಮತ್ತು ವಿ.ಜೆ.ಕೆ. ಮಾಸ್ತರರ ಜತೆ ತಮಗಿದ್ದ ಮೂರು ದಶಕಗಳ ಒಡನಾಟದ ಅನುಭವವನ್ನು ವಿವರಿಸಿ, ಪಿ.ಆರ್. ನೆಚ್ಚಿದ್ದ ಕಾರ್ಯಕ್ರಮವನ್ನು ಮುಂದುವರಿಸಿಕೊಂಡು ಹೋಗುವುದೇ ಅವರಿಗೆ ಸಲ್ಲಿಸುವ ಗೌರವ ಎಂದು ಹೇಳಿದರು.

ಗದ್ಗದಿತವಾದ ಕಂಠ...

1998, ಸಪ್ಟೆಂಬರ್ 17ರ ರಾತ್ರಿಯ ನೀರವತೆಯಲ್ಲಿ ರಿಂಗುಣಿಸಿದ ಫೋನಿನಲ್ಲಿ ಕಾಮ್ರೇಡ್ ಪ್ರಕಾಶ್ ಕಾರಟ್‌ರಿಂದ ಮಾಸ್ತರರ ಸಾವಿನ ಸುದ್ದಿಯನ್ನು ಪಡೆದ ಮೊದಲಿಗರಾದ ಕಾಂ।। ಜಿ.ಎನ್. ನಾಗರಾಜ್ ಮಾತನಾಡಲು ನಿಂತಾಗ ಅವರ ಕಂಠ ಗದ್ಗದಿತವಾಗಿತ್ತು. ಸುಮಾರು 15 ವರ್ಷಗಳಿಂದ ಮಾಸ್ತರರ ಜೊತೆಗಿದ್ದ ಒಡನಾಟವನ್ನು ನೆನಪಿಸಿಕೊಂಡರು.

ಅಧಿಕಾರಿಯಾಗಿದ್ದ ತಾವು ಮಾರ್ಕ್ಸ್‌ವಾದದತ್ತ ಆಕರ್ಷಿತರಾಗುವಲ್ಲಿ ಧಾರವಾಡದ ವಿಚಾರ ಸಂಕಿರಣವೊಂದರಲ್ಲಿ ಪಿ.ಆರ್. ಮಾಡಿದ ಭಾಷಣ ನೀಡಿದ ಸ್ಫೂರ್ತಿ-ಪ್ರೇರಣೆಯನ್ನು ಸ್ಮರಿಸಿದರು. "ಪೂರ್ಣಕಾಲದ ಕಾರ್ಯಕರ್ತ ಅಲ್ಲ ; ಪೂರ್ಣಕಾಲದ ಕ್ರಾಂತಿಕಾರಿಯಾಗಿ ಬಾ" ಎಂಬ ಸಂದೇಶ ಹೊತ್ತ ಪಿ.ಆರ್.ರ ಪತ್ರ ತಮ್ಮಲ್ಲಿ ಇಂದಿಗೂ ಇದೆ ಎಂದು ಹೇಳಿದ ಜಿ.ಎನ್. ಆ ಪತ್ರ ತಮಗೆ ದಾರಿದೀಪವಾಗಿದೆ ಎಂದರು.

ಕೋಮುವಾದಿ ಶಕ್ತಿಗಳು ದೊಡ್ಡ ರೀತಿಯಲ್ಲಿ ತಲೆಯೆತ್ತುತ್ತಿರುವ ಬಗ್ಗೆ ವಿಚಲಿತರಾಗಿದ್ದ ಪಿ.ಆರ್., ಮುಂದಿನ ಚುನಾವಣೆಗಳಲ್ಲಿ ಆ ಶಕ್ತಿಗಳನ್ನು ಎದುರಿಸುವ ಬಗ್ಗೆ ಕಾಳಜಿ ವ್ಯಕ್ತಪಡಿಸಿದ್ದರು. ಆ ಕುರಿತ ಚರ್ಚೆಯನ್ನು ಮುಂದುವರಿಸಲು ಅವರು 'ಬರಲೇ ಇಲ್ಲ'. ಆದರೆ ಅವರು ಹಾಕಿ ಕೊಟ್ಟ ಮಾರ್ಗ ನಮ್ಮ ಮುಂದಿದೆ ಎಂದು ಜಿ.ಎನ್. ಹೇಳಿದರು.

ಆಗ ಚೆನ್ನೈನಲ್ಲಿ ನಡೆಯುತ್ತಿದ್ದ ಸಿ.ಪಿ.ಐ ಮಹಾಧಿವೇಶನದಲ್ಲಿ ಪಾಲ್ಗೊಳ್ಳಲು ರಾಜ್ಯದ ಸಿ.ಪಿ.ಐ ನಾಯಕರೂ ಹೋಗಿದ್ದರು. ಆ ಪಕ್ಷದ ಪರವಾಗಿ ಸಂತಾಪ ಸಭೆಯಲ್ಲಿ ಮಾತನಾಡಿದ ಕಾ।। ದೇವಿ ಪ್ರಸಾದ್, ಪಿ.ಆರ್. ಇಡೀ ಜನಸಮುದಾಯಕ್ಕೆ ಮೇಷ್ಟು ಆಗಿದ್ದರು ಎಂದರು.

ಹೊಸ ಆರ್ಥಿಕ ನೀತಿ ಮತ್ತು ಕೋಮುವಾದದ ವಿರುದ್ಧ ಸೆಪ್ಟಂಬರ್ ಒಂದರಂದು ಬೆಂಗಳೂರಿನಲ್ಲಿ ನಡೆದ ರಾಜ್ಯ ಸಮಾವೇಶದಲ್ಲಿ ಮಾಸ್ತರ್ ಮಾಡಿದ ಬೋಧಪ್ರದ ಭಾಷಣವನ್ನು ದೇವಿಪ್ರಸಾದ್ ನೆನಪಿಸಿಕೊಂಡರು.

ಬಹುಶಃ ಆ ಸಮಾವೇಶವೇ ಕಾ।। ಪಿ.ಆರ್. ಅವರ ಹೋರಾಟ ಕಣದ ಕೊನೆಯ ಕಾರ್ಯಕ್ರಮವಾಯಿತು.

ರೈತ ಆಂದೋಲನದ ಚಿಂತೆ

ಅಧ್ಯಕ್ಷತೆ ವಹಿಸಿದ್ದ ಪಕ್ಷದ ಬೆಂಗಳೂರು ಜಿಲ್ಲಾ ಸಮಿತಿ ಕಾರ್ಯದರ್ಶಿ ಪಿ. ಜಗನ್ನಾಥ್ ಮಾತನಾಡಿ ರಾಜ್ಯದ ಕಮ್ಯುನಿಸ್ಟ್ ಆಂದೋಲನಕ್ಕೆ ಪಿ.ಆರ್. ಕೊಡುಗೆ ಅಮೋಘವಾದುದು ಎಂದು ವರ್ಣಿಸಿದರು. ಪಿ.ಆರ್. ಕೆಲಸ ಮಾಡದ ದುಡಿಯುವ ವರ್ಗದ ಕ್ಷೇತ್ರವಿಲ್ಲ ಎಂದರು. ಎಲ್ಲಾ ಪ್ರಗತಿಪರ ಚಳುವಳಿಗಳಲ್ಲಿ ಮಾಸ್ತ್ರು ಇರುತ್ತಿದ್ದರು ಎಂದು ಹೇಳಿದರು.

ರಾಜ್ಯದಲ್ಲಿ ರೈತ ಆಂದೋಲನ ದುರ್ಬಲವಾಗಿರುವುದನ್ನು ಕಂಡು ಅದಕ್ಕೆ ಪುನಶ್ಚೇತನ ಕೊಡುವ ಬಗ್ಗೆ ಪ್ರಸ್ತಾವಿಸಿದ್ದರು.



ದೆಹಲಿಯಿಂದ ಮರಳಿದ ಮೇಲೆ ಚರ್ಚೆ ಮಾಡೋಣ ಎಂದಿದ್ದರು. ರಾಜ್ಯದಲ್ಲಿ ಚಳುವಳಿಯನ್ನು ಕಟ್ಟುವ ಕುರಿತ ಅವರ ಕನಸನ್ನು ನನಸು ಮಾಡಬೇಕಾದ ಹೊಣೆ ನಮ್ಮ ಮೇಲಿದೆ ಎಂದರು.

ಸಂತಾಪ ಸೂಚಕ ನಿರ್ಣಯವನ್ನು ಕೆ. ಪ್ರಕಾಶ್ ಮಂಡಿಸಿದರು. ಎಸ್.ವೈ. ಗುರುಶಾಂತ್ ಸಂತಾಪ ಸಂದೇಶವನ್ನು ಓದಿ ಹೇಳಿದರು. ಇ.ಕೆ.ಎನ್. ರಾಜನ್ ಪ್ರಾಸ್ತಾವಿಕ ಮಾತನ್ನಾಡಿದರು.

ಅಗಲಿದ ಮುಖಂಡನ ಗೌರವಾರ್ಥ ಒಂದು ನಿಮಿಷ ಮೌನವನ್ನು ಆಚರಿಸಲಾಯಿತು.

ವರದಿ - **ವಿಶ್ವ**

ಕಾಮ್ರೇಡ್ ಮಾಸ್ತ್ರಿಗೆ ....


ಮಂಗಳೂರು ಸೆಪ್ಟೆಂಬರ್ 19: ಅಗಲಿದ ಮಾಸ್ತ್ರ ಪಾರ್ಥಿವ ಶರೀರವನ್ನು ಹೊತ್ತ ವಾಹನ, ಅದನ್ನು ಹಿಂಬಾಲಿಸಿದ ಬೆಂಗಳೂರಿನ ಸಂಗಾತಿಗಳ ಬಸ್ ಮಂಗಳೂರಿನಲ್ಲಿ ಮೊದಲು ಹೋದದ್ದು ಅವರ ನಿವಾಸಕ್ಕೆ. ಕಾಮ್ರೇಡ್ ಪಿ.ಆರ್. ರವರು ರಾಜ್ಯ ಕಾರ್ಯದರ್ಶಿಗಳ ಹೊಣೆ ಹೊತ್ತು ಅವರ ಕಾರ್ಯಕ್ಷೇತ್ರ ಇಡೀ ರಾಜ್ಯವನ್ನು ವ್ಯಾಪಿಸಿದಂದಿನಿಂದ, ವಿಶೇಷವಾಗಿ ಇತ್ತೀಚಿನ ಕೆಲವು ವರ್ಷಗಳಲ್ಲಿ ಬಹಳಷ್ಟು ಸಮಯ ಅವರ ಪತ್ನಿ ಲೀಲಾರವರು ಇಲ್ಲಿ ಒಂಟಿಯಾಗಿಯೇ ಇರಬೇಕಾಗಿ ಬಂದಿತ್ತು. ಸೆಪ್ಟೆಂಬರ್ 18 ರ ಈ ಆಘಾತಕರ ಸುದ್ದಿಯನ್ನು ಅಷ್ಟೇ ಧೈರ್ಯ-ಸ್ಥೈರ್ಯಗಳಿಂದ ಎದುರಿಸಿದ ಅವರು ತಮ್ಮ ಮೂವರು ಪುತ್ರಿಯರು ಹಾಗೂ ಕುಟುಂಬದ ಇತರ ಸದಸ್ಯರೊಂದಿಗೆ, ಮಾಸ್ತ್ರನ್ನು ಕೊನೆಯ ಬಾರಿಗೆ ಬರಮಾಡಿಕೊಂಡು ನಂತರ ಕೊನೆಯ ಬಾರಿಗೆ ಬೀಳ್ಕೊಟ್ಟರು.

ಪಾರ್ಥಿವ ಶರೀರ ಬೋಳಾರದಲ್ಲಿರುವ ಪಕ್ಷದ ಜಿಲ್ಲಾ ಸಮಿತಿಯ ಕಛೇರಿಗೆ ಬಂದಾಗ ಆದಾಗಲೇ ಸಿಡಿಲಿನಂತೆ ಬಂದೆರಗಿದ್ದ ತಮ್ಮ ಪ್ರಿಯ ಮಾಸ್ತ್ರ ಸಾವಿನ ಸುದ್ದಿಯ ಆಘಾತದಿಂದ ತತ್ತರಿಸಿದ್ದ ನೂರಾರು ಸಂಗಾತಿಗಳು, ಅಭಿಮಾನಿಗಳು ಅದರಿಂದ ತುಸು ಚೇತರಿಸಿಕೊಂಡು ಕೊನೆಯ ನಮನ ಸಲ್ಲಿಸಲು ಕಾದು ನಿಂತಿದ್ದರು. ಮಾಸ್ತ್ರ ನೇತೃತ್ವದ ಹೋರಾಟಗಳನ್ನು ನೆನಪಿಸಿಕೊಳ್ಳುತ್ತಿದ್ದರು. ಕೆನರಾ ವರ್ಕ್‌ಶಾಪ್‌ನ ಕಾರ್ಮಿಕರೊಬ್ಬರು ಗ್ರಾಚ್ಯುಟಿ ಶಾಸನ ವ್ಯಾಪಕವಾಗುವ ಮೊದಲೇ 1968 ರಲ್ಲಿ ಮಾಸ್ತ್ರ ನೇತೃತ್ವದಲ್ಲಿ ತಾವು ಗ್ರಾಚ್ಯುಟಿಯನ್ನು ಪಡೆದ್ದದನ್ನು ನೆನಪಿಸಿಕೊಂಡರೆ, ಇನ್ನೊಬ್ಬರು ಮಹಿಳಾ ಬೀಡಿ ಕಾರ್ಮಿಕರಿಗೆ ಹೆರಿಗೆ ಸೌಲಭ್ಯಗಳನ್ನು ಪಡೆಯಲು ಮಾಸ್ತ್ರ ನೇತೃತ್ವದಲ್ಲಿ ಧಾರಾಕಾರವಾಗಿ ಸುರಿಯುತ್ತಿದ್ದ ಮಳೆಯಲ್ಲೇ ಧರಣಿ ಕೂತದ್ದನ್ನು ನೆನಪಿಸಿಕೊಂಡರು. ಇನ್ನೊಬ್ಬ ಹಿರಿಯರು ಒಬ್ಬ ಬೀಡಿ ಕಾರ್ಮಿಕನ ಮೇಲಿನ ಪೋಲೀಸರ ಲಾಠಿ ಪ್ರಹಾರವನ್ನು ತಪ್ಪಿಸಲು ಮಾಸ್ಟ್ರೇ ಮುನ್ನುಗ್ಗಿದ್ದನ್ನು ಸ್ಮರಿಸುತ್ತಿದ್ದರು.

ಕಾಂ. ಪಿ.ಆರ್. ದಶಕಗಳ ಕಾಲ ದಕ್ಷಿಣ ಕನ್ನಡ ಜಿಲ್ಲೆಯ ಅಸಂಘಟಿತ ಕಾರ್ಮಿಕರಿಗೆ, ಬಡ ರೈತರಿಗೆ ಹೋರಾಟದ ಸ್ಫೂರ್ತಿ ತುಂಬಿ ಮಾರ್ಗದರ್ಶನ ನೀಡುತ್ತಿದ್ದ ಹೆಂಚಿನ ಕಾರ್ಮಿಕರ ಸಂಘದ ಕಟ್ಟಡದಲ್ಲಿ ಅಲಂಕರಿಸಿದ್ದ ವೇದಿಕೆಯ ಮೇಲೆ ಪಾರ್ಥಿವ ಶರೀರವನ್ನು ಅಂತಿಮ ನಮನಕ್ಕಾಗಿ ಇಡಲಾಯಿತು. ಸಿಪಿಐ(ಎಂ) ರಾಜ್ಯ ಮುಖಂಡರೊಂದಿಗೆ ಕೇರಳದಿಂದ ಬಂದ ಸಹಕಾರ ಮಂತ್ರಿ ಪಿನರಾಯಿ ವಿಜಯನ್, ಕಾಸರಗೋಡಿನ ಸಂಸತ್ ಸದಸ್ಯ ಪಿ.ಗೋವಿಂದನ್, ತಮಿಳುನಾಡಿನ ಕಾಮ್ರೇಡ್ ಸೆಲ್ವಸಿಂಗ್, ಹಿರಿಯ ಸಿಪಿಐ ಮುಖಂಡರಾದ ಬಿ.ವಿ.ಕಕ್ಕಿಲಾಯ, ಮಂಗಳೂರಿನ ಮೇಯರ್ ಹಿಲ್ಡಾ ಆಳ್ವ, ಕಮಿಷನರ್ ಮತ್ತಿತರ ಗಣ್ಯರೊಂದಿಗೆ ದುಗುಡ ತುಂಬಿಕೊಂಡ ಸಾವಿರಾರು ಜನ ಸಾಮಾನ್ಯರು ಹೆಂಚಿನ ಕಾರ್ಮಿಕರು, ಬೀಡಿ ಕಾರ್ಮಿಕರು, ಇತರ ಕಾರ್ಮಿಕರು, ನೌಕರರು, ರೈತರು, ಯುವಜನರು ಜಿಲ್ಲೆಯ ಮತ್ತು ರಾಜ್ಯದ ಇತರೆಡೆಗಳಿಂದ ಬಂದ ಸಂಗಾತಿಗಳು ತಮ್ಮ ಪ್ರೀತಿಯ ಮಾಸ್ತ್ರಿಗೆ ಅಂತಿಮ ನಮನ, ಕೆಂಪುವಂದನೆ ಸಲ್ಲಿಸಿದರು. ಅಪಾರ ಸಂಖ್ಯೆಯಲ್ಲಿ ಮಹಿಳೆಯರು ಸಾಲುಗಟ್ಟಿ ಬಂದು ಕೆಂಪು ವಂದನೆ ಸಲ್ಲಿಸಿದ್ದು ಗಮನಸೆಳೆದ ಒಂದು ಸಂಗತಿ.

ನಿವಾಸದಿಂದ ಅಂತಿಮ ಬೀಳ್ಕೊಡುಗೆ





ಕಾಂ. ಪಿ.ಆರ್.ರವರ ನಿವಾಸದಲ್ಲಿ - ದುಃಖತಪ್ತ ಮಡದಿ ಮತ್ತು ಪುತ್ರಿಯರು ಹಾಗೂ ಮೊಮ್ಮಗಳು

ಹನ್ನೊಂದು ಗಂಟೆಯ ವೇಳೆಗೆ ಜಿಲ್ಲಾ ಸಮಿತಿ ಕಚೇರಿಯಿಂದ ಕಾಮ್ರೇಡ್ ಮಾಸ್ತ್ರ ಅಂತಿಮ ಪಯಣ ಆರಂಭವಾಯಿತು. ಮೈಲುದ್ದದ ಮೆರವಣಿಗೆಯಲ್ಲಿ ಮೊದಲಿಗೆ ಶೋಕಗೀತೆ ನುಡಿಸುತ್ತಿದ್ದ ಬ್ಯಾಂಡಿನವರು, ಅವರ ಹಿಂದೆ ಶಿಸ್ತಿನ ಕೆಂಪು ಸ್ವಯಂ ಸೇವಕರು ಮೂರು ಸಾಲುಗಳಲ್ಲಿ, ಅವರ ಹಿಂದೆ ಕಾರ್ಮಿಕರು, ನೌಕರರು, ರೈತರು, ಮಹಿಳೆಯರು, ವಿದ್ಯಾರ್ಥಿಗಳು, ಯುವಜನರು, ಎಲ್ಲಾ ದುಡಿಯುವ ಜನ ವಿಭಾಗಗಳಿಂದ ಬಂದವರು ಮೌನವಾಗಿ ಸಾಗಿದರು - ಕಳೆದ ಐದು ದಶಕಗಳಲ್ಲಿ ಹಲವು ಬಾರಿ ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು ಹರಿದುಹೋದ ಅದೇ ರಸ್ತೆಗಳನ್ನು, ಬೀದಿಗಳನ್ನು ಹಾದು-ದಾರಿಯುದ್ದಕ್ಕೂ ಶ್ರದ್ಧಾಂಜಲಿ ಅರ್ಪಣೆ. ಮಾಜಿ ಮುಖ್ಯ ಮಂತ್ರಿ ವೀರಪ್ಪ ಮೊಯಿಲಿಯವರು ಹಾಗೆ ಶ್ರದ್ಧಾಂಜಲಿ ಅರ್ಪಿಸಿದವರಲ್ಲಿ ಒಬ್ಬರು.

ಮೆರವಣಿಗೆ ನಂದಿಗುಡ್ಡೆ ಸ್ಮಶಾನವನ್ನು ತಲುಪುತ್ತಿದ್ದಂತೆ ಕಾಮ್ರೇಡ್ ಮಾಸ್ತ್ರಿಗೆ ಅಂತಿಮ ವಿದಾಯ ಹೇಳುವ ಸಮಯವೂ ಬಂದೇ ಬಿಟ್ಟಿತು. ಚಿತೆಯ ಮೇಲೆ ಇಟ್ಟ ಪಾರ್ಥಿವ ಶರೀರಕ್ಕೆ ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯ ಇ.ಬಾಲಾನಂದನ್, ಕರ್ನಾಟಕದ ಹಿರಿಯ ಕಾರ್ಮಿಕ ಮುಖಂಡ ಹಾಗೂ ಮಾಸ್ತರರ ದೀರ್ಘಕಾಲದ ಸಹಯೋಗಿ ಎಸ್.ಸೂರ್ಯನಾರಾಯಣ ರಾವ್, ಎನ್.ಕೆ.ಉಪಾಧ್ಯಾಯ, ಕೆ.ಆರ್. ಶ್ರೀಯಾನ್ ಮತ್ತಿತರ ಮುಖಂಡರು ಅಗ್ನಿ ಇಟ್ಟರು. ಸಂಗಾತಿಗಳ ಗದ್ಗದ ಕಂಠಗಳ ಲಾಲ್‌ಸಲಾಂಗಳ ನಡುವೆ ಕಾಮ್ರೇಡ್ ರಾಮಚಂದ್ರರಾಯರ ಪಾರ್ಥಿವ ಶರೀರ ಅಗ್ನಿಯ ಜ್ವಾಲೆಗಳ ನಡುವೆ ಕಣ್ಮರೆಯಾಯಿತು. ಈಗ ಉಳಿದದ್ದು ಅವರ ನೆನಪು ಮಾತ್ರ. ಆದರೆ ಅದು ಸಾಮಾನ್ಯ ನೆನಪೇನಲ್ಲ. ಸಮಾನತೆಯ ಸಮಾಜಕ್ಕಾಗಿ ನಡೆಯುವ ದೀರ್ಘ ಹೋರಾಟದುದ್ದಕ್ಕೂ ಚಿರಕಾಲ ಉಳಿಯುವ, ಸ್ಫೂರ್ತಿ ನೀಡುವ ನೆನಪದು.

ಪುಟ 6 ನೋಡಿ



ನಲ್ಮೆಯ 'ಮಾಸ್ತ್ರ' ಇನ್ನಿಲ್ಲ

ಎನ್.ಕೆ.ಉಪಾಧ್ಯಾಯ

ದಿಲ್ಲಿಯಲ್ಲಿ ನಡೆಯಲಿದ್ದ ಕೇಂದ್ರ ಸಮಿತಿ ಸಭೆಯಲ್ಲಿ ಪಾಲ್ಗೊಳ್ಳಲು ಆರೋಗ್ಯವಂತರಾಗಿಯೇ ಬೆಂಗಳೂರಿನಲ್ಲಿ ರೈಲು ಹತ್ತಿದ ಕೇಂದ್ರ ಸಮಿತಿ ಸದಸ್ಯ, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಪಿ.ರಾಮಚಂದ್ರರಾಯರು ಜೀವಂತವಾಗಿಯೇ ವಾಪಸು ಬರಲಿಲ್ಲ. ಮೃತದೇಹ ಮಾತ್ರ ವಾಪಸು ಬಂತು. ಸಾವಿರ ಸಂಖ್ಯೆಯಲ್ಲಿ ಜನರನ್ನು ದುಃಖ ಸಾಗರದಲ್ಲಿ ಮುಳುಗಿಸಿತು. ಹುಟ್ಟಿದ ಮನುಷ್ಯನಿಗೆ ಸಾವು ಸಹಜ. ಆದರೆ ಹುಟ್ಟಿದ ಮನುಷ್ಯ ಸಾಧಾರಣವಾಗಿ ಸಾಯುವಾಗ ತನ್ನ ಆಪ್ತ-ಮಿತ್ರರನ್ನು ಮಾತ್ರ ದುಃಖಿಸುತ್ತಾನೆ. ಪಿ.ರಾಮಚಂದ್ರರಾಯರ ಅಕಾಲಿಕ ಮರಣಕ್ಕೆ ಸಂತಾಪ ವ್ಯಕ್ತಮಾಡಿದವರು ಅಪಾರ. ಮುಖ್ಯಮಂತ್ರಿಯವರಿಂದ ಹಿಡಿದು ಎಲ್ಲಾ ವಿರೋಧ ಪಕ್ಷಗಳ ಸಾಮೂಹಿಕ ಸಂಘಟನೆಗಳ ಸಮಾಜದಲ್ಲಿಯ ಪ್ರಮುಖ ವ್ಯಕ್ತಿಗಳ ಗೌರವಕ್ಕೆ ಪಾತ್ರರಾದವರು ಪಿ.ರಾಮಚಂದ್ರ ರಾಯರು. ಅವರು ಕಳೆದ 50 ವರ್ಷಗಳಲ್ಲಿ ಶಿಕ್ಷಕರಾಗಿ, ಕಮ್ಯುನಿಸ್ಟ್ ಪಕ್ಷದ ಕಾರ್ಮಿಕ ಸಂಘಗಳ, ರೈತ ಸಂಘದ ಮುಖಂಡನಾಗಿ ಸಲ್ಲಿಸಿದ ಸೇವೆ ಚಿರಸ್ಮರಣೀಯ.

ಪಿ.ರಾಮಚಂದ್ರರಾಯರು ಪ್ರಾರಂಭದ ದಿನಗಳಲ್ಲಿ ಕಾರ್ಮಿಕ ಸಂಘಟನೆ ಕಟ್ಟಿ ನಡೆಸಿದ ಹೋರಾಟಗಳ ಪೂರ್ಣ ನೆನಪು ನನಗಿಲ್ಲ. ಯಾಕೆಂದರೆ ಈ ಕಾಲಘಟ್ಟದಲ್ಲಿ ನಾನು ಉತ್ತರ ಕರ್ನಾಟಕದಲ್ಲಿ ಪಕ್ಷ, ರೈತ ಸಂಘಟನೆ, ಕಾರ್ಮಿಕ ಸಂಘಟನೆ ಹೋರಾಟ, ಏಕೀಕರಣ ಹೋರಾಟಗಳಲ್ಲಿ ಮುಳುಗಿದ್ದೆ. ಅವರ 'ಮಾಸ್ತರ' ವೃತ್ತಿಯ ಮಾರ್ಕ್ಸ್‌ವಾದ ಸಿದ್ಧಾಂತದ ತಿಳುವಳಿಕೆಯ ಪರಿಚಯ ವಾದದ್ದು ನನಗೆ 1952-1953 ರಲ್ಲಿರಬೇಕು - ಹುಬ್ಬಳ್ಳಿಯ ಗಿರೀಶ ಆಶ್ರಮದಲ್ಲಿ ರಾಜ್ಯ ಮಟ್ಟದ ಪಾರ್ಟಿ ಕ್ಲಾಸ್ ನಡೆದಾಗ. ಎನ್.ಎಲ್.ಉಪಾಧ್ಯಾಯರು ಪಾರ್ಟಿ ಕಾರ್ಯದರ್ಶಿಯಾಗಿದ್ದರು. ಮಾರ್ಕ್ಸ್‌ವಾದದಲ್ಲಿ ಅತಿ ಪ್ರಮುಖ ವಿಷಯವಾದ 'ಚಾರಿತ್ರಿಕ ಮತ್ತು ಭೌತಿಕ ದ್ವಂದ್ವವಾದ' ಈ ವಿಷಯವನ್ನು ಪಿ.ರಾಮಚಂದ್ರರಾಯರಿಗೆ ಒಪ್ಪಿಸಲಾಗಿತ್ತು. ಆಗ ಅವರು ಇನ್ನೂ ಮಾಸ್ತರರಾಗಿಯೇ ಇದ್ದರು. ನನಗೆ 'ಥಿಯರಿ ಆಫ್ ಸರ್‌ಪ್ಲಸ್ ವ್ಯಾಲ್ಯೂ' ಕೊಡಲಾಗಿತ್ತು. ಸರಳ ಕನ್ನಡದಲ್ಲಿ 'ಮಾಸ್ತರ'ರಿಂದ ಪಾಠ ಕೇಳಿದ ನಂತರ ನನಗೆ 1941 ರ ನಾಸಿಕ ಜೈಲಿನ ನೆನಪಾಯಿತು. ಜೈಲಿನಲ್ಲಿ ಅಜಯ ಕುಮಾರ್ ಘೋಷ್ ಅವರಿಂದ ಇದೇ ವಿಷಯದ ಮೇಲಿನ ಕ್ಲಾಸ್. ಆಗಲೇ ನಾನು ತಿಳಿದುಕೊಂಡೆ ಕರ್ನಾಟಕದಲ್ಲಿ ಮಾರ್ಕ್ಸ್‌ವಾದ ಸಿದ್ಧಾಂತವನ್ನು ಜನರಿಗೆ ಮನವರಿಕೆ ಆಗುವಂತೆ ತಿಳಿಸಿ ಹೇಳುವ ಒಬ್ಬ 'ಮಾಸ್ತ್ರ' ಸಿಕ್ಕಿದರು. ಅದರ ಸರಿಯಾದ ಉಪಯೋಗ ಮಾಡಿಕೊಳ್ಳಬೇಕು. ರಾಮಚಂದ್ರರಾಯರು 'ಮಾಸ್ತರರಾಗಿ' ಕರ್ನಾಟಕದ ರೈತ, ಕಾರ್ಮಿಕರಿಗೆ, ಯುವಕ, ವಿದ್ಯಾರ್ಥಿ, ಮಹಿಳೆಯರಿಗೆ, ಕೆಳಮಟ್ಟದಿಂದ ಹಿಡಿದು ಮೇಲ್ಮಟ್ಟದವರೆಗೆ ತಮ್ಮದೇ ಆದ ಭಾಷೆ, ಶೈಲಿಯಲ್ಲಿ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಸಿದ್ಧಾಂತ ಮಾತ್ರವಲ್ಲ, ಪ್ರಚಲಿತ ವಿಷಯಗಳನ್ನು ಮನದಟ್ಟಾಗುವಂತೆ ಕ್ಲಾಸು ಮೂಲಕ ತಿಳಿಸಿ ಹೇಳುವುದರಲ್ಲಿ ಯಶಸ್ವಿಯಾಗಿದ್ದಾರೆಂದು ನಾನು ಹೆಮ್ಮೆಯಿಂದ ಹೇಳಬಲ್ಲೆ.

ಪಕ್ಷದಲ್ಲಿ ಚಂಚಲತೆರಹಿತ ದೃಢ ನಿಲುಮೆ

ಭಾರತ ದೇಶದಲ್ಲಿ ಪಕ್ಷದ ಕಾರ್ಯಕ್ರಮ, ಧೋರಣೆ ಯಾವ ರೀತಿಯಲ್ಲಿರಬೇಕೆಂಬುದರ ಕುರಿತು ಮಧುರೈ ಪಾರ್ಟಿ ಕಾಂಗ್ರೆಸ್ಸಿನಿಂದಲೇ ತೀವ್ರ ಚರ್ಚೆ ನಡೆಯುತ್ತಿದ್ದು 1962 ರ ವಿಜಯವಾಡ ಪಾರ್ಟಿ ಕಾಂಗ್ರೆಸ್ಸಿನಲ್ಲಿ ಅದು ತೀವ್ರ ಸ್ವರೂಪ ಪಡೆದು 1964 ರಲ್ಲಿ ಪಕ್ಷ ಎರಡಾಗಿ ಸಿಪಿಐ(ಎಂ) ಮತ್ತು ಸಿಪಿಐ ಆದಾಗ, ನಮ್ಮ ರಾಜ್ಯದ ಮುಖಂಡರಲ್ಲಿಯೇ ಗೊಂದಲ ಪರಿಸ್ಥಿತಿಯಿದ್ದಾಗ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಧೋರಣೆಯನ್ನು ಎತ್ತಿ ಹಿಡಿದು ಬಹುಜನ ಪಕ್ಷದ ಸದಸ್ಯರನ್ನು ಸಿಪಿಐ(ಎಂ) ನಲ್ಲೇ ಉಳಿಸಲು ಪಿ.ರಾಮಚಂದ್ರರಾಯರು ಶ್ರಮಿಸಿದರು. ಪಕ್ಷದ ಕಾರ್ಯದರ್ಶಿಯಾಗಿದ್ದ ಎನ್.ಎಲ್.ಉಪಾಧ್ಯಾಯರು ಅನಾರೋಗ್ಯದಿಂದಾಗಿ ಕಾರ್ಯದರ್ಶಿ ಸ್ಥಾನ ಬಿಟ್ಟ ನಂತರ ಎಂ.ಎಚ್.ಕೃಷ್ಣಪ್ಪ ನವರು ಕಾರ್ಯದರ್ಶಿಯಾದರು. ಅವರು ಕಾರ್ಮಿಕ ವರ್ಗದ ಮೇಲಿನ ತನ್ನ ವಿಶ್ವಾಸವನ್ನು ಕಳೆದುಕೊಂಡು, ಎಡಪಂಥ ವಾದಕ್ಕೆ ಮಣಿದು, ನಕ್ಸಲ್‌ವಾದಿ ಸಿದ್ಧಾಂತದತ್ತ ರೈತ ಸಂಘ ಮತ್ತು ಪಾರ್ಟಿಯನ್ನು ಕೊಂಡೊಯ್ಯಲು ಪ್ರಯತ್ನಿಸಿದಾಗ ಎನ್.ಎಲ್., ಸೂರಿ ಮೊದಲಾದ ವರಿಗೆ ಬೆನ್ನೆಲುಬಾಗಿ ನಿಂತು ಕೃಷ್ಣಪ್ಪ ಮತ್ತು ಅವರ ಗುಂಪಿನಿಂದ ಪಕ್ಷವನ್ನು ಉಳಿಸಲಿಕ್ಕೆ ಸಹಾಯ ಮಾಡಿದವರು ಪಿ.ರಾಮಚಂದ್ರ ರಾಯರು. ಆನಂತರ ಪಕ್ಷದ ಕಾರ್ಯದರ್ಶಿ ಯಾಗಿ ಬಂದ ಎಂ.ಕೆ.ಭಟ್ ಅವರು ಇಡೀ ಪಕ್ಷವನ್ನೇ ಅಮೆರಿಕದ ಸ್ವಯಂ ಸೇವಾ ಸಂಸ್ಥೆಯ ಬಾಲಂಗೋಚಿಯನ್ನಾಗಿ ಮಾಡಲು ಪ್ರಯತ್ನ ಮಾಡಿದಾಗ, ಅವರನ್ನು ಪಕ್ಷದ ಕಾರ್ಯದರ್ಶಿ ಸ್ಥಾನದಿಂದ ತೆಗೆದು ಹಾಕಿದ ನಂತರ ಪಕ್ಷದೊಳಗುಂಟಾಗಿದ್ದ ಗೊಂದಲಮಯ ಪರಿಸ್ಥಿತಿಯಲ್ಲಿ ಧೈರ್ಯದಿಂದ ಪಕ್ಷವನ್ನು ಉಳಿಸುವ, ಬೆಳೆಸುವ ಸಲುವಾಗಿ ಪಕ್ಷದ ಕಾರ್ಯದರ್ಶಿಯಾಗಿ ಜವಾಬ್ದಾರಿ ಹೊರಲು ಮುಂದಾದವರು ಪಿ.ರಾಮ ಚಂದ್ರರಾಯರು. ರಾಜ್ಯ ಸಮಿತಿಯ ಇಡೀ ಪಕ್ಷದ ಸದಸ್ಯರ ಬೆಂಬಲದಿಂದ ಪಕ್ಷವನ್ನು ಬೆಳೆಸಿದ್ದಾರೆ, ಮಾರ್ಗದರ್ಶನ ನೀಡಿದ್ದಾರೆ. ಪ್ರತಿಯೊಂದು ಸಾಮೂಹಿಕ ಸಂಘಟನೆಗಳಿಗೆ ಅವರವರ ಸಮಸ್ಯೆಗಳನ್ನು ಅರಗಿಸಿಕೊಂಡು ಸಮರ್ಪಕವಾಧ ಮಾರ್ಗದರ್ಶನ ನೀಡಿದ್ದಾರೆ. ಸಹಾಯ ಮಾಡಿದ್ದಾರೆ. ಕಾರ್ಯಕರ್ತರನ್ನು 'ಕಣ್ಣಿನ ಗೊಂಬೆಯಂತೆ' ರಕ್ಷಿಸು ಎಂದು ಜೋಸೆಫ್ ಸ್ಟಾಲಿನ್ ಹೇಳಿದ್ದರು. ರಾಮಚಂದ್ರ ರಾಯರು ಅದನ್ನು ಚಾಚೂ ತಪ್ಪದೆ ಅನುಸರಿಸುತ್ತಾ ಬಂದಿರುವುದರಿಂದ ತಾಯಿ, ಬಂಧು, ಬಳಗಕ್ಕಿಂತಲೂ ಹೆಚ್ಚಾಗಿ ಮಮತೆ, ಪ್ರೀತಿ, ವಿಶ್ವಾಸ, ಸಹಾಯ ಕಂಡ ಸಾವಿರಾರು ಜನ ಕೆಲಮಟ್ಟಿಗಾದರೂ ತಬ್ಬಲಿಯಾದೆ ಎಂದು ಭಾವಿಸಿದರೆ ತಪ್ಪೇನಿಲ್ಲ.

ಕರ್ನಾಟಕ ಪ್ರಾಂತ ರೈತ ಸಂಘಕ್ಕೆ ಪುನಶ್ಚೇತನ

ಭೂಸುಧಾರಣೆಗಾಗಿ ನಡೆದ ತೀವ್ರ ಚಳುವಳಿ ದೇವರಾಜ ಅರಸರು ಭೂ ಮಸೂದೆಗೆ ತಿದ್ದುಪಡಿ ಮಾಡಿ ಟೆನೆನ್ಸಿ ಕಾಯಿದೆ ಪ್ರಕಾರ ರೈತನಿಗೆ ಸ್ವಲ್ಪ ಮಟ್ಟಿಗೆ ಭೂಮಿಯ ಹಕ್ಕು ದೊರೆತ ನಂತರ ರಾಜ್ಯದಲ್ಲಿ ರೈತ ಚಳುವಳಿಗೆ ಹಿಂದೇಟಾಯಿತು. ಪಕ್ಷದ ಮುಖಂಡತ್ವದಲ್ಲಿ ಮೇಲಿಂದ ಮೇಲಾದ ಬದಲಾವಣೆ, ಕೃಷ್ಣಪ್ಪ ಮತ್ತು ಅವರ ಬೆಂಬಲಿಗರ ಉಚ್ಚಾಟನೆಗಳೆಲ್ಲ ರೈತ ಸಂಘದ ಚಳುವಳಿಯ ಮೇಲೆ ಪರಿಣಾಮ ಬೀರಿತ್ತು. ಆಗ ಪಿ.ರಾಮಚಂದ್ರರಾಯರು ರೈತ ಸಂಘದ ಕಾರ್ಯದರ್ಶಿಯಾಗಿ ಅದಕ್ಕೆ ಪುನರ್ಜೀವ ಕೊಡಿಸಲು ಪ್ರಯತ್ನಿಸಿದರು. ಅದರ ಪರಿಣಾಮವಾಗಿ ರೈತ ಸಂಘ ಚೇತರಿಸಿ ಹಲವಾರು ಹೋರಾಟಗಳನ್ನು ನಡೆಸಲು ಸಾಧ್ಯವಾಯಿತು.

ರೈತ ಬೆಳೆದ ಬೆಳೆಗೆ ಯೋಗ್ಯ ಬೆಲೆ ಸಿಗಲೇಬೇಕೆಂದು ಅಖಿಲ ಭಾರತ ಕಿಸಾನ್ ಸಭಾ, ಹಾಗೆಯೇ ರಾಜ್ಯ ರೈತ ಸಂಘ ಹೋರಾಡುತ್ತಾ ಬಂದಿದೆ. ಆದರೆ ಆನಂತರದ ವರ್ಷಗಳಲ್ಲಿ ರೈತರು ತಾವು ಇಷ್ಟು ದಿವಸ ಬೆಳೆಯುತ್ತಿದ್ದ ಧಾನ್ಯಗಳನ್ನು ಬಿಟ್ಟು ವ್ಯಾಪಾರಿ ಬೆಳೆ ಬೆಳೆಯಲು ಪ್ರಾರಂಭಿಸಿದರು. ಪಶ್ಚಿಮ ಬಂಗಾಳದಲ್ಲಿ ನಾರು, ಉತ್ತರ ಪ್ರದೇಶ, ಮಹಾರಾಷ್ಟ್ರ, ಕರ್ನಾಟಕದಲ್ಲಿ ಕಬ್ಬು, ಮಹಾರಾಷ್ಟ್ರ-ಕರ್ನಾಟಕದಲ್ಲಿ ಅರಳೆ(ಹತ್ತಿ) ಗೇರುಬೀಜ ಮತ್ತು ತೆಂಗು-ಕೇರಳ, ಅಡಿಕೆ-ಕರ್ನಾಟಕ, ಗೋಧಿ -ಪಂಜಾಬ ಈ ರೀತಿಯಲ್ಲಿ ಬೆಳೆಗಳು ಬೆಳೆದು, ಅವುಗಳ ಬೆಲೆ ಮತ್ತು ಮಾರ್ಕೆಟ್ಟಿನ ಪ್ರಶ್ನೆ ಉಂಟಾಯಿತು.

ಬೆಲೆಗಳ ಏರುಪೇರು, ಕೆಲವೇ ಜನ ಬೆಲೆ ನಿರ್ಧರಿಸುವ ಕ್ರಮಗಳಿಂದಾಗಿ ರೈತ ಅಪಾರ ನಷ್ಟ ಅನುಭವಿಸುವಂತಾಯಿತು. ಬೆಲೆಯಲ್ಲಿಯ ಏರುಪೇರುಗಳ ಜೊತೆಯಲ್ಲಿಯೇ ರಸಗೊಬ್ಬರ, ಹುಳ ನಾಶಕಗಳು ದುಬಾರಿಯಾದದ್ದು. 1974 ರಲ್ಲಿ ಎಣ್ಣೆ ಬೆಲೆ ಹೆಚ್ಚಾಗಿ ಪಂಪ್‌ಸೆಟ್ ನಡೆಸುವುದೇ ಅಸಾಧ್ಯವಾಯಿತು. ಆಗ ಅಖಿಲ ಭಾರತ ಕಿಸಾನ್ ಸಭಾ ರೈತರ ಬೆಳೆಗೆ ನ್ಯಾಯವಾದ ಬೆಲೆಗಾಗಿ ಚಳುವಳಿ ನಡೆಸಬೇಕಾಯಿತು. ಅದೇ ಸಮಯದಲ್ಲಿ ಮಹಾರಾಷ್ಟ್ರ-ಕರ್ನಾಟಕ-ಪಂಜಾಬಗಳಲ್ಲಿ ಬೇರೆ ರೈತ ಸಂಘಗಳೂ ಹುಟ್ಟಿಕೊಂಡು ನ್ಯಾಯಯುತ ಬೆಲೆಗಾಗಿ ತೀವ್ರ ಚಳುವಳಿ ನಡೆಸಿದವು.

1979 ರಲ್ಲಿ ವಾರಣಾಸಿಯಲ್ಲಿ ಸೇರಿದ ಎ.ಐ.ಕೆ.ಎಸ್. ಸಮ್ಮೇಳನ ಈ ಪ್ರಶ್ನೆಯೆತ್ತಿಕೊಂಡು, ರೈತರ ಶ್ರಮಕ್ಕೆ ತಕ್ಕ ಬೆಲೆ ಸಿಗಬೇಕೆಂಬ ಬೇಡಿಕೆ ಮಂಡಿಸಿತು. ಆನಂತರ 1982 ರಲ್ಲಿ ಮಿಡ್ನಾಪುರದಲ್ಲಿ ಸೇರಿದ ಸಮ್ಮೇಳನದಲ್ಲಿ ಪ್ರತಿಯೊಂದು ಬೆಳೆಯನ್ನು ಅಂದರೆ ಕಬ್ಬು, ಗೋಧಿ, ಅಕ್ಕಿ, ಹತ್ತಿ, ಸೆಣಬು(ನಾರು) ರಬ್ಬರ್, ತೆಂಗಿನಕಾಯಿ, ಅಡಿಕೆ, ಗೇರುಬೀಜ ಮೊದಲಾದ ಬೆಳೆಗಳ ಕುರಿತು ದೀರ್ಘ ಚರ್ಚೆ ನಡೆಸಿದಾಗ ಪ್ರತಿ ಬೆಳೆಗಾಗುವ ಒಟ್ಟು ಖರ್ಚು ಮತ್ತು ಅದಕ್ಕೆ ಲಭ್ಯವಾಗುವ ಬೆಲೆಯ ಕುರಿತು ಹೆಚ್ಚಿನ ಮಾಹಿತಿ ಸಿಕ್ಕಿತು. ಮೆಶಿನರಿ, ವಿದ್ಯುತ್, ರಸಗೊಬ್ಬರ, ಕ್ರಿಮಿನಾಶಕ ಮೊದಲಾದ ಒಕ್ಕಲುತನಕ್ಕೆ ಅವಶ್ಯವಿರುವ ವಸ್ತುಗಳ ಬೆಲೆ ಹೆಚ್ಚುತ್ತಿರುವಾಗ ಒಕ್ಕಲುತನದ ಖರ್ಚು ಜಾಸ್ತಿಯಾಗಿ, ಅದಕ್ಕೆ ತಕ್ಕಂತೆ ಬೆಲೆ ನಿಗದಿಯಾಗದಿದ್ದರೆ ರೈತ ಅಪಾರ ನಷ್ಟ ಅನುಭವಿಸ ಬೇಕಾಗುತ್ತದೆಂಬ ನಿರ್ಣಯಕ್ಕೆ ಬಂದು, ಪ್ರತಿ ರಾಜ್ಯದಲ್ಲಿ ಈ ವಿಭಾಗಗಳ ರೈತರನ್ನು ಸಂಪರ್ಕಿಸಿ, ಅವರ ಸಮಸ್ಯೆಗಳ ಅಭ್ಯಾಸ ನಡೆಸಿ, ಅವರ ಸಮಾವೇಶಗಳ ಮೂಲಕ ಅವರ ಬೇಡಿಕೆಗಳಿಗೆ ಪ್ರಚಾರ ಕೊಟ್ಟು ಸರಕಾರ ಆ ಬೇಡಿಕೆಗಳತ್ತ ಗಮನ ಹರಿಸುವಂತಾಗಬೇಕೆಂಬ ನಿರ್ಣಯ ಮಿಡ್ನಾಪುರದಲ್ಲಾಯಿತು. ಆಗ ರಾಜ್ಯ ರೈತ ಸಂಘದ ಕಾರ್ಯದರ್ಶಿಯಾಗಿದ್ದ ಪಿ.ರಾಮಚಂದ್ರರಾಯರು ಈ ನಿರ್ಣಯವನ್ನು ರಾಜ್ಯದಲ್ಲಿ ಅನುಷ್ಠಾನಕ್ಕೆ ತರಲಿಕ್ಕೆ ವ್ಯಕ್ತಿಗತವಾಗಿ ಶ್ರಮಪಟ್ಟರು. ಈ ನಿರ್ಣಯದ ಮಹತ್ವವನ್ನು ರೈತ ಸಂಘದ ಕಮಿಟಿಗಳಿಗೆ ವಿವರಿಸಿ ಹೇಳಿದರು. ಈ ಕಾರಣದಿಂದಾಗಿಯೇ ಮಂಗಳೂರಿನಲ್ಲಿ ಅಡಿಕೆ ಬೆಳೆಗಾರರ ಸಮ್ಮೇಳನ, ಬೆಂಗಳೂರಿನಲ್ಲಿ ಸಣ್ಣ ಕಾಫಿ ತೋಟ ಮಾಲಕರ ಧರಣಿ, ರಾಯಚೂರಿನಲ್ಲಿ ಹತ್ತಿ ಬೆಳೆಗಾರರ ಸಮಾವೇಶ, ಬಿಜಾಪುರದಲ್ಲಿ ಉಳ್ಳಾಗಡ್ಡಿ (ಈರುಳ್ಳಿ) ಬೆಳೆಗಾರರ ಸಮಾವೇಶ, ಹೊಸಪೇಟೆಯಲ್ಲಿ ಕಬ್ಬು ಬೆಳೆಗಾರರ ಸಮಾವೇಶಗಳನ್ನು ನಡೆಸಲಾಯಿತು. ದುರಾದೃಷ್ಟದಿಂದ ಈ ರೀತಿ ಪ್ರಾರಂಭ ಮಾಡಿದ್ದನ್ನು ಮುಂದುವರಿಸಲು ಸಾಧ್ಯವಾಗಿಲ್ಲ, ಹೀಗೆ ರಾಜ್ಯದಲ್ಲಿ ಬಲಿಷ್ಠ ರೈತ ಸಂಘ ಮೂಡಿ ಬಂದು ಹಲವಾರು ಹೋರಾಟಗಳನ್ನು ನಡೆಸಲಿಕ್ಕೆ ಪಿ.ರಾಮ ಚಂದ್ರರಾಯರು ಪ್ರಚೋದಕ ರಾಗಿದ್ದರು.

ಹೀಗೆ ಕರ್ನಾಟಕದ ಪಕ್ಷ ಹಾಗೂ ಸಾಮೂಹಿಕ ಸಂಘಟನೆಗಳ ಸಂಘಟಕರಾಗಿ, ಚಳುವಳಿಗಾರರಾಗಿ, ಪ್ರಚಾರಕರಾಗಿ ನಿರಂತರ ಶ್ರಮಿಸಿದ ಪಿ.ರಾಮಚಂದ್ರ ರಾಯರು ಜನರ ಮನಸ್ಸಿನಲ್ಲಿ ಬಹುಕಾಲ ನೆನಪಿನಲ್ಲಿರು ವರೆಂದರೆ ತಪ್ಪಾಗಲಿಕ್ಕಿಲ್ಲ. ಅವರಂತೆ ನಾವೂ ದುಡಿಯೋಣ, ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳನ್ನು ಬಲಪಡಿಸೋಣ, ರಾಜ್ಯದಲ್ಲಿ ಬಲಿಷ್ಠವಾದ ಎಡ ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳನ್ನೆಲ್ಲ ಬಲಪಡಿಸಿ, ದೇಶಕ್ಕೆ ಗಂಡಾಂತರಕಾರಿಯಾದ ಬಿಜೆಪಿ ಕೋಮು ಶಕ್ತಿಯನ್ನು ನಿರ್ನಾಮ ಮಾಡುವ ಮೂಲಕ, ಜನತಾ ಪ್ರಜಾಪ್ರಭುತ್ವ ಕ್ರಾಂತಿ ಮಾಡಲು ಮುಂದೆ ಸಾಗೋಣ. ಅದುವೇ ಪಿ.ರಾಮಚಂದ್ರ ರಾಯರಿಗೆ ಅರ್ಪಿಸುವ ಶ್ರದ್ಧಾಂಜಲಿ.



ಮಾಸ್ತ್ರ ಬದುಕು ತುಂಬಿದ ಸ್ಫೂರ್ತಿ


ದುಡಿಯುವ ಜನಗಳ ವಿಮೋಚನೆಗೆ ತನ್ನನ್ನು ಅರ್ಪಿಸಿಕೊಂಡ ಕಾಮ್ರೇಡ ಪಿ.ಆರ್. ರವರ ಮಡದಿ ಲೀಲಾರವರು ಕಳೆದ ಐದು ದಶಕಗಳಲ್ಲಿ ಎಂತಹ ಕಷ್ಟ-ಸಂಕಷ್ಟಗಳನ್ನು ಅನುಭವಿಸಿದರು ಎಂಬುದು ಸಂಗಾತಿಗಳೆಲ್ಲರೂ ಊಹಿಸಬಹುದಾದ ಅಂಶ. ಮಾಸ್ತ್ರು ಎಂ.ಎಲ್.ಎ. ಆದ ನಂತರ ಪಕ್ಷದಿಂದ ಯಾವುದೇ ಅಲೋಯೆನ್ಸ್ ಪಡೆಯುತ್ತಿರಲಿಲ್ಲ. ಎಂ.ಎಲ್.ಎ. ಸ್ಥಾನ ಹೋದ ಮೇಲೂ ಅದರಲ್ಲಿ ಬರುವ ಅಲ್ಪ ಪೆನ್ಷನ್ನಿಂದಲೇ ಲೀಲಾರವರು ನಿಭಾಯಿಸಿಕೊಂಡಿದ್ದರು ಮಾತ್ರವಲ್ಲ ಅದರಲ್ಲೇ ಉಳಿಸಿರುವ 50,000 ರೂ.ಗಳನ್ನು ಪಕ್ಷದ ಕಟ್ಟಡ ನಿಧಿಗೆಂದು ಕಾಣಿಕೆಯಾಗಿ ನೀಡಿದ್ದಾರೆ. ಈ ವಿಷಯವನ್ನು ಮಂಗಳೂರಿನಲ್ಲಿ ಶ್ರದ್ಧಾಂಜಲಿ ಸಭೆಯಲ್ಲಿ ಕಾಂ. ಬಿ.ಮಾಧವರವರು ತಿಳಿಸಿದಾಗ ನೆರೆದಿದ್ದ ಜನಸ್ತೋಮಕ್ಕೆ ಲೀಲಾರವರ ಈ ಆದರ್ಶ ದುಗುಡದ ನಡುವೆಯೂ ಹೊಸ ಚೈತನ್ಯ ತುಂಬಿತು. ಸಮರ್ಪಿತ ಬದುಕುಗಳು ತುಂಬುವ ಚೈತನ್ಯವಿದು.

ದೆಹಲಿಯಲ್ಲಿ - ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸುರ್ಜಿತ್‌ರವರಿಂದ ಶ್ರದ್ಧಾಂಜಲಿ



ನನ್ನ ಮಾರ್ಗದರ್ಶಕ ಮಾಸ್ತ್ರು

- ಬಿ. ಮಾಧವ



ಕಾಮ್ರೇಡ್ ಪಿ.ರಾಮಚಂದ್ರರಾಯರನ್ನು ನಾನು ಮೊತ್ತಮೊದಲು ಭೇಟಿಯಾದದ್ದು 1965 ರ ಜನವರಿ ತಿಂಗಳಲ್ಲಿ. ಎಲ್ಐಸಿಯ ಸೇವೆಯಲ್ಲಿ ಧಾರವಾಡದಿಂದ ಉಡುಪಿಗೆ ಕೆಲವೇ ದಿನಗಳ ಮೊದಲು ವರ್ಗವಾಗಿ ಬಂದಿದ್ದ ನಾನು ಅಷ್ಟರಲ್ಲೇ ವಿಮಾ ನೌಕರರ ಸಂಘದ ಉಡುಪಿ ಘಟಕದ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದೆ. ಒಂದು ಶನಿವಾರ ಅಪರಾಹ್ನ ಯೂನಿಯನ್ ಆಫೀಸಿನಲ್ಲಿದ್ದಾಗ ಒಬ್ಬ ವ್ಯಕ್ತಿ ಅಲ್ಲಿಗೆ ಬಂದರು. ಅವರು ತನ್ನ ಪರಿಚಯ ಮಾಡಿಕೊಳ್ಳುತ್ತಾ 'ನಾನು ರಾಮಚಂದ್ರರಾವ್, ಐಕ್ಯರಂಗ ಪತ್ರಿಕೆಯ ಸಂಪಾದಕ. ಕಂಪ್ಯೂಟರೀಕರಣದ ವಿರುದ್ಧ ನಿಮ್ಮ ಸಂಘಟನೆಯ ನೇತೃತ್ವದಲ್ಲಿ ನಡೆಯುತ್ತಿರುವ ಚಳುವಳಿಯ ಕುರಿತು ಕೆಲವು ಮಾಹಿತಿಗಳನ್ನು ತಿಳಿದುಕೊಳ್ಳಲು ಬಂದಿದ್ದೇನೆ" ಎಂದರು. ನನಗೆ ತುಂಬಾ ಸಂತೋಷವಾಯಿತು. ಪತ್ರಿಕಾ ವರದಿಗಾರರು ದೊಡ್ಡ ದೊಡ್ಡ ಮುಖಂಡರನ್ನು ಭೇಟಿಯಾಗುವುದನ್ನು ಕೇಳಿದ್ದೆ. ಆದರೆ ಒಂದು ಪತ್ರಿಕೆಯ ಸಂಪಾದಕರೇ ನಮ್ಮ ಯೂನಿಯನ್ ಕಚೇರಿಗೆ ಬಂದಿದ್ದರು. ಅವರು ದಕ್ಷಿಣ ಕನ್ನಡ ಜಿಲ್ಲೆಯ ಪ್ರಸಿದ್ಧ ಸಿಪಿಐ(ಎಂ) ಮುಖಂಡರೆಂಬುದು ನನಗಿನ್ನೂ ಗೊತ್ತಿರಲಿಲ್ಲ. ಮುಂದೆ ಅದು ಗೊತ್ತಾದಾಗ, ಹೊಸ ಸಂಪರ್ಕಗಳನ್ನು ಬೆಳೆಸುವ ಅವರ ಸರಳ ವಿಧಾನವನ್ನು ನಾನು ಬಹಳಷ್ಟು ಮೆಚ್ಚಿದ್ದೆ. ಪ್ರಥಮ ಭೇಟಿಯಲ್ಲಿ ಅವರೇನೂ ಕಮ್ಯುನಿಸ್ಟ್ ತತ್ವ ಮಾತನಾಡಲಿಲ್ಲ. ಕಂಪ್ಯೂಟರೀಕರಣದ ವಿರುದ್ಧ ವಿಮಾ ನೌಕರರ ಹೋರಾಟಗಳ ಕುರಿತು ನನಗಿಂತಲೂ ಹೆಚ್ಚು ತಿಳಿದುಕೊಂಡಿದ್ದ ಅವರು, ತನಗೆ ಏನೂ ಗೊತ್ತಿಲ್ಲದಂತೆ ನಟಿಸಿ, ನನಗೆ ಗೊತ್ತಿದ್ದ ಮಾಹಿತಿಗಳನ್ನೆಲ್ಲಾ ಕೇಳಿ ತಿಳಿದುಕೊಂಡರು. ಅನಂತರ, ವಿಮಾ ನೌಕರರ ಹೋರಾಟಗಳನ್ನೂ ಒಳಗೊಂಡು, ಸರಕಾರದ ನೀತಿಗಳ ವಿರುದ್ಧ ವಿವಿಧ ಸಂಘಟನೆಗಳು ನಡೆಸುತ್ತಿದ್ದ ಹೋರಾಟಗಳ ಕುರಿತು, ನನಗೊಂದು ಪಾಠವನ್ನೇ ಹೇಳಿದಾಗ ಅವರು ಎಂತಹ ಮೇಧಾವಿ ಎಂಬುದು ನನಗೆ ತಿಳಿಯಿತು.

ಅನಂತರ ಮಾಸ್ಟರರನ್ನು ಭೇಟಿಯಾಗಲು ಮಂಗಳೂರಿಗೆ ಆಗಿಂದಾಗ ಹೋಗುವುದು ನನ್ನ ಪರಿಪಾಠವಾಯಿತು. ಅವರು ಉಡುಪಿಗೆ ಬಂದಾಗ ಅನೇಕ ಬಾರಿ ನನ್ನ ಮನೆಯಲ್ಲಿ ಉಳಕೊಂಡಿದ್ದರು. ಅಂದು ಮಾರ್ಕ್ಸ್‌ವಾದದ ಕುರಿತು ನನಗಿದ್ದ ಜ್ಞಾನ ತೀರ ಕಡಿಮೆ. ಧಾರವಾಡದಲ್ಲಿದ್ದಾಗ, ಸಹೋದ್ಯೋಗಿಯೊಬ್ಬರ ಪ್ರಭಾವದಿಂದಾಗಿ ಮಾರ್ಕ್ಸ್‌ವಾದದ ಮೂಲ ತತ್ವಗಳ ಪರಿಚಯವಾಗಿತ್ತು. ನನ್ನ ಜ್ಞಾನ ಸೀಮಿತವಾಗಿದೆ ಎಂದು ಗೊತ್ತಿದ್ದರೂ ಮಾಸ್ತ್ರು, ನಾನು ಅವರಿಗೆ ಸಮಾನವಾದ ಒಬ್ಬ ಮೇಧಾವಿಯೋ ಎಂಬಂತೆ ನನ್ನೊಂದಿಗೆ ಅರ್ಧರಾತ್ರಿಯವರೆಗೂ ಸೈದ್ಧಾಂತಿಕ ಚರ್ಚೆ ನಡೆಸುತ್ತಿದ್ದರು. ಕೆಲವೊಮ್ಮೆ ನಾನು ಪೆದ್ದು ಪೆದ್ದಾಗಿ ಮಾತನಾಡಿದಾಗ ನನ್ನನ್ನು ತಿದ್ದುತ್ತಿದ್ದರು.

ಓದುವ ಹಂಬಲ ಬಹಳಷ್ಟಿದ್ದರೂ, ಟ್ರೇಡ್ ಯೂನಿಯನ್ ಚಟುವಟಿಕೆಗಳಿಂದಾಗಿ ನನಗೆ ಓದಲು ಸಮಯವೇ ಸಿಗುತ್ತಿರಲಿಲ್ಲ. ಒಂದು ದಿನ ಈ ಸಮಸ್ಯೆಯನ್ನು ಮಾಸ್ಟರರ ಮುಂದಿಟ್ಟೆ.



ತಕ್ಷಣ ಅವರು ಸಲಹೆ ಕೊಟ್ಟರು. ಪ್ರತಿ ದಿನ ಒಂದು ಅಥವಾ ಎರಡು ತಾಸು ಓದಲೇಬೇಕೆಂಬ ದೃಢ ನಿರ್ಧಾರ ಮಾಡು. ರಾತ್ರಿ ಮಲಗುವ ಮೊದಲು ಅಥವಾ ಬೆಳಿಗ್ಗೆ ಎದ್ದೊಡನೆ ಅಷ್ಟು ಸಮಯ ನಿನಗೆ ಖಂಡಿತ ಸಿಗುತ್ತದೆ. ಇಂತಹ ನಿರ್ಧಾರವಿಲ್ಲದೆ ಗಂಭೀರವಾದ ಅಧ್ಯಯನ ಮಾಡಲು ಯಾರಿಗೂ ಸಾಧ್ಯವಿಲ್ಲ ಎಂದರು. ಮುಂದಿನ ದಿನಗಳಲ್ಲಿ ಈ ಸಲಹೆಯೇ ನನಗೆ ಮಾರ್ಗದರ್ಶಕವಾಯಿತು.

ಓದುವ ಅಭ್ಯಾಸವನ್ನು ನನಗೆ ಕಡ್ಡಾಯಗೊಳಿಸಲೋ ಎಂಬಂತೆ, ಮುಂದೆ ಅವರು ನನ್ನನ್ನು ಒಬ್ಬ ಪಾರ್ಟಿ ಶಿಕ್ಷಕನಾಗಿ ಬೆಳೆಯಲು ಪ್ರೋತ್ಸಾಹಿಸಿದರು. ನಾನು ಜಿಲ್ಲಾ ಸಮಿತಿಯ ಸದಸ್ಯನಾದ ನಂತರ ಪಕ್ಷದ ಅಥವಾ ಸಾಮೂಹಿಕ ಸಂಘಟನೆಗಳ ಕ್ಲಾಸುಗಳು ನಡೆಯುವಾಗಲೆಲ್ಲಾ ಯಾವುದಾದರೊಂದು ವಿಷಯದ ಮೇಲೆ ಪಾಠ ಮಾಡುವ ಜವಾಬ್ದಾರಿಯನ್ನು ನನಗೆ ಕೊಡಲಾರಂಭಿಸಿದರು. ಪಾಠ ಮಾಡಲಿಕ್ಕಾಗಿ, ಸಂಬಂಧಿಸಿದ ವಿಷಯದಲ್ಲಿ ಲಭ್ಯವಿರುವ ಸಾಹಿತ್ಯಗಳನ್ನು ಸಂಗ್ರಹಿಸಿ ಅವುಗಳನ್ನು ಅನೇಕ ಬಾರಿ ಓದುವುದು ಅನಿವಾರ್ಯವಾಯಿತು. ಕಾರ್ಯಕರ್ತರನ್ನು ಸೈದ್ಧಾಂತಿಕವಾಗಿ ಬೆಳೆಸಲು ಇದೊಂದು ಉತ್ತಮ ವಿಧಾನ. ಆರಂಭ ಕಾಲದಲ್ಲಿ ನಾನು ಪಾಠ ಮಾಡುವಾಗ ಪ್ರತೀ ಸಲವೂ ಅವರು ನನ್ನ ಮುಂದೆ ಇತರ ವಿದ್ಯಾರ್ಥಿಗಳ ಜತೆಗೆ ಕುಳಿತು ಏಕಾಗ್ರತೆಯಿಂದ ಪಾಠ ಕೇಳುತ್ತಿದ್ದರು. ನನ್ನ ವಿವರಣೆಗಳಲ್ಲಿ ಕೊರತೆ ಇದೆಯೆಂದು ಕಂಡಾಗಲೆಲ್ಲಾ ಅವರು ಎದ್ದುನಿಂತು ಸಾಕಷ್ಟು ವಿವರಣೆಗಳನ್ನು ನೀಡಿ, ಪುನಃ ವಿದ್ಯಾರ್ಥಿಯಂತೆ ಕುಳಿತು ನನ್ನ ಪಾಠವನ್ನು ಮುಂದುವರಿಸಲು ಹೇಳುತ್ತಿದ್ದರು.

ಮಾಸ್ಟರರ ಅನೇಕ ಪಾಠಗಳನ್ನು ನಾನು ಕೇಳಿದ್ದೇನೆ. ಕ್ಲಿಷ್ಟ ವಿಷಯಗಳನ್ನು ವಿವರಿಸಲು ಅವರು ರಾಮಾಯಣ ಮತ್ತು ಮಹಾಭಾರತದ ಉದಾಹರಣೆಗಳನ್ನು ಕೊಡುವಾಗ ನನಗೆ ಮುಜುಗರವಾದದ್ದಿದೆ. ಈ ವಿಷಯ ಅವರೊಂದಿಗೆ ಚರ್ಚಿಸಿದ್ದೆ. ಅವಿದ್ಯಾವಂತ ಕಾರ್ಯಕರ್ತರೇ ಹೆಚ್ಚಿರುವ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದ್ವಂದ್ವಮಾನ ಭೌತವಾದದಂತಹ ವಿಷಯಗಳನ್ನು ಕಲಿಸಲು ಅವರು ಮಹಾಭಾರತದ ಉದಾಹರಣೆಗಳನ್ನು ಬಳಸುತ್ತಿದ್ದರು. ಯಕ್ಷಗಾನದ ಪ್ರಭಾವದಿಂದಾಗಿ ದ.ಕ.ಜಿಲ್ಲೆಯ ತೀರಾ ಅವಿದ್ಯಾವಂತರಿಗೂ ಪುರಾಣಗಳ ಕತೆಗಳು ಚೆನ್ನಾಗಿ ಗೊತ್ತಿರುತ್ತವೆ. ಮಾಸ್ಟರರು ಹೇಳುತ್ತಿದ್ದರು: ಗೊತ್ತಿರುವ ವಿಷಯಗಳ ಮೂಲಕ ಗೊತ್ತಿಲ್ಲದ ವಿಷಯಗಳನ್ನು ಕಲಿಸಬೇಕು' ದ.ಕ. ಜಿಲ್ಲೆಯ ಕಾರ್ಯಕರ್ತರಿಗೆ ಗೊತ್ತಿರುವ ವಿಷಯಗಳಾದ ಪುರಾಣದ ಕತೆಗಳ ಉದಾಹರಣೆಗಳ ಮೂಲಕ, ಅವರಿಗೆ ಗೊತ್ತಿಲ್ಲದ ವಿಷಯಗಳನ್ನು ಮಾಸ್ತ್ರು ಕಲಿಸುತ್ತಿದ್ದರು.

ಅಸಂಘಟಿತ ಕಾರ್ಮಿಕರನ್ನು ಸಂಘಟಿಸುವುದರಲ್ಲಿ ಮಾಸ್ತ್ರು ಅಪಾರ ಆಸಕ್ತಿ ವಹಿಸಿದ್ದರು. ಅಸಹಾಯಕರಾದ ಈ ಕಾರ್ಮಿಕರಿಗಾಗಿ ನಮ್ಮೆಲ್ಲಾ ಶಕ್ತಿಯನ್ನೂ ಉಪಯೋಗಿಸಿ ದುಡಿಯಬೇಕೆಂದು ಅವರು ಹೇಳುತ್ತಿದ್ದರು. ತೀವ್ರ ಶೋಷಣೆಯನ್ನು ಅನುಭವಿಸುತ್ತಿರುವ ಅಸಂಘಟಿತ ಕಾರ್ಮಿಕರು ಒಮ್ಮೆ ಸಂಘಟಿತರಾದರೆ, ಇತರ ಎಲ್ಲಾ ವಿಭಾಗಗಳಿಗಿಂತಲೂ ವೇಗವಾಗಿ ಅವರು ಕ್ರಾಂತಿಕಾರಿ ಪ್ರಜ್ಞೆಯನ್ನು ಗ್ರಹಿಸಬಲ್ಲರೆಂಬುದು ಅವರ ವಿಶ್ವಾಸವಾಗಿತ್ತು.

ಎಲ್ಲಿ ಹೋದರೂ ತಮ್ಮೊಡನಿರುವ ಸಂಗಾತಿಗಳ ಬಗ್ಗೆ ಅವರು ವಿಶೇಷ ಕಾಳಜಿ ವಹಿಸುತ್ತಿದ್ದರು. 1992 ರ ಡಿಸೆಂಬರ್ ತಿಂಗಳು, ಬಹುಶಃ ಅಂದು 15ನೇ ತಾರಿಖು ಬಾಬ್ರಿ ಮಸೀದಿ ನಾಶವಾದ ನಂತರದ ಹಿಂಸಾತ್ಮಕ ವಾತಾವರಣದಲ್ಲಿ ಅಂದಿನ ಮುಖ್ಯಮಂತ್ರಿ ವೀರಪ್ಪ ಮೊಯಿಲಿಯವರು ಸಂಜೆ 5 ಗಂಟೆಗೆ ಮಂಗಳೂರಿನ ಜಿಲ್ಲಾ ಪಂಚಾಯತ್ ಕಚೇರಿಯಲ್ಲಿ ಸರ್ವಪಕ್ಷಗಳ ಸಭೆ ಕರೆದಿದ್ದರು. ಮಾಸ್ತ್ರು ಮತ್ತು ನಾನು ನಮ್ಮ ಪಕ್ಷದ ಪರವಾಗಿ ಭಾಗವಹಿಸಿದ್ದೆವು. ಸಭೆ ಮುಗಿಯುವಾಗ ಗಂಟೆ ಏಳೂವರೆಯಾಯಿತು. ಏಳು ಗಂಟೆಗೆ ನಗರದಲ್ಲಿ ಕರ್ಫ್ಯೂ ಆರಂಭ. ಸಭೆಗೆ ಬಂದ ನೂರಾರು ಜನರ ಪೈಕಿ ನಮ್ಮಿಬ್ಬರಿಗೆ ಮಾತ್ರ ಸ್ವಂತ ವಾಹನಗಳಿರಲಿಲ್ಲ. ಎಲ್ಲರೂ ಅವರವರ ಕಾರುಗಳಲ್ಲಿ ಹೊರಟುಹೋದರು. ಮಾಸ್ಟರರ ಸ್ನೇಹಿತರೊಬ್ಬರು ಅಶೋಕನಗರಕ್ಕೆ ಸಮೀಪ ವಾಸಿಸುವವರಾಗಿದ್ದು ಅವರು ಮಾಸ್ಟನ್ನು ತಮ್ಮ ಕಾರಿನಲ್ಲಿ ಕರಕೊಂಡು ಹೋಗಲು ಮುಂದೆ ಬಂದರು. ರಸ್ತೆಯಲ್ಲಿ ಯಾವುದೇ ಬಸ್ಸು, ರಿಕ್ಷಾ, ಇತ್ಯಾದಿ ಇರಲಿಲ್ಲ. ರಸ್ತೆ ತುಂಬಾ ಸೀಟಿ ಊದುತ್ತಾ ತಿರುಗಾಡುತ್ತಿದ್ದ ಪೋಲೀಸರು ಮಾತ್ರ ಇದ್ದರು. ನಾನು ಸುಮ್ಮನೆ ನಿಂತಿದ್ದೆ. ಮಾಸ್ತ್ರು ತಮ್ಮ ಸ್ನೇಹಿತರನ್ನು ಸ್ವಲ್ಪ ಸಮಯ ಕಾಯಲು ಹೇಳಿ ನನ್ನ ಕೈ ಹಿಡಿದುಕೊಂಡು ಜಿಲ್ಲಾ ಪಂಚಾಯತಿನ ಆವರಣದಲ್ಲೆಲ್ಲಾ ತಿರುಗಾಡಿ, ತಮಗೆ ಪರಿಚಯವಿದ್ದ ಮುಖಂಡರಲ್ಲೆಲ್ಲಾ ಮಾಧವರನ್ನು ಕರಕೊಂಡು ಹೋಗಬಲ್ಲಿರಾ ಎಂದು ಕೇಳುತ್ತಾ ಹೋದರು. ಕಾಂಗ್ರೆಸ್ ಮುಖಂಡರಾಗಿದ್ದ ಅವರೆಲ್ಲರೂ ಮುಖ್ಯಮಂತ್ರಿಗಳ ಜತೆಗೆ ಸರ್ಕಿಟ್ ಹೌಸ್‌ಗೆ ಹೋಗುವವರಾಗಿದ್ದರು. ನನ್ನ ಮನೆಯ ದಾರಿಯಿಂದಾಗಿ ಹೋಗುವವರು ಯಾರೂ ಇರಲಿಲ್ಲ. ಕೊನೆಗೆ ಮಾಸ್ಟ್ರಿಗೆ ಒಂದು ಉಪಾಯ ಹೊಳೆಯಿತು. ಅವರು ನನ್ನನ್ನು ಕರಕೊಂಡು ಡಿವೈಎಸ್ಪಿ ಶ್ರೀ ಗಣಪತಿಯವರ ಬಳಿಗೆ ಹೋದರು. ನನ್ನನ್ನು ಹೇಗಾದರೂ ಮನೆಗೆ ತಲುಪಿಸಬೇಕೆಂದು ಹೇಳಿದರು. ಡಿವೈಎಸ್ಪಿಯವರು ಒಪ್ಪಿ ನನ್ನನ್ನು ತಮ್ಮ ಜೀಪಿನಲ್ಲಿ ಕರಕೊಂಡು ಹೋದ ನಂತರವೇ ಮಾಸ್ತ್ರು ತಮ್ಮ ಸ್ನೇಹಿತನ ಕಾರಿನಲ್ಲಿ ಮನೆಗೆ ಹೋದರು.

ಸೌಖ್ಯವಿಲ್ಲದೆ ಆಸ್ಪತ್ರೆಯಲ್ಲಿರುವ ಕಾರ್ಯಕರ್ತರಿಗೆ ಅವರು ಯಾವಾಗಲೂ ಸಹಾಯ ಮಾಡುತ್ತಿದ್ದರು. ಅವರ ಬಳಿ ಹಣವಿರುತ್ತಿರಲಿಲ್ಲ. ಆದರೆ ಯಾರಾದರೊಬ್ಬ ಹಿತೈಷಿಯ ಬಳಿಗೆ ಹೋಗಿ ಅವರಿಗೆ ಸಮಸ್ಯೆಯನ್ನು ವಿವರಿಸಿ, ಅವರಿಂದ ಹಣ ಸಂಗ್ರಹಿಸಿ ಸಂಬಂಧಪಟ್ಟ ಸಂಗಾತಿಗೆ ಕೊಡುತ್ತಿದ್ದರು.

ಕಾಮ್ರೇಡ್ ಪಿ.ರಾಮಚಂದ್ರರಾಯರು, ನಮ್ಮ ಮಾಸ್ಟ್ರು, ಒಬ್ಬ ಆದರ್ಶ ವ್ಯಕ್ತಿಯಾಗಿದ್ದರು.

ಪಿ.ಆರ್. ಮತ್ತು ಐಕ್ಯರಂಗ

ಪಕ್ಷದ ಸದಸ್ಯರ ಅಂಗಿಗೆ ಎರಡು ಜೋಬು, ಒಂದರಲ್ಲಿ ಪಕ್ಷದ ಪತ್ರಿಕೆ

ಇನ್ನೂ ಹದಿನೈದು ದಿನ ಕಳೆದಿಲ್ಲ. ಆಗಲೇ ಪಿಆರ್ ಇಲ್ಲವಾದ ಸುದ್ದಿ ಬಂದಿದೆ. ಕೇವಲ 15 ದಿನಗಳ ಹಿಂದೆ ಬೆಂಗಳೂರಿನ ಕರೂರ್ ವೈಶ್ಯ ಬ್ಯಾಂಕ್ ಯೂನಿಯನ್‌ನ ಸಭಾಂಗಣದಲ್ಲಿ ಕಾಂ|| ಪಿ.ಆರ್. ಅವರು ತಾಸುಗಟ್ಟಲೆ 'ಐಕ್ಯರಂಗ'ದ ಬಗ್ಗೆ ಕಳಕಳಿಯಿಂದ ಆಡಿದ ಮಾತುಗಳು ಕಿವಿಗಳಿಂದ ಆರುವ ಮುನ್ನವೇ ಈ ಸುದ್ದಿ ಬಂದಿದೆ.

'ಐಕ್ಯರಂಗ' ದುಡಿಯುವ ಜನರ ಪತ್ರಿಕೆಯ ಬಗ್ಗೆ ಅಗಾಧವಾದ ಕಾಳಜಿಯನ್ನಿಟ್ಟುಕೊಂಡಿದ್ದ ಅತ್ಯುತ್ತಮ ಸಂಗಾತಿಯನ್ನು ಕಳೆದುಕೊಂಡಿದೆ. ರಾಜ್ಯದಲ್ಲಿ ಕಮ್ಯುನಿಸ್ಟ್ ಪತ್ರಿಕೆಗಳ ಎಲ್ಲಾ ಏಳು ಬೀಳುಗಳನ್ನು ಇದುವರೆಗೆ ಕಂಡ ಸಂಗಾತಿಗಳ ಪೈಕಿ ಒಂದು ಮಹತ್ವದ ಕೊಂಡಿ ಕಳಚಿಹೋಗಿದೆ.

'ಐಕ್ಯರಂಗ' ತನ್ನ ಸಂಪಾದಕನನ್ನು ಕಳೆದುಕೊಂಡಿದೆ. ಐಕ್ಯರಂಗವನ್ನು ಬಣ್ಣಿಸುವುದಾದರೆ ಅದರಲ್ಲಿ ಖಂಡಿತಾ ಪಿಆರ್ ಅವರ ಬಣ್ಣನೆ ಇರುತ್ತಿತ್ತು. ಹಾಗೆಯೇ ಪಿಆರ್ ಅವರನ್ನು ವಿವರಿಸುವಾಗ ಐಕ್ಯರಂಗ ಇಲ್ಲದೆ ಅವರ ವ್ಯಕ್ತಿತ್ವವನ್ನು ಸಂಪೂರ್ಣವಾಗಿ ಹೇಳಿದಂತಾಗುತ್ತಿರಲಿಲ್ಲ. ಅಂತಹ ಒಬ್ಬ ಮಹತ್ವದ ಒಡನಾಡಿಯನ್ನು 'ಐಕ್ಯರಂಗ' ಕಳೆದುಕೊಂಡಿದೆ.

97ರ ಡಿಸೆಂಬರ್ ಕೊನೆಯ ದಿನ ಪಿಆರ್ ಅವರು ಹೇಳಿದ್ದು ಇನ್ನೂ ಎಲ್ಲಾ ಸಂಗಾತಿಗಳನ್ನು ಕಾಡುತ್ತಲೇ ಇದೆ.

'ಐಕ್ಯರಂಗ' ಬಳಗದ ಸಂಗಾತಿಗಳು ಪಕ್ಷದ ಸದಸ್ಯರ ಮುಂದೆ ಒಂದು ಪ್ರಶ್ನೋತ್ತರ ಪಟ್ಟಿಯನ್ನು ನೀಡಿದ್ದರು. ಅದರಲ್ಲಿ ಒಂದು ಪ್ರಶ್ನೆ - ಐಕ್ಯರಂಗಕ್ಕೆ ನೀವು ಎಷ್ಟು ಜನರನ್ನು ಚಂದಾದಾರರನ್ನಾಗಿಸಿದ್ದೀರಿ? ಎಂದು.

ಸಮ್ಮೇಳನದ ಕೊನೆಯ ದಿನ ಸಮ್ಮೇಳನದಲ್ಲಿ ಬಂದ ಚರ್ಚೆಗೆ ಉತ್ತರಿಸುತ್ತಾ ಮಾತನಾಡುತ್ತಿದ್ದ ಅವರು ನನಗೆ ಈ ದಿನ ತುಂಬಾ ನೋವಾಗಿದೆ, ಐಕ್ಯರಂಗದ ಪ್ರಶ್ನೆ ನನ್ನನ್ನು ಕಾಡುತ್ತಲೇ ಇದೆ, ನಾನು ಎಷ್ಟು ಜನರನ್ನು ಚಂದಾದಾರನನ್ನಾಗಿಸಿದೆ ಎಂದು ಮೇಲಿಂದ ಮೇಲೆ ಕೇಳಿಕೊಂಡೆ ಎಂದರು. ನಾನು ಐಕ್ಯರಂಗದ ಸಂಪಾದಕ ನಿಜ. ಐಕ್ಯರಂಗದ ಬಳಗ ತಮ್ಮ ಬಿಡುವಿಲ್ಲದ ಕೆಲಸಗಳ ಮಧ್ಯೆಯೂ ಅತ್ಯುತ್ತಮ ಪತ್ರಿಕೆಯನ್ನು ನೀಡುತ್ತದೆ. ಆದರೆ ನಮಗೆ ಅದರ ಪ್ರಸಾರ ಹೆಚ್ಚಿಸಲು ಸಾಧ್ಯವಾಗಲಿಲ್ಲವಲ್ಲಾ ಎಂದು ನೊಂದು ನುಡಿದರು.

ಈಗ ಕೇವಲ 15 ದಿನಗಳ ಹಿಂದೆ ಅವರು ಹೇಳಿದ ಮಾತು ಸಮ್ಮೇಳನದ ಮಾತಿನ ಮುಂದುವರಿಕೆಯಾಗಿತ್ತು. ತಾವು ಕಮ್ಯುನಿಸ್ಟರಾದ ದಿನಗಳನ್ನು ನೆನಸಿಕೊಂಡು ಅವರು ನಮ್ಮ ಕಾಲದಲ್ಲಿ ಕಮ್ಯುನಿಸ್ಟ್ ಪಕ್ಷದ ಸದಸ್ಯತ್ವ ನೀಡಲು ನಾವು ಎಷ್ಟು ನಮ್ಮ ಪಕ್ಷದ ಸಾಹಿತ್ಯವನ್ನು ಜನರ ಮಧ್ಯೆ ಕೊಂಡೊಯ್ದಿದ್ದೇವೆ ಎಂಬುದೂ ಮುಖ್ಯವಾಗಿತ್ತು. ಪಕ್ಷದ ಸಂಗಾತಿಗಳ ಉಡುಪಿಗೆ ಸದಾ ಎರಡು ಜೋಬಿರುತ್ತಿತ್ತು. ಒಂದರಲ್ಲಿ ಏನಾದರೂ ಇರಲಿ ಮತ್ತೊಂದರಲ್ಲಿ ಪಕ್ಷದ ಪತ್ರಿಕೆ ಇರುತ್ತಿತ್ತು ಎಂದರು.

ಪಕ್ಷದ ಪತ್ರಿಕೆ ಓದಿ ಪಕ್ಷದ ಬಗ್ಗೆ ಹಲವಾರು ಮಂದಿ ಆಕರ್ಷಿತರಾಗಿ ಬಂದಿದ್ದಾರೆ. ಆದರೆ ನಾವು ಇಂದು 'ಐಕ್ಯರಂಗ'ದ ಪ್ರಸಾರ ಹೆಚ್ಚಿಸಿಲ್ಲ ಎಂದರೆ ಅಷ್ಟು ಜನರು ಪಕ್ಷದ ಸದಸ್ಯರಾಗಲು ಗೋಡೆಯಾಗಿ ನಿಂತಿದ್ದೇವೆ ಎಂದು ಅರ್ಥ ಎಂದರು.

'ಐಕ್ಯರಂಗ' ಮಾರಾಟ ಮಾಡಿದರೂ ಸಹಾ ಐಕ್ಯರಂಗ ಕಛೇರಿಗೆ ಅದರ ಹಣ ಮುಟ್ಟಿಸದೆ ಭಾರೀ ಸಂಖ್ಯೆಯಲ್ಲಿ ಬಾಕಿ ಉಳಿಸಿಕೊಂಡಿರುವ ಬಗ್ಗೆ ಮಾತನಾಡುತ್ತಾ ಪಕ್ಷದ ಸಂಗಾತಿಗಳು ಯಾರೂ ಅದನ್ನು ದುರ್ವ್ಯಯ ಮಾಡಿರುವುದಿಲ್ಲ, ಆದರೆ ಇಂತಹ ಕೆಲಸಕ್ಕೆ ಈ ಹಣ ಎಂಬ ವಿವೇಚನೆಯೂ ಇರಬೇಕು. ಐಕ್ಯರಂಗಕ್ಕೆ ಬಾಕಿ ಇಟ್ಟುಕೊಂಡು ಅದರ ಪ್ರಗತಿಗೆ ಅಡ್ಡಗಾಲಾಗಿ ಅದು ಹಿನ್ನಡೆಗೆ ಸರಿಯುವಂತೆ ಮಾಡುತ್ತಾ ಮತ್ತೊಂದು ಹೋರಾಟ ಸಂಘಟಿಸಲು, ಕರಪತ್ರ ಮುದ್ರಿಸಲು ಆ ಹಣವನ್ನು ಬಳಸಬಾರದು ಎಂದು ಒತ್ತಿ ಹೇಳಿದರು.

ಮಂಗಳೂರಿನಲ್ಲಿ ತಾವು ಪತ್ರಿಕೆ ಮಾರುತ್ತಿದ್ದಾಗ ಮೊದಲು ಅದರ ಹಣ ಎಣಿಸಿ ಪಕ್ಷದ ಮುಖ್ಯಸ್ಥರ ಕೈಗಿಡಬೇಕಾಗಿತ್ತು ಎಂಬುದನ್ನು ನೆನಸಿಕೊಂಡರು.

ಮಂಗಳೂರಿನಲ್ಲಿ ನಡೆದ ಸಮ್ಮೇಳನದಿಂದ ಇಲ್ಲಿಯವರೆಗೆ ಇರುವ ವರ್ಷಗಳನ್ನು ಲೆಕ್ಕ ಹಾಕಿದ ಪಿಆರ್ ಮಂಗಳೂರು ಪಕ್ಷದ ಸಮ್ಮೇಳನದಲ್ಲಿ ಪೊಲಿಟ್ ಬ್ಯೂರೋ ಸದಸ್ಯ ಇ. ಬಾಲಾನಂದನ್ ಅವರು 'ಐಕ್ಯರಂಗ' ಪ್ರಸಾರ ಇನ್ನು ಒಂದು ವರ್ಷದಲ್ಲಿ 15 ಸಾವಿರ ಆಗಬೇಕು ಎಂದು ಅಣತಿ ನೀಡಿದ್ದರು. ನಾವು ಅದನ್ನು 10 ಸಾವಿರಕ್ಕೆ ಇಳಿಸಿದೆವು. ಆದರೆ ಇದು ಕಳೆದ ಕೆಲವು ವರ್ಷವಾದರೂ ಆ ಸಂಖ್ಯೆ ತಲುಪಲು ನಮಗೆ ಸಾಧ್ಯವಾಗಿಲ್ಲ ಎಂದು ವ್ಯಥೆಪಟ್ಟರು.

ಜಾಗತೀಕರಣದ ಸವಾಲು, ಕೋಮುವಾದಿಗಳ ಆತಂಕ ನಮ್ಮ ಮುಂದೆ ಇರುವಾಗ ಪತ್ರಿಕೆಯನ್ನು ಎತ್ತರಕ್ಕೆ ಬೆಳೆಸಬೇಕಾದ ಹೊಣೆ ನಮ್ಮ ನಿಮ್ಮೆಲ್ಲರ ಮೇಲಿದೆ. ಪ್ರತಿಯೊಬ್ಬರೂ ಪ್ರತಿ ಯೊಬ್ಬರನ್ನು ಚಂದಾದಾರರನ್ನಾಗಿಸಬೇಕು. ಪತ್ರಿಕೆ ಹೇಗಿರಬೇಕು ಎಂದು ತಿಳಿಸಬೇಕು. ಸುದ್ದಿ ಕಳಿಸಬೇಕು ಎಂದು ಮೇಲಿಂದ ಮೇಲೆ ಹೇಳಿದರು.

ಕಳೆದ ವರ್ಷ ಇದೇ ಸಭಾಂಗಣದಲ್ಲಿ ಐಕ್ಯರಂಗದ ವರದಿಗಾರರಿಗಾಗಿ ಏರ್ಪಡಿಸಿದ್ದ ಶಿಬಿರದಲ್ಲಿ ಐಕ್ಯರಂಗ ಆಯುಧವಾಗಬೇಕು ಎಂದಿದ್ದರು. ಇಡೀ ದಿನ ಐಕ್ಯರಂಗದ ಬಳಗದೊಂದಿಗೆ ಕುಳಿತು ವರದಿಗಾರಿಕೆಯ ಪಾಠ ಕೇಳಿಸಿಕೊಂಡು ತಮ್ಮ ಅನಿಸಿಕೆಗಳನ್ನು ಮುಂದಿಟ್ಟು ಈ ಶಿಬಿರಗಳು, ಐಕ್ಯರಂಗ ಉತ್ಸವಗಳು ಪ್ರತೀ ಜಿಲ್ಲೆಯಲ್ಲೂ ನಡೆಯಬೇಕು ಎಂದು ಆಶಿಸಿದ್ದರು.

ಪ್ರೀತಿಯ 'ಮಾಸ್ತರ್' ಬಗ್ಗೆ ಐಕ್ಯರಂಗದ ಜೋಳಿಗೆಯಲ್ಲಿ ಹಲವು ನೆನಪುಗಳಿವೆ. ಅವರು ಆಡಿದ ಮಾತು, ನೀಡಿದ ಸಲಹೆ ಎಲ್ಲವನ್ನೂ ಐಕ್ಯರಂಗ ತನ್ನ ಎದೆಯಲ್ಲಿಟ್ಟುಕೊಂಡಿದೆ.

ಪಿಆರ್ ಬಯಸಿದ ಐಕ್ಯರಂಗ ನೀಡುವ ಗುರಿ ನಮ್ಮದು ಆ ಮಾಸ್ಟರ್ ಬಯಸಿದ ಎತ್ತರಕ್ಕೆ ಐಕ್ಯರಂಗವನ್ನು ಕೊಂಡೊಯ್ಯುವ ಜವಾಬ್ದಾರಿ ನಿಮ್ಮದು.

- ಐಕ್ಯರಂಗ ಬಳಗ



ಜೀವನದುದ್ದಕ್ಕೂ ಆದರ್ಶ ಮಾಸ್ಟ್ರಾಗಿದ್ದವರು ಅವರು

– ಕಾಂ. ಇ.ಬಾಲಾನಂದನ್

ಕಾಮ್ರೇಡ್ ಪಿ.ರಾಮಚಂದ್ರರಾವ್ ರದ್ದು ಒಂದು ವಿಶಿಷ್ಟ ಮಾದರಿ. ಅರ್ಧ ಶತಮಾನದ ರಾಜಕೀಯ ಜೀವನದ ನಂತರವೂ ಅವರು ಒಬ್ಬ ಮಾದರಿ ಶಿಕ್ಷರಾಗಿಯೇ ಉಳಿದರು - ಅಬ್ಬರವಿಲ್ಲ, ಅಹಂಭಾವವಿಲ್ಲ - ಸರಳ, ವಿನಯಶೀಲ, ಪ್ರೀತಿ ಸೂಸುವ ವ್ಯಕ್ತಿತ್ವ. ಎಂತಹ ಉನ್ನತ ಸ್ಥಾನವನ್ನೇರಿದರೂ ಅವರು ಸದಾ ಒಬ್ಬ ಆದರ್ಶ ಶಿಕ್ಷಕರಾಗಿಯೇ ಉಳಿದರು. ಅವರನ್ನು ನಾವು ಹಾಗೆಂದೇ ನೆನಪಿಸಿ ಕೊಳ್ಳುತ್ತೇವೆ- ಈ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಿದವರು ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರಾದ ಇ.ಬಾಲಾನಂದನ್.

ಕಾಮ್ರೇಡ್ ಮಾಸ್ಟ ಪಾರ್ಥಿವ ಶರೀರ ಕೂಡಾ ಕಣ್ಮರೆಯಾಗುತ್ತಿದ್ದಂತೆ ಅಲ್ಲೇ ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಕಾಮ್ರೇಡ್ ಬಾಲಾನಂದನ್ ಮಾತನಾಡುತ್ತಿದ್ದರು. ಸೆಪ್ಟೆಂಬರ್ 17 ರಂದು ಕೇಂದ್ರ ಸಮಿತಿಯ ಸಭೆಯಲ್ಲಿ ಭಾಗವಹಿಸಲು ದೆಹಲಿಗೆ ತಲುಪಿದಾಗ ಎದೆ ನೋವೆಂದು ಹೇಳಿದ ಮಾಸ್ಟನ್ನು ರಾಮಮನೋಹರ ಲೋಹಿಯಾ ಆಸ್ಪತ್ರೆಗೆ ಸೇರಿಸಲಾಯಿತು. ಅಲ್ಲಿ ಅವರನ್ನು ಪರೀಕ್ಷಿಸಿದ ವೈದ್ಯರು ಗಂಭೀರ ಸ್ಥಿತಿಯೇನೂ ಇಲ್ಲ ಎಂದರಂತೆ. ಹಾಗಿದ್ದರೆ ತಾನಿಲ್ಲೇಕೆ ಇರಬೇಕು ಎಂದು ಪಕ್ಷದ ಕಚೇರಿಗೆ ಹಿಂದಿರುಗಿದ ಮಾಸ್ಟರರಿಗೆ ಮತ್ತೆ ರಾತ್ರಿ 8 ರ ವೇಳೆಗೆ ಎದೆನೋವು ಕಾಣಿಸಿಕೊಂಡಾಗ ಮತ್ತೆ ಅದೇ ಆಸ್ಪತ್ರೆಗೆ ಸೇರಿಸಲಾಯಿತು. ಆಗಲೂ ಗಂಭೀರ ಪರಿಸ್ಥಿತಿಯೇನೂ ಉಂಟಾಗಿರಲಿಲ್ಲ. ಆದರೆ ಸೆಪ್ಟೆಂಬರ್ 18 ರ ಮುಂಜಾನೆ ಎರಡು ಗಂಟೆಯ ವೇಳೆಗೆ ಭಾರೀ ಹೃದಯಾಘಾತ ಅವರ ಮೇಲೆ ಎರಗಿತ್ತು. ನೋವಿನಿಂದ ಎದ್ದು ನಿಂತ ಅವರು ಅಲ್ಲೇ ಕುಸಿದರು. ಪ್ರೀತಿಯ ಮಾಸ್ಟು ನಮ್ಮನ್ನಗಲಿಯೇ ಬಿಟ್ಟರು ಎಂದರು ಕಾಮ್ರೇಡ್ ಇಬಾಲಾನಂದನ್ ಅವರ ಜೀವನದ ಕೊನೆಯ ಬಗ್ಗೆ ಹೇಳುತ್ತ.

ಅವರದ್ದೊಂದು ವಿಶಿಷ್ಟ ಮಾದರಿ ಎಂದು ಮತ್ತೆ-ಮತ್ತೆ ಹೇಳಿದ ಬಾಲಾನಂದನ್ ಅವರ ಸಾಧನೆಗಳನ್ನು ನೆನಪಿಸಿಕೊಂಡರು. ಇತರ ರಾಜಕಾರಣಿ ಗಳಂತಲ್ಲ ನಮ್ಮ ಮಾಸ್ಟು. ಅವರೆಂದೂ ಕಾರ್ಯಕರ್ತರ ಮೇಲೆ ಯಜಮಾನಿಕೆ ನಡೆಸುತ್ತಿರಲಿಲ್ಲ. ಮಾದರಿ ಕಮ್ಯುನಿಸ್ಟರು ಅವರು. ಮಾಸ್ಟು ಸಾರ್ವಜನಿಕ ಕೆಲಸ ಮಾಡಲು ಆರಂಭಿಸಿದ ದಿನಗಳು ಇಂದಿನಂತಲ್ಲ. ಆಗ ಯಾವುದೇ ಕಾರ್ಮಿಕ ಹೋರಾಟ ಒಂದು ಸಮರವೇ ಆಗಿರುತ್ತಿತ್ತು. ಜೀವನ್ಮರಣ ಹೋರಾಟ ವಾಗಿರುತ್ತಿತ್ತು. ಅಂತಹ ದಿನಗಳಲ್ಲೂ ಹೆಂಚು ಕಾರ್ಮಿಕರನ್ನು, ಬೀಡಿ ಕಾರ್ಮಿಕರನ್ನು ಸಂಘಟಿಸಿದವರು, ರೈತಾಪಿ ಜನಗಳನ್ನು ಸಂಘಟಿಸಿದವರು ಅವರು. 13 ವರ್ಷಗಳ ಕಾಲ ಸಿಪಿಐ(ಎಂ) ನ ಕೇಂದ್ರ ಸಮಿತಿಯ ಸದಸ್ಯರಾಗಿಯೂ ಅವರು ಸಕ್ರಿಯರಾಗಿ ರುತ್ತಿದ್ದರು. ಈ ಕ್ರಾಂತಿಕಾರಿ ಮಾದರಿ ಇನ್ನೆಂದಿಗೂ ನಮ್ಮನಡುವೆ ಇಲ್ಲ. ಒಂದು ಶೂನ್ಯ ಸೃಷ್ಟಿಯಾಗಿದೆ. ಸಾಮೂಹಿಕವಾಗಿ ಶ್ರಮಿಸುವ ಮೂಲಕ ಅದನ್ನು ತುಂಬ ಬಹುದು. ಹೀಗೆ ತುಂಬುವ ಪ್ರತಿಜ್ಞೆ ಕೈಗೊಳ್ಳೋಣ, ರಾಜ್ಯದಲ್ಲಿ ಪಕ್ಷವನ್ನು ವಿಸ್ತರಿಸುವ ಅವರ ಕೆಲಸವನ್ನು ಮುಂದುವರಿಸೋಣ ಎಂದು ಕಾಮ್ರೇಡ್ ಬಾಲಾನಂದನ್ ಕರೆ ನೀಡಿದರು.

ನಂಬಲಿಕ್ಕಾಗದ ಸುದ್ದಿ

ಸೆಪ್ಟೆಂಬರ್ 18 ರ ಮುಂಜಾನೆ ಕೇಳಿದ ಸುದ್ದಿಯನ್ನು ನಂಬಲಿಕ್ಕಾಗಲಿಲ್ಲ - ಐದು ದಶಕಗಳ ಕಾಲ ಅವಿರತವಾಗಿ ದುಡಿದ ಮಾಸ್ಟು ಇದ್ದಕ್ಕಿದ್ದಂತೆ ಇನ್ನಿಲ್ಲ ಎಂಬುದು ನಿಜವಾಗಿಯೂ ಗಾಬರಿಯ ಸುದ್ದಿಯಾಗಿತ್ತು ಎಂದ ಕಾಮ್ರೇಡ್ ಸೂರಿಯವರು ಮೂರು ದಶಕಗಳ ಕಾಲದ ತಮ್ಮ ನಿಕಟ ಒಡನಾಟ ವನ್ನು ನೆನಪಿಸಿಕೊಂಡರು. ದ.ಕ. ಜಿಲ್ಲೆಯಲ್ಲಿ ಕಮ್ಯುನಿಸ್ಟ್ ಆಂದೋಲನ ವನ್ನು ವಿಭಜನೆ, ವಿಚ್ಛಿದ್ರಕಾರಿಕೆಗಳಿಂದ ಉಳಿಸಿ ಬೆಳೆಸಿದ ಅವರು ಪಕ್ಷದ ಕರೆಗೆ ಓಗೊಟ್ಟು ತಮ್ಮ ಕುಟುಂಬವನ್ನು ಬಿಟ್ಟು ಬೆಂಗಳೂರಿಗೆ ಬಂದರು. ಅವರು ಕೆಲಸ ಮಾಡದ ರಂಗವೇ ಇಲ್ಲ - ಕಾರ್ಮಿಕ ಆಂದೋಲನ, ರೈತ ಚಳುವಳಿ, ವಿದ್ಯಾರ್ಥಿ-ಯುವಜನ ಚಳುವಳಿ, ಮಹಿಳಾ ಚಳುವಳಿ, ಶಿಕ್ಷಕರ ಚಳುವಳಿ ಇತ್ಯಾದಿ ಇತ್ಯಾದಿ. ಓದು ಪ್ರಿಯ, ಸರಳ ಜೀವಿ, ಎಂ.ಎಲ್.ಎ, ಸಿಐಟಿಯು ನ ಪ್ರಧಾನ ಕಾರ್ಯದರ್ಶಿ, ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ, ಅಧ್ಯಕ್ಷ, ರಾಜ್ಯ ಸಿಪಿಐ(ಎಂ) ಕಾರ್ಯದರ್ಶಿ, ಕೇಂದ್ರ ಸಮಿತಿ ಸದಸ್ಯ ಹೀಗೆ ಉನ್ನತ ಸ್ಥಾನಗಳಲ್ಲಿ ದುಡಿದರೂ ಎಲೆ ಮರೆಯ ಕಾಯಿಯಂತೆ ಯಾವುದೇ ಅಹಂಭಾವವಿಲ್ಲದೆ ನಮ್ಮ ನಡುವೆ ಇದ್ದ ಅವರಿನ್ನು ನಮ್ಮೊಂದಿಗಿಲ್ಲ. ಅವರ ಕೆಲಸವನ್ನು ಮುಂದುವರೆಸುವುದೇ ಅವರಿಗೆ ನಾವು ಸಲ್ಲಿಸಬಹುದಾದ ಏಕೈಕ ಶ್ರದ್ಧಾಂಜಲಿ ಎಂದರು ಗದ್ಗದಿತರಾಗಿ ಕಾಮ್ರೇಡ್ ಸೂರಿ.

ಅತ್ಯುತ್ತಮ ಚಿಂತಕರು

ಹೋರಾಟಗಾರರು, ಸಂಘಟಕರು ಮಾತ್ರವೇ ಅಲ್ಲ ಅತ್ಯುತ್ತಮ ಚಿಂತಕ ರಾಗಿದ್ದವರು ಕಾಮ್ರೇಡ್ ಪಿ.ಆರ್. ಎನ್ನುತ್ತಾ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರೂ, ಶಾಸಕರೂ ಆದ ಜಿ.ವಿ. ಶ್ರೀರಾಮರೆಡ್ಡಿ ತಮ್ಮ ಶ್ರದ್ಧಾಂಜಲಿ ಅರ್ಪಿಸಿದರು. ಅವರ ಜನ್ಮಭೂಮಿ ದ.ಕ. ಹಾಗೂ ಕರ್ಮ ಭೂಮಿ ಕರ್ನಾಟಕ. ಇಲ್ಲಿ ಈಗ ಕೋಮುವಾದೀ ಹದ್ದುಗಳ ಹಾರಾಟ ನಡೆದಿದೆ. ಇದನ್ನೆದುರಿಸಲು ಅವರ ನಿರಂತರ ಚಿಂತನೆ, ತಾತ್ವಿಕ ಹೋರಾಟ ವನ್ನು ನಾವು ಮುಂದುವರಿಸುತ್ತೇವೆ ಎಂದು ಅವರು ಹೇಳಿದರು.

ಕೇರಳದ ಸಹಕಾರಿ ಮಂತ್ರಿ ಪಿನರಾಯಿ ವಿಜಯನ್ ಒಬ್ಬ ಹಿರಿಯ ಕಮ್ಯುನಿಸ್ಟರನ್ನು ಕಳಕೊಂಡಿದ್ದೇವೆ ಎಂದು ದುಃಖಿಸುತ್ತಾ ಒಂದು ವಾರದ ಹಿಂದೆಯಷ್ಟೇ ತಮ್ಮ ರಾಜ್ಯ ಕಾರ್ಯದರ್ಶಿಗಳ ಅಂತಿಮಯಾತ್ರೆಯಲ್ಲಿ ಪಾಲ್ಗೊಳ್ಳಲು ಕಣ್ಣೂರಿಗೆ ಮಾಸ್ಟು ಬಂದುದನ್ನು ನೆನಪಿಸಿಕೊಂಡರು. ಕೇರಳದ ಕಾರ್ಮಿಕ ವರ್ಗದ ಹೋರಾಟಗಳೊಡನೆ ನಿಕಟ ಸಂಪರ್ಕವಿಟ್ಟುಕೊಂಡು ಹಲವು ಬಾರಿ ಅಗತ್ಯ ಸಹಾಯವನ್ನು ಅವರು ಒದಗಿಸಿದ್ದನ್ನು, ಗಣೇಶ್ ಬೀಡಿ ಕಾರ್ಮಿಕರ ಹೋರಾಟದ ಒಂದು ಉದಾಹರಣೆ ಯೊಂದಿಗೆ ನೆನಪಿಸುತ್ತಾ ಕೇರಳ ರಾಜ್ಯ ಸಮಿತಿಯ ಪರವಾಗಿ ಶ್ರದ್ಧಾಂಜಲಿ ಅರ್ಪಿಸಿದರು. ಕಾಮ್ರೇಡ್ ಪಿ.ಆರ್. ರವರ ನಿಧನ ಕಾರ್ಮಿಕ ಚಳುವಳಿಗೊಂದು ದೊಡ್ಡ ನಷ್ಟ ಎಂದು ಕಾಸರಗೋಡಿನ ಸಂಸತ್ ಸದಸ್ಯ ಪಿ.ಗೋವಿಂದನ್ ದುಃಖಿಸಿದರು. ತಮಿಳುನಾಡು ರಾಜ್ಯ ಸಮಿತಿಯ ಪರವಾಗಿ ಶ್ರದ್ಧಾಂಜಲಿ ಅರ್ಪಿಸಿದ ಸೆಲ್ವ ಸಿಂಗ್‌ರವರು ತನ್ನ ಇಡೀ ಜೀವನವನ್ನು ಎಡ ಆಂದೋಲನಕ್ಕೆ, ಕಮ್ಯುನಿಸ್ಟ್ ಆಂದೋಲನಕ್ಕೆ ಮುಡಿಪಿಟ್ಟು ಅದಕ್ಕೆ ಗಮನಾರ್ಹ ಕೊಡುಗೆ ನೀಡಿದರು ಎಂದರು.

ರಾಜ್ಯದ ಹಿರಿಯ ಕಮ್ಯುನಿಸ್ಟ್ ಮುಖಂಡ ಎನ್.ಕೆ.ಉಪಾಧ್ಯಾಯ ಪಿ.ಆರ್.ರವರು ಇನ್ನಿಲ್ಲವೆಂಬುದನ್ನು ನಂಬಲಸಾಧ್ಯ ಎನ್ನುತ್ತಾ ಪಕ್ಷದ ಪತ್ರಿಕೆಯ ಸಂಪಾದಕರಾಗಿದ್ದ ಅವರು ಪಕ್ಷದ ಪತ್ರಿಕೆಯಂತೆ ಚಳುವಳಿ, ಸಂಘಟನೆ ಹಾಗೂ ಪ್ರಚಾರ ಈ ಮೂರು ಗುಣಗಳು ಮಾಸ್ಟಲ್ಲಿ ಕಂಡಿದ್ದೇನೆ ಎಂದರು. ಅದನ್ನು ನಾವೂ ಅಳವಡಿಸಿಕೊಂಡು, ನನಗಿಂತ ಪಾರ್ಟಿ ಹೆಚ್ಚು ಎಂಬ ಭಾವನೆಯಿಂದ, ಛಲದಿಂದ ಪಕ್ಷವನ್ನು ಬೆಳೆಸಬೇಕು ಎಂದು ಅವರು ಕರೆ ನೀಡಿದರು.

ಪ್ರತಿಜ್ಞೆ

ಶ್ರದ್ಧಾಂಜಲಿ ಸಭೆಯ ಅಧ್ಯಕ್ಷತೆ ವಹಿಸಿದ್ದ ಪಕ್ಷದ ದ.ಕ. ಜಿಲ್ಲಾ ಕಾರ್ಯದರ್ಶಿ, ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಕೆ.ಆರ್.ಶ್ರೀಯಾನ್ ಅವರು ಕೇವಲ 15 ದಿನಗಳ ಹಿಂದೆ ಯಷ್ಟೇ ಜಿಲ್ಲೆಯ ರೈತ ಚಳುವಳಿಯನ್ನು ಬಲಿಷ್ಟಗೊಳಿಸುವ ಬಗ್ಗೆ ಚರ್ಚಿಸಿದ್ದನ್ನು ನೆನಪಿಸಿಕೊಂಡರು. ತಾನು ರೈತ ಕಾರ್ಯಕರ್ತನಾಗಿ ಜೀವನ ಆರಂಭಿಸಿದ ಅವರೇ ತನ್ನ ಸ್ಫೂರ್ತಿ ಎಂದ ಕಾಮ್ರೇಡ್ ಶ್ರೀಯಾನ್ ಅವರು ಎಲ್ಲರಂತಲ್ಲ, ಶ್ರಮಜೀವಿ ವರ್ಗದ ಮುಖಂಡರಾಗಿ ಎಲ್ಲಾ ಜನವಿಭಾಗಗಳಿಗೆ ಸ್ಪಂದಿಸಿದವರು, ವಿದ್ವಾಂಸರ ನಡುವೆ ಕೂಡಾ ಹಿತೈಷಿಗಳನ್ನು ಗಳಿಸಿಕೊಟ್ಟವರು. ಅವರು ಬರೇ ಮಾರ್ಗದರ್ಶಕರಲ್ಲ, ಚಳುವಳಿಗೆ ಧುಮುಕು ತ್ತಿದ್ದವರು. ಜಿಲ್ಲೆಯಲ್ಲಿ ಕಮ್ಯುನಿಸ್ಟ್ ಚಳುವಳಿಗೆ ಸ್ಫೂರ್ತಿ ತುಂಬಿದ ಅವರು ಯಾವ ಉದ್ದೇಶಗಳಿಗೆ ತನ್ನನ್ನು ಅರ್ಪಿಸಿ ಕೊಂಡರೋ ಆ ಮಹಾನ್ ಉದ್ದೇಶಗಳ ಈಡೇರಿಕೆಗಾಗಿ ಸಾಮೂಹಿಕ ವಾಗಿ ದುಡಿ ಯುವ ಪ್ರತಿಜ್ಞೆ ಮಾಡುತ್ತೇವೆ ಎಂದರು.

ಪಕ್ಷದ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರೂ, ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರೂ ಆದ ಬಿ.ಮಾಧವರವರು ಸಭೆಯನ್ನು ನಿರ್ವಹಿಸಿದರು. ಕೊನೆಯಲ್ಲಿ ಜಿಲ್ಲಾ ಸಮಿತಿ ಸದಸ್ಯ ವಸಂತ ಆಚಾರಿ ಯವರು ವಂದನಾರ್ಪಣೆ ಮಾಡಿದರು.



ಜಿಲ್ಲಾ ಸಮಿತಿ ಕಚೇರಿಯ ಮುಂದೆ ಅಂತಿಮ ದರ್ಶನಕ್ಕಾಗಿ ದುಡಿಯುವ ಸಾಲುಗಟ್ಟಿ ಕಾದಿದ್ದ ಸಂಗಾತಿಗಳು, ಜನಗಳು



ದುಡಿಯುವ ಜನಗಳ ಕೆಂಪು ನಮನ





ಅಂತಿಮ ಪಯಣದಲ್ಲಿ...............

.... ಲಾಲ್ ಸಲಾಂ



ಲೆವಿಂಸ್ಕಿ ಪ್ರಕರಣ - ಫ್ಯಾಸಿಸ್ಟ್ ಕೂಟದ ಪಿತೂರಿ?

ಶರತ್ ಚಂದ್ರ

ಅಮೇರಿಕಾ ಮತ್ತು ಇಡೀ ಜಗತ್ತಿನಲ್ಲಿ ಇತ್ತೀಚಿನ ದಿನಗಳಲ್ಲಿ ಅತ್ಯಂತ ಮಹತ್ವದ ಸುದ್ದಿಯೋ ಎಂಬಂತೆ ಅಲ್ಲೋಲ-ಕಲ್ಲೋಲ ನಡೆಸಿದ ಮೋನಿಕಾ ಲೆವಿಂಸ್ಕಿ ಪ್ರಕರಣ ಅದರ ಪರಾಕಾಷ್ಟೆ ಮುಟ್ಟಿದೆ. ಈ ಬಗ್ಗೆ ತನಿಖೆ ನಡೆಸಲು ಸೆನೆಟ್‌ನಿಂದ ನೇಮಕವಾಗಿದ್ದ ಕೆನತ್ ಸ್ಟಾರ್ ವರದಿ ಸಲ್ಲಿಸಿದ್ದು ಅಧ್ಯಕ್ಷ ಕ್ಲಿಂಟನ್‌ರ ದೋಷಾರೋಪಣೆಗೆ ಸಿದ್ಧತೆ ನಡೆಯುತ್ತಿದೆ.

ಈ ಇಡೀ ಪ್ರಕರಣ ಮೇಲ್ನೋಟಕ್ಕೆ ಕಾಣುವಂತೆ ಉನ್ನತ ಅಧಿಕಾರಸ್ಥ ವ್ಯಕ್ತಿಗಳ ಲೈಂಗಿಕ ದುರುಪಯೋಗದ ಪ್ರಶ್ನೆ ಮಾತ್ರವಲ್ಲ. ಅಮೇರಿಕಾದ ಗುತ್ತೇದಾರಿ ಬಂಡವಾಳಶಾಹಿಯ ಅತ್ಯಂತ ಪ್ರತಿಗಾಮಿ ಬಲ ಪಂಥೀಯ ವಿಭಾಗ, ಪ್ರಜಾಪ್ರಭುತ್ವವನ್ನು ತುಳಿದು ತನ್ನ ಫ್ಯಾಸಿಸ್ಟ್ ಸರ್ವಾಧಿಕಾರ ಹೇರುವ ಪ್ರಯತ್ನದ ಭಾಗ ಎಂದೂ ಹೇಳಲಾಗುತ್ತಿದೆ. 1992ಕ್ಕಿಂತ ಮೊದಲು 24 ವರ್ಷಗಳಲ್ಲಿ 20 ವರ್ಷಗಳ ಕಾಲ ಅಮೇರಿಕವನ್ನು ಆಳಿದ ರಿಪಬ್ಲಿಕನ್ ಪಕ್ಷ ಕ್ಲಿಂಟನ್‌ಗೆ ಸೋತಾಗಿನಿಂದ ಕ್ಲಿಂಟನ್ ಸರ್ಕಾರವನ್ನು ಅಸಂವೈಧಾನಿಕ ರೀತಿಯಲ್ಲಿ ಉರುಳಿಸುವ ಸಂಚು ಹಾಕುತ್ತಿದೆ. ಸೆನೆಟ್‌ನ ಸ್ಪೀಕರ್ ಗಿಂಗ್ರಿಚ್ ಮತ್ತು 77 ಜನ ಸೆನೆಟರುಗಳ ಫ್ಯಾಸಿಸ್ಟ್ ಕೂಟ ತಮ್ಮ ಕಾರ್ಮಿಕ ವರ್ಗ-ವಿರೋಧಿ, ದೈತ್ಯ ಕಂಪನಿಗಳ-ಪರ, ಜನ-ವಿರೋಧಿ, ಪ್ರಜಾಪ್ರಭುತ್ವ-ವಿರೋಧಿ 'ಕಾಂಟ್ರಾಕ್ಟ'ನ್ನು ಹೇರಲು ಪ್ರಯತ್ನಿಸುತ್ತಿದೆ. ಸೋವಿಯೆತ್ ಒಕ್ಕೂಟದ ಪತನ ಹಾಗೂ ಸಮಾಜವಾದಿ ವ್ಯವಸ್ಥೆಯ ಹಿನ್ನಡೆಯ ಸಂದರ್ಭ ಬಳಸಿ 'ಸಮಾಜವಾದದ' ಭಯದಿಂದ ದುಡಿಯುವ ಜನತೆಗೆ ಕೊಡಲಾಗಿದ್ದ ಎಲ್ಲಾ ಹಕ್ಕು, ಸವಲತ್ತುಗಳನ್ನು ವಾಪಸ್ ಕಿತ್ತುಕೊಳ್ಳುವ ಸಂಚು ಈ 'ಕಾಂಟ್ರಾಕ್ಟ್'. ವೈದ್ಯಕೀಯ ಸೌಲಭ್ಯದ 'ಮೆಡಿಕೇರ್', ಕರಿಯರಿಗೆ ಮೀಸಲಾತಿ, ಬಡಜನರಿಗೆ, ನಿರ್ಗತಿಕರಿಗೆ ಸಹಾಯಧನ, ಕಾರ್ಮಿಕರ ದೈನಿಕ 8 ಗಂಟೆ ಕೆಲಸದ ಅವಧಿ, ವಲಸೆಗಾರರ ಕನಿಷ್ಠ ಹಕ್ಕುಗಳ ಹರಣ ಇವರ ಮೊದಲ ಗುರಿ. ಕಾರ್ಮಿಕರ, ಕರಿಯರ, ಲ್ಯಾಟಿನೋಗಳ, ಬಡವರ, ವಲಸೆಗಾರರ ಬೆಂಬಲ ಪಡೆದ ಕ್ಲಿಂಟನ್ ಈ 'ಕಾಂಟ್ರಾಕ್ಟ್' ಪೂರ್ತಿಯಾಗಿ ಒಪ್ಪಲು ಸಾಧ್ಯವಿಲ್ಲ. ಆದ್ದರಿಂದ 'ಕಾಂಟ್ರಾಕ್ಟ್' ಜ್ಯಾರಿ ಮಾಡಬೇಕಾದರೆ ಕ್ಲಿಂಟನ್‌ರನ್ನು ಅಸಂವೈಧಾನಿಕವಾಗಿಯಾದರೂ ಅಧಿಕಾರದಿಂದ ಹೊರತಳ್ಳಬೇಕು ಎಂಬುದು ಅವರ ಗುರಿ. ಅದಕ್ಕಾಗಿ ದೈತ್ಯ ಕಂಪನಿಗಳು ಗಿಂಗ್ರಿಚ್ ಗ್ಯಾಂಗ್‌ಗೆ ಹಣದ ಹೊಳೆ ಹರಿಸಿದರು. ಕ್ಲಿಂಟನ್‌ರ ಮೇಲೆ ಭ್ರಷ್ಟಾಚಾರ ಹಾಗೂ ಲೈಂಗಿಕ ದುರಾಚಾರದ ಆರೋಪ ಹೊರಿಸಲು ಪ್ರಯತ್ನ ನಡೆಯಿತು. ಇದಕ್ಕಾಗಿ ವಕೀಲರ, ಮಾಜಿ ಬೇಹುಗಾರಿಕೆ ಅಧಿಕಾರಿಗಳ, ದೊಡ್ಡ ತಂಡವೇ ರಾತ್ರಿ ಹಗಲು ದುಡಿಯುತ್ತಿತ್ತು. ಪೌಲಾ ಜೋನ್ಸ್ ಲೈಂಗಿಕ ಪ್ರಕರಣ, ವೈಟ್‌ವಾಟರ್ ಭ್ರಷ್ಟಾಚಾರ ಆಪಾದನೆ, ಇವನ್ನು ಕ್ಲಿಂಟನ್‌ರಿಗೆ ಮಸಿಬಳಿಯಲು ಶಕ್ತಿ ಮೀರಿ ಪ್ರಯತ್ನ ನಡೆಸಿದರೂ ಫಲಿಸಲಿಲ್ಲ. ಕೊನೆಗೆ ಮೋನಿಕಾ ಲೆವಿಂಸ್ಕಿ ಪ್ರಕರಣದಲ್ಲಿ ಸಂವಿಧಾನ-ಬಾಹಿರ, ಕಾನೂನು-ಬಾಹಿರ ಫ್ಯಾಸಿಸ್ಟ್ ಮಾದರಿಯ ವಿಧಾನಗಳನ್ನು ಬಳಸಿ ದೋಷಾರೋಪಣೆ ಹಂತಕ್ಕೆ ಒಯ್ಯಲು ಸಾಧ್ಯವಾಗಿದೆ.

ಮೊದಲ ಎರಡು ಪ್ರಕರಣಗಳಲ್ಲಿ ಕೇಸುಗಳು ನ್ಯಾಯಾಂಗದ ವಿಧಿ-ವಿಧಾನಗಳ ಪ್ರಖರತೆಯ ಮುಂದೆ ನಿಲ್ಲಲಾಗದೆ ಹೋದದ್ದರಿಂದ, ಲೆವಿಂಸ್ಕಿ ಪ್ರಕರಣದಲ್ಲಿ ಬಲಪಂಥೀಯ ಫ್ಯಾಸಿಸ್ಟ್ ಬತ್ತಳಿಕೆಯಲ್ಲಿರುವ ಎಲ್ಲಾ ಅಸ್ತ್ರಗಳನ್ನು ಬಳಸಲಾಯಿತು. ಮೊದಲನೆಯದಾಗಿ ಇದನ್ನು ನ್ಯಾಯಾಂಗದ ವಿಧಾನಗಳಿಗೆ ಹೊರತಾದ ಖಾಸಗಿ ವಿಚಾರಣಾಧಿಕಾರಿಯ ವಿಧಾನ ಬಳಸಲಾಯಿತು. ಸೆನೆಟ್‌ನಲ್ಲಿ ತನ್ನ ಅಲ್ಪ ಬಹುಮತ ಬಳಸಿ, ಬುಶ್ ಆಡಳಿತದಲ್ಲಿ ಅಟಾರ್ನಿ ಜನರಲ್ ಆಗಿದ್ದು ಕ್ಲಿಂಟನ್‌ರ ಕಾಲದಲ್ಲಿ ಅಧಿಕಾರ ಕಳೆದುಕೊಂಡ ಕೆನೆತ್ ಸ್ಟಾರ್‌ನನ್ನು ವಿಚಾರಣಾಧಿಕಾರಿಯಾಗಿ ನೇಮಿಸಲಾಯಿತು. ಆತ ರಿಪಬ್ಲಿಕನ್ ಪಕ್ಷದ ಹಾಗೂ ದೈತ್ಯ ಕಂಪನಿಗಳಿಗೆ ನಿಕಟವಾಗಿದ್ದು, ವಿಚಾರಣೆಗೆ ಬೇಕಾದ 'ಸ್ವತಂತ್ರ' 'ಮುಕ್ತ' ಮನಸ್ಸು ಹೊಂದಿರಲಿಲ್ಲವೆಂಬುದು ಸ್ಪಷ್ಟ. ಈತ ಈ ಪ್ರಕರಣದಲ್ಲಿ ಲೆವಿಂಸ್ಕಿ, ಆಕೆಯ ತಾಯಿ, ಇತರ ಹಲವಾರು ಸಾಕ್ಷಿಗಳಿಗೆ ಕ್ಲಿಂಟನ್‌ರ ವಿರುದ್ಧ ಸಾಕ್ಷ ಹೇಳದಿದ್ದರೆ, ಜೈಲು ವಾಸದ ಬೆದರಿಕೆ, ಸಾಕ್ಷ ಹೇಳಿದರೆ 'ಭಕ್ಷೀಸು' ಅಲ್ಲದೆ 'ಶಿಕ್ಷೆಯಿಂದ ಮುಕ್ತಿ'ಯ ಆಮಿಷವನ್ನು ಮುಕ್ತವಾಗಿ ಬಳಸಿದನೆನ್ನಲಾಗುತ್ತಿದೆ. ಆತ ತನ್ನ ವಿಚಾರಣೆಯಲ್ಲಿ ಎಲ್ಲಾ ಕಾನೂನು ಎಲ್ಲೆ ಮುರಿದು ಅಮೇರಿಕದ 50 ದಶಕದ ಕಮ್ಯುನಿಸ್ಟ್-ವಿರೋಧಿ ಮೆಕಾರ್ಥಿಯ ವಿಚಾರಣೆಯಂತೆ ಖಾಸಗಿ ಜೀವನದಲ್ಲಿ ಮಧ್ಯಪ್ರವೇಶ, ಬೇಹುಗಾರಿಕೆ - ಎಲ್ಲವನ್ನೂ ಬಳಸಿದ. ಅಮೇರಿಕದ 'ಸ್ವತಂತ್ರ' ಭಾರಿ ಪತ್ರಿಕೆಗಳು, ರೇಡಿಯೋ, ಟಿವಿಯ ಪ್ರಮುಖ ಹಾಗೂ ಪ್ರಬಲ ವಿಭಾಗ ಕೆನೆತ್ ಸ್ಟಾರ್‌ನ ಬೆಂಬಲಕ್ಕೆ, ಕ್ಲಿಂಟನ್ ವಿರುದ್ಧ ಅಪಪ್ರಚಾರಕ್ಕೆ ಟೊಂಕ ಕಟ್ಟಿ ನಿಂತಿತು. ಇದಕ್ಕಾಗಿ ಮಾಧ್ಯಮಗಳಿಗೆ, ಅಲ್ಲಿನ ಪ್ರಭಾವಶಾಲಿ ವ್ಯಕ್ತಿಗಳನ್ನು ಖರೀದಿಸಲು ಪುನಃ ಹಣದ ಹೊಳೆ ಹರಿಯಿತು. ಕೆನೆತ್ ಸ್ಟಾರ್ ವಕೀಲ, ನ್ಯಾಯಾಧೀಶ, ಪೋಲೀಸು-'ತ್ರಿಬಲ್ ಆಕ್ಟಿಂಗ್' ಮಾಡಿದ. ಇದಕ್ಕಾಗಿ ಹಿಂದೆ 'ಸರ್ಕಾರದ ಅಧಿಕಾರ ಧಾಳಿ, ಬೇಹುಗಾರಿಕೆ, ವಿಭಾಗಗಳಲ್ಲಿದ್ದ ಬಲಪಂಥೀಯ ಪ್ರಮುಖರ ಭಾರಿ ಬೆಂಬಲ ದೊರೆಯಿತು. ಈಗ ಇದನ್ನು ಕ್ಲಿಂಟನ್‌ರ ಅಧ್ಯಕ್ಷತೆ ಮುಗಿಸಲು, ಫ್ಯಾಸಿಸ್ಟ್ ಅಧಿಕಾರ ಸ್ಥಾಪಿಸಲು ಬಳಸಲಾಗುತ್ತಿದೆಯಂತೆ. ಸೆನೆಟ್‌ನ ದ್ವೈವಾರ್ಷಿಕ ಚುನಾವಣೆಗಳ ಹೊತ್ತಿಗೆ ಸರಿಯಾಗಿ ಈ ಪ್ರಕರಣವನ್ನು ರಿಪಬ್ಲಿಕನ್ ಅಲ್ಪ ಬಹುಮತ ಉಳಿಸಿಕೊಳ್ಳಲು ಹೆಚ್ಚಿಸಲು ಮುಕ್ತವಾಗಿ ಬಳಸಲಾಗುತ್ತಿದೆ. ಇದರಲ್ಲಿ ಸುದ್ದಿ-ಮಾಧ್ಯಮಗಳ ಪಾತ್ರ ಹೇಯವಾದದ್ದು. ಅಮೇರಿಕನ್ ರಾಜಕೀಯ, ಸಾರ್ವಜನಿಕ ಜೀವನ ಎಂದೂ ಈ ಕೀಳು ಮಟ್ಟಕ್ಕೆ ಇಳಿದಿರಲಿಲ್ಲ.

ಇದರರ್ಥ ಕ್ಲಿಂಟನ್‌ರ ಲೈಂಗಿಕ ಪ್ರಕರಣಗಳು ನಡದೇ ಇಲ್ಲ, ಅಥವಾ ಅವು ಸಮರ್ಥನೀಯ ಎಂದಲ್ಲ. ಆದರೆ ಸರಿಯಾದ ಪುರಾವೆ ಇಲ್ಲದೆ, ಕಾನೂನು ಬಾಹಿರ ಸಂವೈಧಾನಿಕ-ವಿರುದ್ಧವಾಗಿ ಈ ಪ್ರಕರಣವನ್ನು ಬಲಪಂಥೀಯ ಸರ್ವಾಧಿಕಾರ ಸಾಧಿಸಲು ಬಳಸಲಾಗುತ್ತಿದೆ ಎಂಬುದೂ ಗಮನಿಸಬೇಕಾದ ಅಂಶ. ಕ್ಲಿಂಟನ್ ಮತ್ತು ಡೆಮೊಕ್ರಾಟರು ಜನ-ಪರ ಸಾಚಾ ಜನ ಎಂದಲ್ಲ. ಕ್ಲಿಂಟನ್ ಮತ್ತು ಡೆಮೊಕ್ರಾಟರು ಗಿಂಗ್ರಿಚ್ ಗ್ಯಾಂಗ್‌ನ ಬಲಪಂಥೀಯ 'ಕಾಂಟ್ರಾಕ್' ಗೆ ಜನ-ಪರ ನೀತಿಗಳ ಸವಾಲು ಹಾಕದೆ ಇದ್ದದ್ದು, ರಿಪಬ್ಲಿಕನ್ನರಂತೆ ಉಗ್ರಗಾಮಿಯಲ್ಲದಿದ್ದರೂ ದುಡಿಯುವ-ಜನರ ಸವಲತ್ತುಗಳನ್ನು ಕಿತ್ತುಕೊಳ್ಳುವ ಬೂರ್ಜ್ವಾ ವರ್ಗ ಧೋರಣೆಯನ್ನೇ ಪ್ರದರ್ಶಿಸುತ್ತಿದ್ದುದು ಹೀಗೆ ಪರಿಸ್ಥಿತಿಯ ವಿಕೋಪಕ್ಕೆ ಕಾರಣವಾಗಿದೆ.

ಲೆವಿಂಸ್ಕಿ ಪ್ರಕರಣ ಸೇರಿದಂತೆ ಇಂತಹ 'ಪ್ರಕರಣ'ಗಳನ್ನು ಪ್ರಚುರ ಪಡಿಸುವ ಸುದ್ದಿ ಮಾಧ್ಯಮಗಳ ಹಿಂದೆ ಸಹ ಬೂರ್ಜ್ವಾ ವರ್ಗದ ಫ್ಯಾಸಿಸ್ಟ್ ಪಿತೂರಿ ಇದೆ. ಜನ ಇಂತಹ ಯಕಶ್ಚಿತ್ ವಿಷಯಗಳ ಬಗ್ಗೆ ತಲೆಕೆಡಿಸಿಕೊಳ್ಳುವುದು, ಅವರ ಜೀವನ ಮಟ್ಟದ, ಭದ್ರತೆಯ ಮೇಲೆ ಆಗುತ್ತಿರುವ ಆಘಾತಗಳನ್ನು ಮರೆಮಾಚುವುದು, ಆ ಬಗ್ಗೆ ಎದ್ದು ಬರಬಹುದಾದ, ರೋಷ, ಪ್ರತಿಭಟನೆಗಳನ್ನು ಬೇರೆ ಕಡೆಗೆ ಸೆಳೆಯುತ್ತದೆ. ಇಷ್ಟೆಲ್ಲಾ ಪ್ರಕರಣ ನಡೆದರೂ ಅಮೇರಿಕಾದ ಶೇಕಡಾ 60ಕ್ಕೂ ಹೆಚ್ಚು ಜನ ಕ್ಲಿಂಟನ್‌ರು ಅಧ್ಯಕ್ಷ ಪದವಿ ಬಿಡಬೇಕಿಲ್ಲ ಎಂದು ಹೇಳಿದ್ದಾರೆ. ಇದರರ್ಥ ಅವರು ಕ್ಲಿಂಟನ್‌ರ ದುರಾಚಾರದ ಬಗ್ಗೆ ಕೋಪ ಕ್ಕಿಂತ ಹೆಚ್ಚು, ಫ್ಯಾಸಿಸ್ಟ್ ಬೆದರಿಕೆಯ ಆತಂಕ ಅವರನ್ನು ಕಾಡುತ್ತಿರುವುದು ಎಂದು ಅಮೇರಿಕನ್ ಕಮ್ಯುನಿಸ್ಟ್‌ಪಕ್ಷ ಹೇಳಿದೆ.

ಬಂಡವಾಳ ಹೂಡಿಕೆ ಬಗ್ಗೆ ಬಹುಪಕ್ಷೀಯ ಒಪ್ಪಂದ ನಿಲ್ಲಿಸಿ

58 ಕಮ್ಯುನಿಸ್ಟ್ ಪಕ್ಷಗಳ ಮತ್ತು ಇತರ ಪ್ರಗತಿಪರ ಸಂಘಟನೆಗಳ ಒಕ್ಕೂರಲಿನ ಕರೆ

ಬಂಡವಾಳ ಹೂಡಿಕೆ ಬಗ್ಗೆ ಬಹುಪಕ್ಷೀಯ ಒಪ್ಪಂದದ (MAI- Multilateral Agreement in Investment) ಕರಡು ಒಂದರ ಬಗ್ಗೆ ಶ್ರೀಮಂತ ದೇಶಗಳ OCED ಹಲವು ತಿಂಗಳುಗಳಿಂದ ಚರ್ಚಿಸುತ್ತಿದೆ. MAI ನಿಲ್ಲಿಸಿ ಎಂದು 58 ಕಮ್ಯುನಿಸ್ಟ್ ಪಕ್ಷಗಳು ಮತ್ತು ಇತರ ಜನಪರ ಪ್ರಗತಿಪರ ಸಂಘಟನೆಗಳು ಒಕ್ಕೂರಲಿನ ಕರೆ ನೀಡಿವೆ. ಜಾಗತೀಕರಣದ ವಿಷಯದ ಬಗ್ಗೆ ಇಂತಹ ಅಂತರ್‍ರಾಷ್ಟ್ರೀಯ ಸ್ಪಂದನ ಇತ್ತೀಚಿನ ದಿನಗಳಲ್ಲಿ ಮೊದಲನೆಯದು. ಸಿ.ಪಿ.ಐ. (ಎಂ) ಸಹ ಈ ಹೇಳಿಕೆ ನೀಡಿದ ಸಂಘಟನೆಗಳಲ್ಲಿ ಒಂದು. OCED ಕಾರ್ಮಿಕರ ಸಾಮಾಜಿಕ, ಪ್ರಜಾಪ್ರಭುತ್ವ ಹಕ್ಕುಗಳಿಗೆ ಮತ್ತು ಸ್ವತಂತ್ರ್ಯ ದೇಶಗಳ ಸಾರ್ವಭೌಮತೆಗೆ ತೀವ್ರ ಬೆದರಿಕೆ ಒಡ್ಡಿದೆ. ಇದು ಒಂದು ಜಾಗತೀಕರಣಗೊಂಡ ಆರ್ಥಿಕದ ಸಂವಿಧಾನ ಆಗಲಿದೆ. ಇದು ಎಲ್ಲಾ ದೇಶಗಳು ತನ್ನ ಹಿತಾಸಕ್ತಿಗಳ ಹಿತರಕ್ಷಣೆಗೆ ಮಾಡಿರುವ ಕಾನೂನುಗಳನ್ನು ಅರ್ಥಹೀನಗೊಳಿಸಿವೆ ಎಂದು ಹೇಳಿಕೆ ತಿಳಿಸಿದೆ. ಈಗಾಗಲೇ ಜಾಗತೀಕರಣದ ಸುಳಿಯಲ್ಲಿ ಸಿಕ್ಕಿ ನರಳುತ್ತಿರುವ ಜಗತ್ತಿನ ದುಡಿಯುವ ಜನತೆ ಇಂತಹ ಇನ್ನಷ್ಟು ಸಂಕಷ್ಟಕ್ಕೆ ಒಳಗಾಗಲಿದೆ.

MAI ಬಗ್ಗೆ OCED ಯ ಶ್ರೀಮಂತ ದೇಶಗಳ ನಡುವೆ ಭಿನ್ನಾಭಿಪ್ರಾಯ ಇದ್ದು, ಚರ್ಚೆ ಮುಂದುವರೆಯುತ್ತಿದ್ದರೂ ಅಮೇರಿಕಾ ಇದನ್ನು ಹಿಂಬಾಗಲಿನಿಂದ WTO ಮೂಲಕ, ಅಥವಾ IMF ನ ನಿಯಮಗಳ ಮೂಲಕ ಎಲ್ಲರ ಮೇಲೂ ಹೇರುವ ಹೊಂಚು ಹಾಕುತ್ತಿದೆ. ಎಲ್ಲರ ಜೀವನದ ಮೇಲೂ ಪರಿಣಾಮ ಬೀರುವ ಇಷ್ಟು ಪ್ರಮುಖ ಒಪ್ಪಂದದ ಬಗ್ಗೆ OCED ಗುಪ್ತವಾಗಿ ಚರ್ಚಿಸುತ್ತಿವೆ. ಬಹುಸಂಖ್ಯಾತ ದೇಶಗಳು ಇದರಲ್ಲಿ ಭಾಗವಹಿಸಲಾಗುತ್ತಿಲ್ಲ.

MAI ನ ಏಕಮಾತ್ರ ಒತ್ತು ಇರುವುದು ಜಾಗತಿಕ ಬಂಡವಾಳಶಾಹಿ ಮೇಲೆ ಇರುವ ಯಾವುದೇ ತರಹದ ನಿರ್ಬಂಧಗಳನ್ನು ಕಿತ್ತುಹಾಕಿ ಮುಕ್ತ ಜಾಗತಿಕ ಬಂಡವಾಳಶಾಹಿಗೆ ಅನುವು ಮಾಡಿಕೊಡುವುದು. ಬಹುರಾಷ್ಟ್ರೀಯ ಕಂಪನಿಗಳ ಅತ್ಯಧಿಕ ಲಾಭದಾಸೆಗಾಗಿ ಜಾಗತಿಕ ಸರ್ವಾಧಿಕಾರಕ್ಕೆ ಎಡೆ ಮಾಡಿಕೊಡುವ ಈ ಒಪ್ಪಂದವನ್ನು ತಿರಸ್ಕರಿಸಬೇಕು, ಇದನ್ನು ಬಲವಾಗಿ ವಿರೋಧಿಸಿ ಪ್ರಚಾರ-ಪ್ರಕ್ಷೋಭೆ ನಡೆಸಬೇಕೆಂದು ಹೇಳಿಕೆ ತಿಳಿಸಿದೆ. ○

ಬೆಲೆಯೇರಿಕೆ ವಿರುದ್ಧ ಗುಜರಾತ್ ಬಂದ್

ವಿಶ್ವ

ಗುಜರಾತಿನಲ್ಲಿ ಆಡಳಿತ ನಡೆಸುತ್ತಿರುವ ಬಿ.ಜೆ.ಪಿ. ಬೆಲೆಯೇರಿಕೆಯನ್ನು ನಿಯಂತ್ರಿಸುವಲ್ಲಿ ಹಾಗೂ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವಲ್ಲಿ ಪೂರ್ಣವಾಗಿ ವಿಫಲವಾಗಿದೆ. ಇದಕ್ಕೆ ಪ್ರತಿಭಟನೆಯಾಗಿ ಪ್ರತಿಪಕ್ಷಗಳು ಕರೆ ಕೊಟ್ಟ ರಾಜ್ಯ ಬಂದ್ ಸಪ್ಟೆಂಬರ್ 18 ರಂದು ಯಶಸ್ವಿಯಾಗಿ ನಡೆಯಿತು.

ಈ ಬಂದ್ ಬಿ.ಜೆ.ಪಿ. ಸರಕಾರದ ಬಗ್ಗೆ ರಾಜ್ಯದ ಜನರಲ್ಲಿ ಮನೆ ಮಾಡಿರುವ ಅತೃಪ್ತಿಯ ವಕ್ತರೂಪವಾಗಿದೆ. ಬಂದ್ ಬಹುತೇಕವಾಗಿ ಶಾಂತಿಯುತವಾಗಿದ್ದುದು ಗಮನಾರ್ಹ ಅಂಶವಾಗಿತ್ತು.

ಕಾಂಗ್ರೆಸ್, ರಾಷ್ಟ್ರೀಯ ಜನತಾ ಪಕ್ಷ (ಆರ್.ಜೆ.ಪಿ.) ಮತ್ತು ಎಡಪಕ್ಷಗಳು ಬಂದ್‌ಗೆ ಕರೆ ಕೊಟ್ಟಿದ್ದವು.

ಅಹಮದಾಬಾದಿನಲ್ಲಿ ಅಂಗಡಿಗಳು ಮತ್ತು ಮಾರುಕಟ್ಟೆಗಳು ಮುಚ್ಚಿದ್ದವು. ಬಿ.ಜೆ.ಪಿ. ಪ್ರಾಬಲ್ಯದ ಪ್ರದೇಶಗಳಾದ ಖಾಡಿಯಾ, ರಾಯಪುರ, ಬಾಪುನಗರ, ನರನ್‌ಪುರ, ಗಾಂಧಿನಗರದಲ್ಲಿ ಮಾತ್ರವಲ್ಲದೆ ಇಡೀ ಉತ್ತರ ಗುಜರಾತ್ ಮತ್ತು ಕಛ್-ಸೌರಾಷ್ಟ್ರ ವಲಯಗಳಲ್ಲಿ ಬಂದ್ ಪೂರ್ಣವಾಗಿತ್ತು. ಮಧ್ಯ ಗುಜರಾತಿನ ಅನೇಕ ಭಾಗಗಳಲ್ಲಿ ಕೂಡಾ ಬಂದ್‌ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು.

ಪ್ರತಿಪಕ್ಷಗಳು ಪ್ರವಾಹ ಪೀಡಿತ ಪ್ರದೇಶಗಳನ್ನು ಬಂದ್ ಕರೆಯಿಂದ ಹೊರಗಿಟ್ಟಿದ್ದವು.

ಅಹಮದಾಬಾದ್ ಮತ್ತು ಗಾಂಧಿನಗರ ಸಹಿತ ರಾಜ್ಯದ ಅನೇಕ ಭಾಗಗಳಲ್ಲಿ ಬಹುತೇಕ ಅಂಗಡಿ ಮುಂಗಟ್ಟುಗಳು, ಶಾಲೆಕಾಲೇಜುಗಳು, ಸಿನಿಮಾ ಮಂದಿರಗಳು, ಬ್ಯಾಂಕ್‌ಗಳು ಮುಚ್ಚಿದ್ದವು. ರಸ್ತೆ ಬದಿಯ ಚಹಾ ಅಂಗಡಿಗಳು ಮತ್ತು ಪಾನ್‌ಬೀಡಾಗಳೂ ಮುಚ್ಚಿದ್ದವು. ಸರಕಾರಿ ಸ್ವಾಮ್ಯದ ಬಸ್ಸುಗಳ ಅಲ್ಪ ಸ್ವಲ್ಪ ಓಡಾಟ ಬಿಟ್ಟರೆ ಉಳಿದಂತೆ ವಾಹನ ಸಂಚಾರ ಸ್ತಬ್ಧವಾಗಿತ್ತು. ನಗರ ಪ್ರದೇಶಗಳಲ್ಲಿ ಆಟೋಗಳ ಓಡಾಟ ಇರಲಿಲ್ಲ.

ಅಸ್ಸಾಂನಲ್ಲಿ ಮತ್ತೆ ಭುಗಿಲೆದ್ದ ಜನಾಂಗೀಯ ಗಲಭೆಯಲ್ಲಿ 38 ಜನರ ಸಾವು

ಅಸ್ಸಾಮ್ ಕೊಕ್ರಜಾರ್ ಜಿಲ್ಲೆಯಲ್ಲಿ ಜನಾಂಗೀಯ ಗಲಭೆ ಮತ್ತೆ ಭುಗಿಲೆದ್ದಿದ್ದು ಸೆಪ್ಟೆಂಬರ್ 15 ಮತ್ತು 16 ರಂದು ನಡೆದ ಹಿಂಸಾಚಾರದಲ್ಲಿ 38 ಜನರು ಹತರಾಗಿದ್ದಾರೆ.

ಜಿಲ್ಲೆಯಲ್ಲಿ ಭಾರಿ ಪ್ರಮಾಣದಲ್ಲಿ ಅಗ್ನಿಸ್ಪರ್ಶ ನಡೆದಿರುವ ಬಗ್ಗೆಯೂ ವರದಿಯಾಗಿದೆ. ಸದ್ದಿಬಲ್ ಪ್ರದೇಶದಲ್ಲಿ ಇನ್ನೂ ಹಲವು ಶವಗಳು ದೊರೆತಿವೆ.

ಕಚುಗಾಂವ್ ಪ್ರದೇಶದಲ್ಲಿ ಬೋಡೋ ಉಗ್ರಗಾಮಿಗಳು ನಾಲ್ವರು ಸಂಥಾಲರನ್ನು ಕೊಂದಿದ್ದಾರೆ. ಮತ್ತೊಬ್ಬ ಸಂಥಾಲನ ಹತ್ಯೆ ಧಾರ್‌ಧರಾ ಪ್ರದೇಶದಲ್ಲಿ ನಡೆದಿದೆ.

ಈ ಘಟನೆಯಿಂದ ಭೀತಿಗೊಂಡಿರುವ ನೂರಾರು ಹಳ್ಳಿಗರು ಗುಳೆ ಹೋಗುತ್ತಿದ್ದರು ಪರಿಸ್ಥಿತಿ ಗಂಭೀರವಾಗಿದೆ. ಏತನ್ಮಧ್ಯೆ ಸಾವಿರಕ್ಕೂ ಹೆಚ್ಚು ಸಂಥಾಲರು ಗೋಸಿ ಗಾಂವ್ ರೈಲ್ವೆ ನಿಲ್ದಾಣಕ್ಕೆ ಧಾವಿಸಿ ಹೆಚ್ಚುವರಿ ಪರಿಹಾರ ಶಿಬಿರದ ವ್ಯವಸ್ಥೆಗೆ ಒತ್ತಾಯಿಸಿದ್ದಾರೆ.

ಒರಿಸ್ಸಾದಲ್ಲಿ ರಸ್ತೆ ತಡೆ ಚಳುವಳಿ

ಒರಿಸ್ಸಾದಲ್ಲಿ ಅಂಜನಾ ಮಿಶ್ರಾ ಪ್ರಕರಣ ಹೊಸ ತಿರುವನ್ನು ಪಡೆದುಕೊಂಡಿದ್ದು ಮುಖ್ಯಮಂತ್ರಿ ಜೆ.ಬಿ. ಪಟ್ನಾಯಕ್ ರಾಜಿನಾಮೆ ನೀಡಬೇಕೆಂಬ ಕೇಳಿಕೆ ಬಲವಾಗಿದ್ದು ಈ ಸಂಬಂಧ ಅಲ್ಲಿ ಚಳುವಳಿಯೂ ನಡೆದಿದೆ.

ರಾಜ್ಯದ ಮಾಜಿ ಅಡ್ವೋಕೇಟ್ ಜನರಲ್ ಇಂದ್ರಜಿತ್ ರಾಯ್ ಅಂಜನಾ ಮಿಶ್ರಾ ಎಂಬ ಮಹಿಳೆಯ ಅತ್ಯಾಚಾರಕ್ಕೆ ಯತ್ನಿಸಿದ ಪ್ರಕರಣ ಇಡೀ ದೇಶದ ಗಮನ ಸೆಳೆದಿತ್ತು. ಮಹಿಳಾ ಸಂಘಟನೆಗಳು ಹಾಗೂ ಪ್ರಜಾಪ್ರಭುತ್ವವಾದಿ ಚಳುವಳಿಯ ಸುದೀರ್ಘ ಹೋರಾಟ ಇಂದ್ರಜಿತ್ ರಾಯ್ ತಮ್ಮ ಹುದ್ದೆಗೆ ರಾಜಿನಾಮೆ ನೀಡುವಂತೆ ಮಾಡುವಲ್ಲಿ ಯಶಸ್ವಿಯಾಗಿತ್ತು.

ಅಂಜನಾ ಮಿಶ್ರಾ ಪ್ರಕರಣವನ್ನು ಮುಚ್ಚಿ ಹಾಕಲು ಮುಖ್ಯಮಂತ್ರಿ ಪಟ್ನಾಯಕ್ ಮತ್ತು ಇಂದ್ರಜಿತ್ ರಾಯ್ ಪಿತೂರಿ ಹೂಡಿದ್ದರು ಎಂದು ನಿವೃತ್ತ ಡಿ.ಜಿ.ಪಿ. (ರಾಜ್ಯ ಪೋಲೀಸ್ ಮಹಾನಿರ್ದೇಶಕ) ಎ.ಬಿ. ತ್ರಿಪಾಠಿ ಆಪಾದನೆ ಮಾಡಿರುವುದರಿಂದ ಪ್ರಕರಣ ಗಂಭೀರ ತಿರುವನ್ನು ಪಡೆದಿದೆ.

ರಾಯ್ ವಿರುದ್ಧ ಮೊಕದ್ದಮೆ ದಾಖಲಿಸಲಾಗದು. ಒಂದು ವೇಳೆ ದಾಖಲಿಸುವುದೇ ಆದಲ್ಲಿ ಐಪಿಸಿ ಸೆಕ್ಷನ್ 354ರನ್ವಯ ದಾವೆ ದಾಖಲಿಸಿಕೊಂಡರೆ ಸಾಕು ಎಂದು ಮುಖ್ಯಮಂತ್ರಿ ಪಟ್ನಾಯಕ್ ತಮ್ಮ (ತ್ರಿಪಾಠಿ) ಮೇಲೆ ಒತ್ತಡ ಹೇರಿದ್ದರು ಎಂದು ನ್ಯಾಯಾಲಯಕ್ಕೆ ಸಲ್ಲಿಸಿರುವ ಅಫಿಡವಿಟ್‌ನಲ್ಲಿ ತ್ರಿಪಾಠಿ ಹೇಳಿದ್ದಾರೆ.

ಕಳೆದ ವರ್ಷ ಜುಲೈನಲ್ಲಿ ನ್ಯಾಯಕೋರಿ ಅಡ್ವಕೇಟ್ ಜನರಲ್ ರಾಯ್ ಅವರ ಅಧಿಕೃತ ನಿವಾಸಕ್ಕೆ ಹೋಗಿದ್ದ ತಮ್ಮ ಮೇಲೆ ಅತ್ಯಾಚಾರ ನಡೆಸಲು ರಾಯ್ ಯತ್ನಿಸಿದರು ಎಂದು ಐಎಫ್‌ಎಸ್ ಅಧಿಕಾರಿಯೊಬ್ಬರ ವಿಚ್ಛೇದಿತ ಪತ್ನಿ ಅಂಜನಾ ಮಿಶ್ರಾ ದೂರಿದ್ದರು.

ಇದೀಗ ಪ್ರಕರಣವನ್ನು ಮುಚ್ಚಿ ಹಾಕುವ ಸಂಚು ನಡೆದಿತ್ತೆಂಬ ಸುದ್ದಿ ಬಹಿರಂಗಗೊಳ್ಳುತ್ತಲೇ ರಾಜ್ಯದ ಪ್ರತಿಪಕ್ಷಗಳು ಜಾಗೃತವಾಗಿ ಅತ್ಯಾಚಾರಕ್ಕೆ ಯತ್ನಿಸಿದ ವ್ಯಕ್ತಿಯ ರಕ್ಷಣೆಗೆ ಧಾವಿಸಿದ ಮುಖ್ಯಮಂತ್ರಿ ರಾಜಿನಾಮೆ ನೀಡಬೇಕೆಂದು ಒತ್ತಾಯಿಸಿ ಚಳುವಳಿ ನಡೆಸಿತು.

ಜನತಾದಳ, ಸಿ.ಪಿ.ಐ. ಮತ್ತು ಸಿ.ಪಿ.ಐ (ಎಂ) ಕರೆಯ ಮೇರೆಗೆ ಸೆಪ್ಟಂಬರ್ 21ರಂದು ಒರಿಸ್ಸಾ ರಾಜ್ಯಾದ್ಯಂತ ಮೂರು ಗಂಟೆಗಳ ಕಾಲ (ಬೆಳಿಗ್ಗೆ 10 ರಿಂದ ಮಧ್ಯಾಹ್ನ 1 ಗಂಟೆ) ರಸ್ತೆ ತಡೆ ಚಳುವಳಿ ನಡೆಯಿತು. ಪಟ್ನಾಯಕ್ ರಾಜಿನಾಮೆಗೆ ಒತ್ತಾಯಿಸಿ ಭುವನೇಶ್ವರ, ಕಟಕ್ ಸಹಿತ ರಾಜ್ಯದ ನಾನಾ ಭಾಗಗಳಲ್ಲಿ ರಸ್ತೆ ತಡೆ ಚಳುವಳಿ ನಡೆಸಿದ ಈ ಮೂರು ಪಕ್ಷಗಳ ನೂರಾರು ಕಾರ್ಯಕರ್ತರನ್ನು ಪೋಲೀಸರು ಬಂಧಿಸಿ ನಂತರ ಬಿಡುಗಡೆ ಮಾಡಿದರು.

ರಾಜ್ಯವನ್ನು ಕಾಡುತ್ತಿರುವ ಭೀಕರ ಬರಗಾಲ ಮತ್ತು ಬೆಲೆಯೇರಿಕೆ ಪರಿಸ್ಥಿತಿಯನ್ನು ಸೂಕ್ತವಾಗಿ ನಿಭಾಯಿಸಲು ರಾಜ್ಯ ಮತ್ತು ಕೇಂದ್ರ ಸರಕಾರ ವಿಫಲವಾಗಿರುವುದಕ್ಕೆ ಪ್ರತಿಭಟನೆ ದಾಖಲಿಸುವುದೂ ಸೆ. 21ರ ರಸ್ತೆ ತಡೆ ಚಳುವಳಿಯ ಉದ್ದೇಶವಾಗಿತ್ತು.

ರಾಜಧಾನಿ ಭುವನೇಶ್ವರದಲ್ಲಿ ಬಂಧಿತರಾದ 400ಕ್ಕೂ ಹೆಚ್ಚು ಜನರಲ್ಲಿ ಮಾಜಿ ಸ್ಪೀಕರ್, ಜನತಾದಳದ ನಾಯಕ ಯುಧಿಷ್ಠಿರ ದಾಸ್, ಸಿ.ಪಿ.ಐ(ಎಂ) ಮುಖಂಡರಾದ ಸಂತೋಷ್‌ದಾಸ್, ತಪಸಿ ಪ್ರಹರಾಜ್, ಸಿ.ಪಿ.ಐ ನಾಯಕ ಸುರೇಂದ್ರನಾಥ್ ಜೇನಾ ಮೊದಲಾದವರಿದ್ದರು.



ಸೆಪ್ಟಂಬರ್ 16 :

ದಿಲ್ಲಿಯಲ್ಲಿ ಕೆಂಪು ಸಾಗರ

ಸೆಪ್ಟಂಬರ್ 16, 1998. ದೇಶದ ರಾಜಧಾನಿ ನವದೆಹಲಿಯ ರಾಮಲೀಲಾ ಮೈದಾನ ಕೆಂಬಾವುಟಗಳ ಸಾಗರವಾಯಿತು. ಅಭೂತಪೂರ್ವ ಬೆಲೆಯೇರಿಕೆಯ ವಿರುದ್ಧ ಜನರ ಬದುಕಿನ ಮೇಲೆ ಧಾಳಿಗಳ ವಿರುದ್ಧ ದೇಶದ ಆರ್ಥಿಕವನ್ನು ಒತ್ತೆಯಿಡುವುದರ ವಿರುದ್ಧ ಹಾಗೂ ದೇಶದ ಐಕ್ಯತೆಗೆ ಕೋಮುವಾದದ ಬೆದರಿಕೆಯ ವಿರುದ್ಧ ಸಿ.ಪಿ.ಐ.(ಎಂ) ಕರೆಯ ಮೇರೆಗೆ ನಡೆದ ಈ ಬೃಹತ್ ರ‍್ಯಾಲಿ ಬಿ.ಜೆ.ಪಿ ದುರಾಡಳಿತದ ವಿರುದ್ಧ ಹೋರಾಟವನ್ನು ತೀವ್ರಗೊಳಿಸಲು ಹಾಗೂ ಪಕ್ಷವನ್ನು ಬಲಿಷ್ಠಗೊಳಿಸಲು ದೃಢ ನಿರ್ಧಾರ ಮಾಡಿತು. ಹಲವಾರು ಪ್ರಮುಖ ಮುಖಂಡರು ಮಾತನಾಡಿದರು. ಕೊನೆಗೆ ಮಾತನಾಡಿದ ಸಿ.ಪಿ.ಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಬಿ.ಜೆ.ಪಿ.ಯನ್ನು ಅಧಿಕಾರದಿಂದ ಇಳಿಸಲು ಅವಿರತ ಹೋರಾಟ ನಡೆಸಬೇಕು ಎಂದು ಕರೆ ನೀಡಿದರು.

ಎಲ್ಲಾ ಭಾಷಣಗಾರರೂ ಬಿ.ಜೆ.ಪಿ. ಭಾರತದ ಅಂತಸ್ಸತ್ವಕ್ಕೆ ಒಡ್ಡಿರುವ ಅಗಾಧ ಅಪಾಯವನ್ನು ಎತ್ತಿ ತೋರಿಸುತ್ತಾ, ಈ ರ‍್ಯಾಲಿ ಉದಾರೀಕರಣದ ಧೋರಣೆಗಳ ವಿರುದ್ಧ, ಜೊತೆಗೇ ಬಿ.ಜೆ.ಪಿ.ಯ ಕೋಮುವಾದಿ ಪ್ರಚಾರದ ವಿರುದ್ಧ ಒಂದು ತೀವ್ರ ಸಮರದ ಆರಂಭ ಮಾತ್ರ ಎಂದರು. ಹಿಂದೆಂದೂ ಕಾಣದ ರೀತಿಯಲ್ಲಿ ದೇಶದ ಐಕ್ಯತೆಯನ್ನು ಅಪಾಯಕ್ಕೊಳಪಡಿಸಿರುವ ಬಿ.ಜೆ.ಪಿ.ಯ ರಾಜಕೀಯದಿಂದ ದೇಶವನ್ನು ಉಳಿಸುವ ಸಮರದಲ್ಲಿ ಮುಂಚೂಣಿಯಲ್ಲಿ ರುತ್ತದೆ ಎಂದು ನಿರ್ಧರಿಸಿತು. ಜೊತೆಗೆ ಬಿ.ಜೆ.ಪಿ. ಸರಕಾರದ ಆರ್ಥಿಕ ಧೋರಣೆಗಳ ವಿರುದ್ಧ, ಅಭೂತಪೂರ್ವ ಬೆಲೆಯೇರಿಕೆ ತಂದ, ದೇಶದ ಸಾರ್ವಭೌಮತೆಯನ್ನು ವಿದೇಶಿ ಬಂಡವಾಳಕ್ಕೆ ಒತ್ತೆಯಿಡುವ ಧೋರಣೆಗಳ ವಿರುದ್ಧ ಹೋರಾಟವನ್ನು ತೀವ್ರಗೊಳಿಸಲು ರ‍್ಯಾಲಿ ನಿರ್ಧರಿಸಿತು.

ಸುರ್ಜಿತ್‌ರವರಲ್ಲದೆ ಪೊಲಿಟ್ ಬ್ಯೂರೋ ಸದಸ್ಯರಾದ ಸೀತಾರಾಂ ಯೆಚೂರಿ, ಹಿರಿಯ ಮುಖಂಡೆ ಹಾಗೂ ಕೇಂದ್ರ ಸಮಿತಿ ಸದಸ್ಯೆ ಅಹಲ್ಯಾ ರಂಗ್ಣೇಕರ್, ತ್ರಿಪುರಾ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್, ಕೇಂದ್ರ ಕಾರ್ಯದರ್ಶಿ ಮಂಡಳಿ ಸದಸ್ಯ ಹನ್ನನ್ ಮೊಲ್ಲ, ಉತ್ತರ ಪ್ರದೇಶ ರಾಜ್ಯ ಕಾರ್ಯದರ್ಶಿ ರಾಮ್ ಸುಮೇರ್ ಯಾದವ್, ಬಿಹಾರದ ರಾಜ್ಯ ಕಾರ್ಯದರ್ಶಿ ಗಣೇಶ್ ಶಂಕರ್ ವಿದ್ಯಾರ್ಥಿ ಮತ್ತು ಮಧ್ಯಪ್ರದೇಶ ರಾಜ್ಯ ಕಾರ್ಯದರ್ಶಿ ಶೈಲೇಂದ್ರ ಶೈಲಿ ರ‍್ಯಾಲಿಯನ್ನುದ್ದೇಶಿಸಿ ಮಾತನಾಡಿದರು. ಹಿರಿಯ ಮುಖಂಡ ಸಮೀರ್ ಮುಖರ್ಜಿ ಅಧ್ಯಕ್ಷತೆ ವಹಿಸಿದ್ದರು. ಕೇಂದ್ರ ಸಮಿತಿ ಸದಸ್ಯ ಜೋಗೇಂದ್ರ ಶರ್ಮ ಕಲಾಪಗಳನ್ನು ನಿರ್ವಹಿಸಿದರು.

ಕೆಂಪು ಕೋಟೆಯ ಹಿಂದೆ ದೇಶದ ವಿವಿಧೆಡೆಗಳಿಂದ ಹಿಂದಿನ ದಿನವೇ ಬಂದ ಸಾವಿರಾರು ಮಂದಿಗೆ ನಿರ್ಮಿಸಿದ ಕ್ಯಾಂಪುಗಳಿಂದ ರಾಮಲೀಲ ಮೈದಾನದವರೆಗಿನ ಎಲ್ಲಾ ರಸ್ತೆ ಓಣಿಗಳು ಕೆಂಪು ಸಾಗರವಾಗಿಬಿಟ್ಟಿದ್ದವು. ಬೆಳಿಗ್ಗೆ 10 ಗಂಟೆಗೆ ಆರಂಭವಾದ ಮೆರವಣಿಗೆಯ ನೇತೃತ್ವವನ್ನು ಪೊಲಿಟ್‌ಬ್ಯೂರೋ ಸದಸ್ಯರುಗಳಾದ ಪ್ರಕಾಶ್ ಕಾರಟ್, ಸೀತಾರಾಂ ಯೆಚೂರಿ, ಎಸ್. ರಾಮಚಂದ್ರನ್ ಪಿಳ್ಳೆ ಮತ್ತಿತರರು ವಹಿಸಿದ್ದರು. ಮೆರವಣಿಗೆ ಮುಂದೆ ಸಾಗಿದಂತೆ ಜನಗಳ ಅನಂತ ಪ್ರವಾಹ ಹರಿದುಬಂದಂತೆ ಕಾಣುತ್ತಿತ್ತು. ದಿಲ್ಲಿ ಗೇಟ್ ಬಳಿ ಹರ್ಕಿಶನ್ ಸಿಂಗ್ ಸುರ್ಜಿತ್ ಮೆರವಣಿಗೆಯಲ್ಲಿ ಸೇರಿಕೊಂಡು ರಾಮಲೀಲಾ ಮೈದಾನದವರೆಗೂ ನಡೆದರು. ಪಕ್ಷದ ಬ್ಯಾನರ್ ಹಿಡಿದ ಕೆಂಪು ಸ್ವಯಂಸೇವಕರ ಹಿಂದೆ ನಡೆದ ವಿವಿಧ ರಾಜ್ಯಗಳ ಘಟಕಗಳ, ಅವುಗಳಲ್ಲಿ ಜಿಲ್ಲಾ ಘಟಕಗಳ ಬ್ಯಾನರುಗಳು, ಕೆಂಬಾವುಟಗಳು, ಕೋಮುವಾದ, ಬೆಲೆಯೇರಿಕೆಯ ವಿರುದ್ಧ ಉತ್ಸಾಹ ಭರಿತ ಘೋಷಣೆಗಳು - ಇವೆಲ್ಲಾ ಇತ್ತೀಚಿನ ದಿನಗಳಲ್ಲಿ ಇಲ್ಲಿ ಕಾಣಬರದಿದ್ದ ಉತ್ಸಾಹದ ವಾತಾವರಣವನ್ನು ಸೃಷ್ಟಿಸಿದ್ದವು.

ಮೊದಲಿಗೆ ಮಹಾರಾಷ್ಟ್ರದ 30 ರಲ್ಲಿ 27 ಜಿಲ್ಲೆಗಳಿಂದ ಬಂದಿದ್ದ ಕಾರ್ಮಿಕರು, ರೈತರು, ಬುಡಕಟ್ಟು ಜನಗಳು ತಮ್ಮ ಪಾರಂಪರಿಕ ಡೊಳ್ಳುಗಳೊಂದಿಗೆ ಮೆರವಣಿಗೆಯಲ್ಲಿ ಸಾಗಿದರು. ನಂತರ ಮಧ್ಯಪ್ರದೇಶ ತುಕಡಿ - ಅಲ್ಲಿಯ ಸಿ.ಪಿ.ಐ.(ಎಂ) ಶಾಸಕ ರಾಮ್ ಲಖನ್ ವರ್ಮಾರವರ ನೇತೃತ್ವದಲ್ಲಿ. ನಂತರದ ರಾಜಸ್ತಾನದ ದೊಡ್ಡ ತುಕಡಿ - ಉದಯಪುರದ ಬುಡಕಟ್ಟು ಜನರು ದೊಡ್ಡ ಸಂಖ್ಯೆಯಲ್ಲಿ ಬಂದಿದ್ದರು. ಜೊತೆಗೆ ಸಿಕಾರ್, ಗಂಗಾನಗರ್‌ಗಳ ರೈತರು, ಕೃಷಿಕೂಲಿಕಾರರು. ಅವರ ಹಿಂದೆ ಪಂಜಾಬ್ ಮತ್ತು ಹರ‍್ಯಾಣದ ಜೋರಾಗಿ ಘೋಷಣೆ ಕೂಗುತ್ತಾ ಸಾಗಿದ ತಂಡ. ನಂತರ ಹಿಮಾಚಲ ಪ್ರದೇಶ್, ಉತ್ತರ ಪ್ರದೇಶ್ ತಂಡಗಳು. ಬಿಹಾರದ ತಂಡಗಳು ಕ್ಯಾಂಪ್ ಬಿಡುವಷ್ಟರಲ್ಲಿ 12 ಗಂಟೆಯಾಗಿತ್ತು. ಮಧ್ಯಾಹ್ನ 1.30 ರ ವೇಳೆಗೆ ರಾಮಲೀಲ ಮೈದಾನ ಭರ್ತಿಯಾಗಿತ್ತು. ದೂರದ ಊರುಗಳಿಂದ ನಿದ್ರೆಗೆಟ್ಟು ರೈಲು, ಬಸ್ಸುಗಳಲ್ಲಿ ಬಂದು ಕ್ಯಾಂಪುಗಳಲ್ಲಿ ತಂಗಿದ್ದ ದಣಿವು ಕೂಡಾ ಮೆರವಣಿಗೆಕಾರರ ಮುಖದ ಮೇಲಿರಲಿಲ್ಲ. ಸುಡು ಬಿಸಿಲಿನಲ್ಲೂ ಅವರು ದೀರ್ಘ ಭಾಷಣಗಳನ್ನು ಕಿವಿಗೊಟ್ಟು ಆಲಿಸಿದರು.

ಮೊದಲು ಮಾತನಾಡಿದ ಮಧ್ಯ ಪ್ರದೇಶದ ರಾಜ್ಯ ಸಿ.ಪಿ.ಐ.(ಎಂ) ಕಾರ್ಯದರ್ಶಿ ಶೈಲೇಂದ್ರ ಶೈಲಿ ಬಿ.ಜೆ.ಪಿ. ಸಿದ್ಧಾಂತವನ್ನು ಗೇಲಿ ಮಾಡುತ್ತಾ ದೇಶವನ್ನು ಭಯ, ಭೂಖ್(ಹಸಿವು) ಮತ್ತು ಭ್ರಷ್ಟಾಚಾರದಿಂದ ಮುಕ್ತಗೊಳಿಸುತ್ತೇವೆಂದ ಈ ಪಕ್ಷ ಇದರಿಂದ ಮುಕ್ತಿ ಕೊಡಿಸಲಿಲ್ಲ ಮಾತ್ರವಲ್ಲ, ಅವನ್ನು ಹೆಚ್ಚಿಸಿದೆ, ನಂತರ ತನ್ನ ಬಲೆಯಲ್ಲಿ ತಾನೇ ಸಿಲುಕಿಕೊಂಡಿದೆ. ಅಧಿಕಾರದ ಹಸಿವು, ಅಧಿಕಾರ ಹೋಗುವುದೆಂಬ ಭಯ, ಅಧಿಕಾರದಲ್ಲಿರಲು ಭ್ರಷ್ಟಾಚಾರ-ಇವೀಗ ಅದರ ಮಂತ್ರವಾಗಿದೆ ಎಂದರು.

ಹನ್ನನ್ ಮುಲ್ಲ "ನೀವು ಎಲ್ಲೆಲ್ಲಿಂದ ದಿಲ್ಲಿಯವರೆಗೆ ಈ ಬಿ.ಜೆ.ಪಿ. ಸರಕಾರವನ್ನು ಅಧಿಕಾರದಿಂದಿಳಿಸಲು ಬಂದಿದ್ದೀರಿ. ನಿಮಗೆ ಯಶಸ್ಸು ದೊರೆಯುತ್ತದೆ ಎಂದು ಭರವಸೆ ನಾನು ಕೊಡುತ್ತೇನೆ" ಎಂದರು. ಈ ಸರಕಾರ ಒಂದು ನಿಮಿಷವೂ ಇರಬಾರದು ಎಂದ ಅವರು ಒಂದು ನೈಜ ಪರ್ಯಾಯಕ್ಕಾಗಿ ಹೋರಾಡಬೇಕು ಎಂದು ಕರೆ ನೀಡಿದರು.

ಈ ಬೃಹತ್ ರ‍್ಯಾಲಿಯ ಏಕೈಕ ಉದ್ದೇಶ ಬಿ.ಜೆ.ಪಿ. ಸರಕಾರಕ್ಕೆ ಎಚ್ಚರಿಕೆ ನೀಡುವುದು ಎಂದವರು ಸೀತಾರಾಂ ಯೆಚೂರಿ. 'ರಾಮರಾಜ್ಯದ' ಭರವಸೆ ಕೊಟ್ಟವರು 'ಬನಿಯಾ ರಾಜ್ಯ (ವ್ಯಾಪಾರೀ ರಾಜ್ಯ) ತಂದರು ಎಂದ ಅವರು ಬಿ.ಜೆ.ಪಿ. ಆಳ್ವಿಕೆಯಲ್ಲಿ ವ್ಯಾಪಾರಸ್ಥರಿಗೆ ಸುಗ್ಗಿಯೋ ಸುಗ್ಗಿ ಎಂದರು. ವ್ಯಾಪಾರಸ್ಥರು ಬಚ್ಚಿಟ್ಟ ಸರಕುಗಳನ್ನು ಹೊರತರುವಂತೆ ಜನ ಎಲ್ಲೆಡೆ ಆಂದೋಲನ ನಡೆಸಬೇಕು ಎಂದು ಅವರು ಕರೆ ನೀಡಿದರು.

ಅಹಲ್ಯಾ ರಂಗ್ಣೇಕರ್ 'ರಾಮಗಳ, ಜಯಗಳ, ಸಮತಾಗಳ, ಮಮತಾಗಳ ಈ ಕೂಟವನ್ನು' ಗೇಲಿ ಮಾಡುತ್ತಾ ಎಲ್ಲೆಡೆಗಳಿಂದ ದಿಲ್ಲಿಗೆ ಬಂದದ್ದು 'ಕೆಂಪು ಸೇನೆ' ಇದು ದೇಶಾದ್ಯಂತ ಹೋರಾಟಗಳ ಮುಂಚೂಣಿಯಲ್ಲಿರಬೇಕು ಎಂದರು. ಬಿಹಾರಕ್ಕೆ ಪ್ರವಾಹದ ನಷ್ಟಗಳನ್ನು ಅಂದಾಜು ಮಾಡಲು ಕೇಂದ್ರ ತಂಡ ಕಳಿಸಲಿಲ್ಲ, ಕೇಂದ್ರೀಯ ಸಹಾಯ ನೀಡಿಲ್ಲ ಎಂದು ಬಿಹಾರದ ಸಿ.ಪಿ.ಐ(ಎಂ) ಕಾರ್ಯದರ್ಶಿ ಗಣೇಶ್ ಶಂಕರ್ ವಿದ್ಯಾರ್ಥಿ ಹೇಳಿದರೆ, ಉತ್ತರ ಪ್ರದೇಶದ ಸರಕಾರ ನೆರೆ ಪರಿಹಾರ ಕೇಳಲೇ ಇಲ್ಲವೆಂದು ಸ್ವತಃ ಪ್ರಧಾನ ಮಂತ್ರಿಗಳೇ ಹೇಳಿದ್ದನ್ನು ಉತ್ತರ ಪ್ರದೇಶದ ರಾಜ್ಯ ಕಾರ್ಯದರ್ಶಿ ರಾಮ್ ಸುಮೇರ್ ಯಾದವ್ ನೆನಪಿಸಿದರು.

ಕೊನೆಗೆ ಮಾತನಾಡಿದ ಸುರ್ಜಿತ್‌ರವರು ಸ್ವಾತಂತ್ರ್ಯ, ಹೋರಾಟ ಮತ್ತು ಐವತ… ವರ್ಷಗಳ ಸ್ವಾತಂತ್ರ್ಯದ ಬಗ್ಗೆ ಹೇಳುತ… ಒಂದರ ಮೇಲೊಂದರಂತೆ ಬಂದ ಬೂರ್ಜ್ವಾ… ಸರಕಾರಗಳು ಯಾವುವೂ ಸ್ವಾತಂತ್ರ್ಯದ… ಕನಸುಗಳನ್ನು ನನಸಾಗಿಸಲಿಲ್ಲ ಎಂದರು… ಕೆಂಬಾವುಟ ಮಾತ್ರವೇ ನಿರಂತರವಾಗಿ… ಸ್ವಾತಂತ್ರ್ಯ, ನ್ಯಾಯ ಮತ್ತು ಸಮಾನತೆಯ… ಪ್ರತೀಕವಾಗಿದೆ. ರಾಷ್ಟ್ರೀಯ ಆಂದೋಲನದ… ಸ್ಫೂರ್ತಿಗೆ ವಿರುದ್ಧವಾದ ಸಿದ್ಧಾಂತ… ಹೊಂದಿರುವ ಬಿ.ಜೆ.ಪಿ. ರಾಜಕೀಯ… ದೇಶವನ್ನು ಹರಿದುಹಂಚಿ ಹಾಕುತ್ತದೆ ಎಂದು… ಎಚ್ಚರಿಸಿದ ಅವರು ದೇಶವಿಭಜನೆಯ… ದುಸ್ವಪ್ನವನ್ನು ನೆನಪಿಸಿದರು. ಆಗ ಕಂಡು… ಬಂದ ದ್ವೇಷ, ಹಿಂಸಾಚಾರ ಮತ್ತೆಂದು… ಕಾಣಬರದಿರಲಿ ಎಂದು ಆಶಿಸಿದ ಸುರ್ಜಿತ್… ಸಿ.ಪಿ.ಐ.(ಎಂ) ಪಕ್ಷ ಕಾಂಗ್ರೆಸ್ಸಿನ ಸರ್ವಾಧಿ… ಕಾರಶಾಹಿಯನ್ನು ಎದುರಿಸಿದೆ, ಈಗ… ಬಿ.ಜೆ.ಪಿ.ಯ ಕೋಮುವಾದದ ವಿರುದ್ಧ… ಹೋರಾಡಬೇಕಾಗಿದೆ ಎಂದರು. ಆದ್ದರಿಂದ… ಒಂದು ಮೂರನೇ ಪರ್ಯಾಯಕ್ಕಾ… ದುಡಿಯುವುದು ಅಗತ್ಯ. ಆದರೆ ಇದ… ಪಕ್ಷವನ್ನು ಬಲಿಷ್ಠಗೊಳಿಸುವುದು ನಮ್ಮ ಪರಮ… ಕರ್ತವ್ಯ ಎಂದ ಅವರು ಪಕ್ಷವನ್ನು ಕಟ್ಟು… ಕೆಲಸದ ಮೇಲೆ ಗಮನ ಕೇಂದ್ರೀಕರಿಸಬೇಕು… ಎಂದು ಕರೆ ನೀಡಿದರು. ಬಿಹಾರ, ಉತ್ತರ… ಪ್ರದೇಶ ಅಸ್ಸಾಂ, ಪಶ್ಚಿಮ ಬಂಗಾಳಗಳ… ಪ್ರವಾಹ ಪೀಡಿತರಿಗೆ ನೆರವಾಗಲು… ನಿಧಿಯೆತ್ತಲು ಕೂಡಾ ರ‍್ಯಾಲಿ ನಿರ್ಧರಿಸಿತು.



ಕೇಂದ್ರ ಸರ್ಕಾರದ ಬೆಲೆಏರಿಕೆ ಹಾಗೂ ಕೋಮುವಾದದ ವಿರುದ್ಧ ರಾಜ್ಯಾದ್ಯಂತ ವ್ಯಾಪಕ ಪ್ರತಿಭಟನೆ

ಹುಬ್ಬಳ್ಳಿ : ಬಿ.ಜೆ.ಪಿ. ನೇತೃತ್ವದ ಕೇಂದ್ರ ಸರ್ಕಾರ ನಿರಂತರವಾಗಿ ಅಡಿಗೆ ತೈಲ, ಆಹಾರ ಧಾನ್ಯಗಳು, ಅಂಚೆ, ರೈಲ್ವೇ ಇತರೆ ಜೀವನಾವಶ್ಯಕ ವಸ್ತುಗಳ ಬೆಲೆಗಳನ್ನು ಎಂದೂ ಕಾಣದಷ್ಟು ಏರಿಸಿ ಜನರ ಕಣ್ಣೀರ ಕೋಡಿ ಹರಿಸಿದೆ ಎಂದು ಸಿ.ಪಿ.ಐ.(ಎಂ)ನ ಧಾರವಾಡ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಸಿ.ಆರ್. ಭಟ್ ಹೇಳಿದರು.

ಹುಬಳ್ಳಿಯಲ್ಲಿ ನಡೆದ ಸಿ.ಪಿ.ಐ.(ಎಂ)ನ ಪ್ರತಿಭಟನಾ ಧರಣಿಯನ್ನುದ್ದೇಶಿಸಿ ಅವರು ಮಾತನಾಡುತ್ತಿದ್ದರು. ಧರಣಿಯಲ್ಲಿ ಜಿಲ್ಲಾ ಸಮಿತಿ ಸದಸ್ಯರಾದ ಆರ್.ಎಚ್. ಆಯಿ ಮತ್ತು ಹಕ್ಕಲಗೌಡ, ಸಿ.ಪಿ.ಐ.(ಎಂ) ಮುಖಂಡರಾದ ಎಂ.ಬಿ.ಕಟ್ಟಿ, ರವಿ, ಟಿ.ಎಸ್. ಪೂಜಾರ್, ಖಾನ್, ಗಡಾರ, ಕೃಷ್ಣ ಪ್ರಭು ಇಳಿಗೇರ, ಎ.ಆರ್. ಮುಲ್ಲಾ ಮುಂತಾದವರು ಭಾಗವಹಿಸಿದ್ದರು.

ಬೆಲೆಯೇರಿಕೆಯನ್ನು ತಡೆಗಟ್ಟಲು ಪ್ರಧಾನ ಮಂತ್ರಿಗಳನ್ನು ಆಗ್ರಹಿಸಿ ತಹಸೀಲ್ದಾರರಿಗೆ ಮನವಿ ಪತ್ರ ಸಲ್ಲಿಸಲಾಯಿತು.

ಬಿಜಾಪುರ : ಬೃಹತ್ ಮತಪ್ರದರ್ಶನ

ಕೇಂದ್ರ ಸರಕಾರದ ಆರ್ಥಿಕ ನೀತಿಯಿಂದಾಗಿ ದಿನಬಳಕೆಯ ವಸ್ತುಗಳ ಬೆಲೆಯೇರಿಕೆ, ಕಾರ್ಖಾನೆಗಳ ಮುಚ್ಚುವಿಕೆ, ನಿರುದ್ಯೋಗ ಹೆಚ್ಚಳದಿಂದಾಗಿ ಉಂಟಾಗುತ್ತಿರುವ ಕೆಟ್ಟ ಪರಿಣಾಮದ ಜೊತೆಯಲ್ಲಿಯೇ ದೇಶದ ಆರ್ಥಿಕತೆಯ ಮೇಲೆ ವಿದೇಶಿ ಬಂಡವಾಳದ ಆಕ್ರಮಣಗಳನ್ನು ವಿರೋಧಿಸಲು ಸಿ.ಪಿ.ಐ.(ಎಂ) ಪಕ್ಷ ಸೆ. 16 ರಂದು ದೆಹಲಿಯಲ್ಲಿ ಬೃಹತ್ ಮತಪ್ರದರ್ಶನ ನಡೆಸುತ್ತಿರುವಾಗಲೇ ಬಿಜಾಪುರದಲ್ಲಿಯೂ ಬಿ.ಜೆ.ಪಿ. ಸರಕಾರದ ಧೋರಣೆಯ ವಿರುದ್ಧ ಮತಪ್ರದರ್ಶನ ನಡೆಸಲಾಯಿತು. ಹೆಚ್ಚಿನ ಸಂಖ್ಯೆಯಲ್ಲಿದ್ದ ಮಹಿಳೆಯರನ್ನೊಳಗೊಂಡ ಮೆರವಣಿಗೆ, ಎ.ಪಿ.ಎಂ.ಸಿ. ಯಿಂದ ಹೊರಟು ಪ್ರಮುಖ ಬೀದಿಗಳಲ್ಲಿ ಹಾದು ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಮತಪ್ರದರ್ಶನ ನಡೆಸಿ ಮನವಿ ಅರ್ಪಿಸಲಾಯಿತು. ಎನ್.ಕೆ. ಉಪಾಧ್ಯಾಯ, ಭೀಮಸಿ ಕಲಾದಗಿ, ಅಣ್ಣಾ ರಾಯ ಇಳಿಗೇರ ಮೊದಲಾದವರು ಭಾಷಣ ಮಾಡಿ ಬಿ.ಜೆ.ಪಿ. ಸರಕಾರದ ಅಪಾಯಕಾರಿ ಧೋರಣೆಯನ್ನು, ಆರ್.ಎಸ್.ಎಸ್., ಭಜರಂಗದಳದವರೆಲ್ಲಾ ಅಯೋಧ್ಯೆಯಲ್ಲಿ ಇನ್ನೂ ಬಗೆಹರಿಯದಿರುವ ಸ್ಥಳದಲ್ಲೇ ರಾಮಮಂದಿರ ಕಟ್ಟಲು ನಿರ್ಧರಿಸಿರುವ ಹಿನ್ನೆಲೆಯಲ್ಲಿ ಉಂಟಾಗ ಬಹುದಾಗ ಮತೀಯ ಗಲಭೆಗಳ ಕುರಿತು ಎಚ್ಚರಿಕೆ ನೀಡಿ ಜನರಲ್ಲಿ ಜಾಗೃತಿ ಉಂಟು ಮಾಡಿ ಹೋರಾಟ ನಡೆಸಬೇಕೆಂದು ಕರೆಯಿತ್ತರು. ಟೆಲಿಫೋನ್, ವಿದ್ಯುತ್, ಪೋಸ್ಟ್, ರೈಲ್ವೇಗಳ ಬೆಲೆ ಹೆಚ್ಚಳವನ್ನು ಖಂಡಿಸಲಾಯಿತು. ಮನೆಯಿಲ್ಲದವರಿಗೆ ಮನೆ ಕೊಡಲು, ಒತ್ತಾಯಿಸಲಾಯಿತು.

ಮಂಗಳೂರು : ಬಿ.ಜೆ.ಪಿ. ನೇತೃತ್ವದ ಕೇಂದ್ರ ಸರಕಾರದ ಆರ್ಥಿಕ ನೀತಿಯು ದೇಶದ ಆರ್ಥಿಕತೆಯನ್ನು ವಿನಾಶದೆಡೆಗೆ ಕೊಂಡು ಹೋಗುತ್ತಿದ್ದು ಜನ ಸಾಮಾನ್ಯರ ಬದುಕು ಅಸಹನೀಯವಾಗಿದೆ ಎಂದು ಸಿ.ಪಿ.ಐ(ಎಂ) ರಾಜ್ಯ ಸಮಿತಿಯ ಸದಸ್ಯರಾದ ಸಿ. ನಂಜುಂಡಪ್ಪನವರು ಹೇಳಿದರು. ಅವರು ಸೆ. 16 ರಂದು ಮಂಗಳೂರಿನಲ್ಲಿ ಪಕ್ಷದ ಜಿಲ್ಲಾ ಮಟ್ಟದ ರ‍್ಯಾಲಿಯನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

ಸಿ.ಪಿ.ಐ.(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಬಿ. ಮಾಧವರವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ, ಮುಂಬಯಿ ಗಲಭೆಗಳ ಕುರಿತು ನ್ಯಾಯಮೂರ್ತಿ ಶ್ರೀಕೃಷ್ಣ ಆಯೋಗದ ವರದಿಯಲ್ಲಿ ತಪ್ಪಿತಸ್ಥರೆಂದು ತೋರಿಸಿರುವ ವ್ಯಕ್ತಿಗಳ ಮೇಲೆ ಕ್ರಮ ತೆಗೆದುಕೊಳ್ಳಲು ವಿಫಲವಾದ ಮಹಾರಾಷ್ಟ್ರ ಸರಕಾರಕ್ಕೆ ರಕ್ಷಣೆ ನೀಡುವ ಮೂಲಕ ಕೇಂದ್ರದ ಬಿ.ಜೆ.ಪಿ. ಸರಕಾರವು ತನ್ನ ಸಾಂವಿಧಾನಿಕ ಕರ್ತವ್ಯಕ್ಕೆ ತಿಲಾಂಜಲಿ ನೀಡಿದೆ ಎಂದರು. ಅನುಷ್ಠಾನ ನಿರ್ದೇಶನಾಲಯದ ನಿರ್ದೇಶಕ ಬೇಜ್‌ಬರುವಾರ ವರ್ಗಾವಣೆ, ಅಯೋಧ್ಯೆಯಲ್ಲಿ ಕಾನೂನು ಬಾಹಿರವಾಗಿ ಮಂದಿರಕಟ್ಟುವ ಸಿದ್ಧತೆ ಇವೆಲ್ಲವೂ ಕಾನೂನಿನ ಆಡಳಿತದಲ್ಲಿ ಈ ಸರಕಾರಕ್ಕೆ ವಿಶ್ವಾಸವಿಲ್ಲವೆನ್ನುವುದನ್ನು ತೋರಿಸುತ್ತದೆ ಎಂದು ಹೇಳುತ್ತಾ ಈ ಸರ್ಕಾರ ಮಹಿಳಾ ಮೀಸಲಾತಿ ಮಸೂದೆ ತರಲು ಸಿದ್ಧವಿಲ್ಲವೆಂದ ಅವರು ಜಾತ್ಯಾತೀತತೆಯನ್ನು ಎತ್ತಿ ಹಿಡಿಯಬೇಕೆಂದು ಕರೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಸಿ.ಪಿ.ಐ(ಎಂ) ರಾಜ್ಯ ಸಮಿತಿ ಸದಸ್ಯ ಅಬ್ರಹಾಂ ಕರ್ಕಡರು ಮಾತನಾಡುತ್ತಾ ದೊಡ್ಡ ಬಂಡವಾಳಗಾರರಿಂದ ಪೋಷಿಸಲ್ಪಡುತ್ತಿರುವ ಬಿ.ಜೆ.ಪಿ. ಸರಕಾರವು ಬೆಲೆ ಏರಿಕೆಯನ್ನು ತಡೆಗಟ್ಟುವ ಗೋಜಿಗೆ ಹೋಗುತ್ತಿಲ್ಲ ಎಂದರು.

ಆರಂಭದಲ್ಲಿ ಜಿಲ್ಲಾ ಸಮಿತಿ ಸದಸ್ಯರಾದ ಕೆ. ವಸಂತ ಆಚಾರಿಯವರು ಸ್ವಾಗತಿಸಿದರು. ಕೊನೆಯಲ್ಲಿ ಜಿಲ್ಲಾ ಸಮಿತಿ ಸದಸ್ಯ ಕೆ. ಯಾದವ ಶೆಟ್ಟಿ ಧನ್ಯವಾದ ಅರ್ಪಿಸಿದರು.

ತುಮಕೂರು : ತುಮಕೂರು ಜಿಲ್ಲಾ ಸಿ.ಪಿ.ಐ(ಎಂ) ಕಾರ್ಯಕರ್ತರು ನಗರದ ಟೌನ್‌ಹಾಲ್ ಮುಂಭಾಗದಿಂದ ಜಿಲ್ಲಾಧಿಕಾರಿಗಳ ಕಛೇರಿಯವರೆಗೆ ಮೆರವಣಿಗೆ ನಡೆಸಿದರು. ರಾಜ್ಯ ಸರ್ಕಾರ ಏರಿಸಿರುವ ವಿದ್ಯುಚ್ಛಕ್ತಿ ದರವನ್ನು ಈ ಕೂಡಲೇ ಹಿಂತೆಗೆದುಕೊಳ್ಳಬೇಕೆಂದು, ಬಾಗೂರು ನವಿಲೆ ಸಂತ್ರಸ್ತರೈತ ಕುಟುಂಬಗಳಿಗೆ ಪರಿಹಾರ ನೀಡಬೇಕೆಂದು ಒತ್ತಾಯಿಸಿದರು.

ಪ್ರತಿಭಟನಾಕಾರರನ್ನುದ್ದೇಶಿಸಿ ಸಿ.ಪಿ.ಐ(ಎಂ)ನ ಹಿರಿಯ ಮುಖಂಡರಾದ ದಸ್ತಗೀರ್‌ರವರು ಮಾತನಾಡಿ ಲಾಭಕೋರರಿಗೆ ಕಾಳಸಂತೆಕೋರರಿಗೆ ಬಿ.ಜೆ.ಪಿ. ಪರೋಕ್ಷವಾಗಿ ಸಹಾಯ ಮಾಡುತ್ತಿದೆ ಎಂದರು. ಜಿಲ್ಲಾ ಕಾರ್ಯದರ್ಶಿ ಬಿ. ಉಮೇಶ್ ಮಾತನಾಡಿ ದರು. ಅಂಗನವಾಡಿ ನೌಕರರ ಸಂಘದ ಅಲ್ಲಾಬಕಾಶ್, ಪ್ರತಿಭಟನಾ ಮೆರವಣಿಗೆಯಲ್ಲಿ ಎಸ್.ಎಫ್.ಐ.ನ ಡಿ. ಅಶೋಕ್ ಕುಮಾರ್ ಡಿ.ವೈ.ಎಫ್.ಐ.ನ ಅಪ್ಸರ, ಲಕ್ಷ್ಮೀಕಾಂತ್, ಸಿ.ಪಿ.ಐ(ಎಂ)ನ ಅಮಾನುಲ್ಲಾ ಬಾಷ, ರಾಬಿಯಾ ಹಾಗೂ ಬೀಡಿ ಕಾರ್ಮಿಕರ ಸಂಘದ ಅಹ್ಮದಿ ಖತೀಜಾಬಿ, ಸೈದಾನ ಬಿ ಜಯಮ್ಮ ಮುಂತಾದವರು ನೇತೃತ್ವ ವಹಿಸಿದ್ದರು. ಕಾರ್ಯಕ್ರಮದಲ್ಲಿ ಸುಮಾರು 200 ಜನ ಪಾಲ್ಗೊಂಡಿದ್ದರು.

ಕಾರವಾರ: ಡಿ.ಸಿ. ಆಫೀಸ್ ಎದುರು ಬಿ.ಜೆ.ಪಿ. ಸರಕಾರದ ಜನವಿರೋಧಿ ನೀತಿಯ ವಿರುದ್ಧ ತಾ|| 16-9-1998 ರಂದು ಸಿ.ಪಿ.ಐ.(ಎಂ) ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಪ್ರತಿಭಟನಾ ಮೆರವಣ… ನಡೆಸಲಾಯಿತು.

ಬಿ.ಜೆ.ಪಿ. ಸರಕಾರವು ಬೆಲೆ ಏರಿಕೆ… ಕುಮ್ಮಕ್ಕು ನೀಡುತ್ತಿದ್ದು ಕೋಟಿ ಉದ್ಯೋಗ… ಭರವಸೆ ಈಡೇರಿಸುವಲ್ಲಿ ವಿಫಲವಾಗಿ… ಸ್ವದೇಶಿ ಮಂತ್ರ ಹೇಳುತ್ತಾ ವಿದೇ… ಕಂಪನಿಗಳೊಂದಿಗೆ ಬಿ.ಜೆ.ಪಿ.ಯ ಶರಣಾಗ… ಶಿಕ್ಷಣವನ್ನು ಕೋಮುವಾದೀಕರ… ಗೊಳಿಸುತ್ತಿರುವ, ಖಾಸಗೀಕರಣ ಪ್ರಯ… ರೈತರಿಗೆ ನೀಡುತ್ತಿರುವ ಕಡಿಮೆ ವಿದ್ಯುತ್ ದರ… ವಿದ್ಯುತ್ ಪೂರೈಕೆ ಯೋಜನೆಯನ್ನು… ನಿಲ್ಲಿಸಬೇಕೆಂದು ರಾಜ್ಯ ಸರಕಾರಗಳಿಗೆ ಒತ್ತ… ಚುನಾಯಿತ ರಾಜ್ಯ ಸರಕಾರಗಳನ್ನು ವಜಾ… ಮಾಡುವ ಸನ್ನಾಹ ಇತ್ಯಾದಿಗಳ ವಿರು… ಪ್ರತಿಭಟನೆ ನಡೆಸಲಾಯಿತು.

ಜಿಲ್ಲಾ ಕಾರ್ಯದರ್ಶಿ ಎಲ್.ಎಸ್… ನಾಯ್ಕ, ಜಿಲ್ಲಾ ಸಮಿತಿ ಸದಸ್ಯರುಗಳ… ತಿಲಕಗೌಡ, ಸಿ.ಆರ್. ಶಾನಭಾಗ್, ರಾ… ಸಮಿತಿ ಸದಸ್ಯ ರಾದ ಶಾಂತಾರಾಮ್ ನಾ… ಮುಂತಾದವರು ಬಿ.ಜೆ.ಪಿ.ಯ ಜನ ವಿರೋ… ನೀತಿಯನ್ನು ಕಟುವಾಗಿ ಟೀ… ಮಾತನಾಡಿದರು. ಜಿ.ಎಲ್. ನಾಯ… ವಂದಿಸಿದರು. ಸಿ.ಆರ್. ಶಾನಭಾಗ್ ಸ್ವಾಗತಿ… ಪ್ರಾಸ್ತಾವಿಕವಾಗಿ ಮಾತನಾಡಿದರು. ಸುಭಾ… ಕೊಪ್ಪಿಕರ, ಮಂಜುನಾಥ ಫುಲಕರ, ಎಂ… ನಾಯ್ಕ, ಮಾಧವ ಶೇರಿಗಾರ, ಭೀಮರಾ… ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ದಾಂಡೇಲಿಯಿಂದ ನೂರಾರು ಸಿ.ಪಿ.… ಕಾರ್ಯಕರ್ತರು ಭಾಗವಹಿಸಿದ್ದರು. ಪ್ರತಿಭ… ರ‍್ಯಾಲಿಯಲ್ಲಿ ಒಟ್ಟು 500ಕ್ಕೂ ಹೆ… ಕಾರ್ಯಕರ್ತರು ಭಾಗವಹಿಸಿದ್ದರು.

Reg. No. 17015/64 KRNM/BGS-405 MAG (2) PRB DECR 319-79/79 AIKYARANGA WEEKLY

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಮುದ್ರಣ ಮತ್ತು ಪ್ರಕಾಶನ
ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ.2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee.